ಅಧ್ಯಕ್ಷರು.– ದಯವಿಟ್ಟು ಕೈಮುಗಿದು ಕೇಳಿಕೊಳ್ಳುತ್ತೇನೆ, ಒಂದು ಸಾರಿ ಹಾಡಿದ್ದನ್ನು ಮತ್ತೊಂದು ಸಾರಿ ಸುಪ್ಪಿ ಹಾಡುವುದಕ್ಕೆ ಹೋಗಬೇಡಿ ಆಗಲೇ ಹೇಳಿದ್ದೇನೆ, ಅದರ ಬಗ್ಗೆ ವಿಚಾರ ಮಾಡಿಸುತ್ತೇನೆ, ತಾವು ಹೇಳಿದ ತಕ್ಷಣ ಮಾಡುವಹಾಗಿಲ್ಲ, ಹಣಕಾಸಿನ ಮುಗ್ಗಟ್ಟು ಇದನ್ನೆಲ್ಲಾ ನೋಡಿಕೊಂಡು ಮಾಡ ಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮತ್ತೆ ಸರ್ಕಾರಕ್ಕೆ ಎಷ್ಟು ಸಾರಿ ಹೇಳು ವುದು, ಚುರುಕಾಗಿದ್ದು ಕೇಳಿ, ಕೆಲಸ ಮಾಡ್ರಿ ಎಂದರೆ ಕೇಳುವುದಿಲ್ಲ ಎಂದರೆ ಏನು ಮಾಡ್ಲಿ ?

## MOTION OF THANKS TO THE GOVERNOR'S ADDRESS (*Debate Contd.*)

SMT. SUMATHI MADIMAN (Dharwar Rwat).--Madam Speaker, I rise to support the motion of thanks to the Governor's speech and would like to say a few words concerning that.

First and foremost, I am pleased to state that re-naming Mysore State as Karnataka has been really a step in the integration of the people in all parts of Karnataka and has fulfilled the long awaited desire of the people.

2-30 P. M.

The next important step is the Land Reforms Bill which has received the assent of the President of India and will be implemented very shortly.

Every one is aware that seasonal hazards and its consequences face us every year. The feature is not new to India and has been there for ages. In some part or the other of the country, we hear there is drought or rivers it spate. This causes immense damage to property, crops and to human lives. Every State faced the situation of drought last year and bitter hardship followed. Thanks

(Smt. Sumathi Madiman)

to the steps taken by our Government and the programmes of development for the welfare of the people, much of the hardship was alleviated. The Opposition has pointed out the difficulties of the people as often as possible and in doing so they have urged the Government to solve the problem of repeated droughts. The impression created is that Government has not done much. The Prime Minister herself has tried her best to help the States and I say it with confidence that the Opposition probably forgot that the challenge thrown by mother nature is rather difficult to face by any one or any party however strong, it may be. That reminds me of the saying: Man proposes, God disposes! I would like to add : the Opposition opposes !

I feel that this drought and scarcity is a blessing in disguise, because for ages we have been depending for our existence on others, and still have not got out of that habit. We have been spoon-fed, and when the spoon is empty we have started wondering, 'what is wrong' This is a real eye-opener and we will learn to start things moving fast. How long can we depend on others? Our country and its people have faced challenges and grave problems that seem to have no solution. As you all know, necessity is the mother of invention, and it is during period of hardship that we face, we will try to solve the problem without looking up to some body else the reason being that all are sailing in the same boat. Food and oil problem is world wide. Western countries are facing much graver problems. Their very existence depends on oil and their life is almost at a stand still. Central heating in houses has stopped. Transport is almost at a stand still. It is not available. Offices work only for three days in a week and prices of food and essential commodities have shot up. If any thing, we are far better off. It is not as if, we are the only State in our country facing this problem. The only difference is, other people face challenges boldly and try to find a way to co-operate

with the Government, but we do not do so. We have to learn a lesson from them. Food shortage is the out come not only of hoarding and black-marketing, but population explosion. How many people in India think about it seriously? This is the greatest and gravest problem of our country. How many are interested in the progress of the Nation or the welfare of the people? Earning easy money has become the motto of the day. How many realise that they owe a duty to the country? If it were so, I do not see any merit in anybody hoarding foodgrains depriving their own people. We could have understood if it was foreign rule. But now our own people are at the helm of affairs and it is our duty to co-operate with the Government instead they are trying to by-pass and incite other people by exaggerating our problems. Everybody is ready to criticise Government policies, but they forget that they are part and parcel of it Everybody must know that it is only with the co-operation of the people that we will be able to face challenges.

I would like to say a word about Krishna waters which I think is very important. When I had occasion to visit Nagarjunasagar Konda, I beg to wonder if the whole of Krishna had been captured there. What I thought was that we have every right to claim our rightful share and it is high time we raised our voice on this matter.

Our plan for minor irrigation will surely be of help to the agriculturists in starting agricultural processing units of over the State and it will be a good sign which will be of immense benefit to the people.

The report of the dairy development approved by the World Bank will be another source of strengthening our agricultural economy.

(Smt. Sumathi Madiman)

Education, which is a MUST has been very well taken care of. Increase in the enrolment of children specially belonging to the S. C. and S. T. should have been done all these years, which the previous Government never thought of. You must know that we have a mind and we have a will to do and we are going to do it.

Water supply schemes essential for human beings have been adequately provided for not only in cities and urban areas, but also in rural areas.

Securing fast well-boring rigs is a sure sign which will benefit the villages.

Fisheries. forests, power, industrial development are all on the march of progress.

Before I conclude, I would like just to say a few words about the attrocites committed during the border agitation. Whoever may have done it, these illustrated men probably did not have anything right to do. I hope men will fight men with courage and fight with each other, rather than making women as their targets. I request men, if you want, fight and fight between yourselves; leave women aside because they are peace-loving and do not fight.

SRI M. S. KRISHNAN.—Woman is at the head of our Government.

SMT. SUMATHI MADIMAN.—Poor woman lone woman. She is agin a lone person here. What I would like to say is that the rights of women will have to be safeguarded and laws will have to be passed, if need be, saying that any insult to a woman will be severely punished. Then I think we will be safe in this country.

I once again repeat that with all the probolems facing us, our Government has really done a good job.

Let us move ahead with hope and confidence

I thank you Madam Speaker for giving me a few minutes to express whatever I had to. Thank you.

*ಶ್ರೀ ಬಾಪೂಗೌಡ ರಾಯಪ್ಪ (ಶಹಾಪುರ):—ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ಈ ಸದನದಲ್ಲಿ ರಾಜ್ಯಪಾಲರು ಮಂಡಿಸದೆ ಭಾಷಣದ ಮೇಲೆ ನಾನು ನನ್ನ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತಾ ನಾಲ್ಕು ಮಾತು ಗಳನ್ನು ಆಡುತ್ತೇನೆ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಜನತೆ ಹೆಚ್ಚಿನ ಪ್ರಮಾಣದಲ್ಲ ಆರ್ಥಿಕ ಮತ್ತು ಸಾಮಾಜಿಕ ಶೈಕ್ಷಣಿಕ ಬದಲಾವಣೆಗಳನ್ನು ನಿರೀಕ್ಷಣೆ ಮಾಡಿದ್ದರು. ಆದರೆ ರಾಜ್ಯಪಾಲರ ಭಾಷಣ ಕೇವಲ ಸಾಂಪ್ರದಾಯಿಕ ಭಾಷಣ ವಾಗಿ ಮುಂದಿನ ಆರ್ಥಿಕ ವರ್ಷದಲ್ಲಿ ವಿಶೇಷತರವಾದಂಥ ಮೂಲತಃ ಯಾವ ರೀತಿಯ ಬದಲಾವಣೆಗಳು ಕಂಡುಬರತಕ್ಕ ಸೂಚನೆಯನ್ನು ರಾಜ್ಯಪಾಲರು ಕೊಟ್ಟಿಲ್ಲ, ಕೇವಲ ಸರ್ಕಾರದ ವತಿಯಿಂದ ಬಂದಂಥ 4 ಸಾಂಪ್ರದಾಯಿಕ ವಿಷಯಗಳನ್ನು ರಾಜ್ಯದ ಪ್ರತಿಯೊಂದು ಕ್ಷೇತ್ರದಲ್ಲಿ ಸೂಚನೆ ಮಾಡತಕ್ಕ ಭಾಷಣ ರಾಜ್ಯಪಾಲರು ಮಾಡಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹಿಂದಿನ ವರ್ಷದ ಸರ್ಕಾರದವರು ರಾಜ್ಯದ ಜನತೆಯಲ್ಲಿ ಇದ್ದಂಥ ಆರ್ಥಿಕ ಅಂತರವನ್ನು ಶೈಕ್ಷಣಿಕ ಅಂತರವನ್ನು ಇನ್ನಿತರ ಅಂತರಗಳನ್ನು ಹೋಗಲಾಡಿಸತಕ್ಕ ಪ್ರಯತ್ನ ರಾಜ್ಯ ಸರ್ಕಾರ ಮಾಡಿದೆ ಎನ್ನತಕ್ಕಂಥ ಮಾತನ್ನು ಹೇಳಿರುವುದನ್ನು ನೋಡಿದರೆ ಇದು ಅತಿಶಯ ಮತ್ತು ವಿಷಾದಕರವಾಗುತ್ತದೆ. 1970 ರಿಂದ 1973-74ರ ವರೆಗೆ ಈ ಸರ್ಕಾರದವರು ಜನತೆಯ ಮುಂದೆ ಇಟ್ಟಂಥ ಕಾರ್ಯಕ್ರಮವನ್ನು ಆಶೆ ಅಕಾಂಕ್ಷೆಗಳಿಂದ, ನೀರಿಕ್ಷಣೆ ಮಾಡುತ್ತಿದ್ದೆವು ವಿಶೇಷವಾಗಿ ಬಡವರ ಹೆಸರಿನ ಮೇಲೆ ಬಂದಂಥ ಸರ್ಕಾರವು ಬಡತನ ಸುಮಾರು 5 ವರ್ಷಗಳಲ್ಲಿ ಈ ದೇಶದಿಂದ ಹೋಗುವುದು ಬಡವನಿಗೆ ಒಳ್ಳೆಯ ಮನೆ ಬಗ್ಗೆಯನ್ನು ಸಂಮೃದ್ಧಿಯಾದಂಥ ಜೀವನವನ್ನು ಕಲ್ಪಸಿಕೊಡತಕ್ಕ ಮಹತ್ತರವಾದ ಹೆಜ್ಜೆಯನ್ನು 5 ವರ್ಷದಲ್ಲಿ ಸರ್ಕಾರದವರು ಸಾಧಿಸುವರು ಎನ್ನುವ ಮನವರಿಕೆ ಮಾಡಿಸಿ, ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಸರ್ಕಾರವು 2 ವಷಗಳಲ್ಲಿ ಸಂಪೂರ್ಣವಾಗಿ ತಾವು ಕೊಟ್ಟಂಥ ವಚನಗಳನ್ನು ಈಡೇರಿಸುವುದರಲ್ಲಿ ವಿಫಲವಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿನ ಜನರಲ್ಲಿ 2 ವರ್ಷದ ಹಿಂದೆ ಏನು ಪರಿಸ್ಥಿತಿ ಇತ್ತು ಹಿಂದೆ ಇದ್ದ ಪರಿಸ್ಥಿತಿಯಲ್ಲಿ ಮೂಲತ: ಏನು ಬದಲಾವಣೆ ಯಾಗಿದೆಯೆಂದು ನೇರವಾಗಿ ವಿಮರ್ಶೆ ಮಾಡಿದರೆ ಅದಕ್ಕೆ ಉತ್ತರ ಸಿಕ್ಕುತ್ತಾ

(ಶ್ರೀ ಬಾಪೂಗೌಡ ರಾಯಪ್ಪ)

ಇಲ್ಲ. ಹಳ್ಳಿಯ ಜನರು ಇರತಕ್ಕಂಥ ಮನೆ, ಮಾಡತಕ್ಕ ಉದ್ಯೋಗ, ಜೀವಿಸ ತಕ್ಕ ರೀತಿ ಇವು ಇನ್ನಷ್ಟು ಹೆಚ್ಚು ಕಲ್ಮಷವಾಗಿದೆ. ಅಭಿವೃದ್ಧಿಯಾಗಿಲ್ಲ. ಕೇವಲ ಭಾಷಣಗಳಿಂದ ಮತ್ತು ಹೇಳಿಕೆಗಳಿಂದ ರಾಜ್ಯದ ಜನತೆಯ ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯಾಗಿದೆಯೆನ್ನುವ ಕಲ್ಪನೆ ಸರ್ಕಾರಕ್ಕಿದ್ದರೆ ಅದು ತಪ್ಪು. ಪ್ರಜಾಪ್ರಭುತ್ವದ ಬುನಾದಿಯ ಮೇಲೆ ನಿಂತಿರತಕ್ಕ ಈ ಸರ್ಕಾರದಿಂದ ಹೆಚ್ಚಿನ ತೊಂದರೆಗಳು, ಹೆಚ್ಚಿನ ಅಡಚಣೆಗಳು, ಕೊಟ್ಟಂಥ ವಚನಗಳು ತೀವ್ರವಾಗಿ ಈಡೇರಲಿಕ್ಕಿಲ್ಲ ಎನ್ನತಕ್ಕ ಅನುಮಾನಗಳು ಪ್ರಧಾನ ಮಂತ್ರಿಗಳಿಂದ ಹಿಡಿದು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳವರೆಗೂ ಕೂಡ ಬರತಕ್ಕಂಥ ಪ್ರಸಂಗ ಇವತ್ತು ಬಂದಿದೆ. ಯಾವ ಹುರುಪಿನಿಂದ, ಯಾವ ವಿಶ್ವಾಸದಿಂದ ತಾವು ಆಡಳಿತ ಸೂತ್ರವನ್ನು ಕೈಗೆ ತೆಗೆದುಕೊಂಡರೋ ಅದೇ ವಿಶ್ವಾಸ ಇವತ್ತು ಇಲ್ಲ, ಯಾವ ವಿಷಯದಲ್ಲೂ ಕೂಡ ಅಷ್ಟು ಶಕ್ತಿವುಳ್ಳವರಾಗಿಲ್ಲ, ಅಷ್ಟು ಧೈರ್ಯವುಳ್ಳವರಾಗಿಲ್ಲ. ನೀವು ಕೊಟ್ಟ ಹೇಳಿಕೆಗಳು ಟೊಳ್ಳು ಹೇಳಿಕೆಗಳು ಎಂದು ಜನಕ್ಕೆ ಈಗ ಮನವರಿಕೆಯಾಗಿದೆ. ಅದನ್ನು ಬಿಚ್ಚು ಮನಸ್ಸಿನಿಂದ ಹೇಳಲಿಕ್ಕೆ ತಯಾರಿಲ್ಲ. ಹೋದ ವರ್ಷ ಮತ್ತು ಈ ವರ್ಷ ಪ್ರಾರಂಭದಲ್ಲಿ ಮಳೆ ಚೆನ್ನಾಗಿ ಆಗಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಳೆ ಚೆನ್ನಾಗಿ ಆಗಿದೆ, ಬರ ಬರುತ್ತಾ ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾದ ಬೆಳೆ ಬಂತು. ಆದರೆ ಜೋಳಕ್ಕೆ ಕೆಟ್ಟ ಹುಳುಗಳು ಬಿದ್ದು ಇವತ್ತು ರೈತನಿಗೆ ಕೇವಲ ಒಂದಾಣೆಯಷ್ಟು ಕೂಡ ಮುಂಗಾರು ಬೆಳೆ ಬರಲಿಲ್ಲ. ತಮಗೆ ಹೇಳಬೇಕಾದರೆ ತೊಗರಿ, ಶೇಂಗಾ 14—15 ಆಣೆ ಭಾಗ ರೈತನ ಕೈಗೆ ಬಾರದೇ ಹೋಗಿದೆ. ಅದಾದ ನಂತರ ರಬಿ ಬೆಳೆಯಲ್ಲಿ ಖುಷ್ಕಿ ಪ್ರದೇಶದಲ್ಲಿ ಕ್ಯಾಷ್‌ಕ್ರಾಪ್ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ರಾಯಚೂರು ಮುಂತಾದ ಕಡೆ ಬೆಳೆ ಚೆನ್ನಾಗಿದೆ. ರಾಜ್ಯಪಾಲರು ವಿಶ್ವಾಸದಿಂದ ಹೆಚ್ಚಿನ ಮಳೆ ಬಂದು ಅನುಕೂಲವಾಗಿದೆಯೆಂದು ಹೇಳಿರುವುದರಲ್ಲಿ ಅಷ್ಟು ಅರ್ಥವಿಲ್ಲ. ಹೋದವರ್ಷ ಕ್ಷಾಮ ಪರಿಸ್ಥಿತಿ ಉಂಟಾದಾಗ ಸರ್ಕಾರದವರು ಹೇರಳವಾದ ಕೆಲಸಕಾರ್ಯಗಳನ್ನು ತೆಗೆದುಕೊಂಡು, ಜನರಿಗೆ ಅನುಕೂಲ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಳೆ ಬಂದರೆ ಹಸಿ ಬರ ಬರತಕ್ಕ ಪರಿಸ್ಥಿತಿ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ವ್ಯವಸಾಯ ಮಾಡುವ ವರ್ಗ ಇದನ್ನು ಅನುಭವಿಸುತ್ತಿದ್ದಾರೆ. ಹೋದವರ್ಷ ಕ್ಷಾಮ ಪರಿಸ್ಥಿತಿಯಲ್ಲಿ ಸಾಕಷ್ಟು ಕೆಲಸಗಳನ್ನು ಸರ್ಕಾರ ತೆಗೆದುಕೊಂಡಿದೆ ಎನ್ನುವ ಮಾತು ರಾಜ್ಯಪಾಲರ ಭಾಷಣದಲ್ಲಿದೆ ಉತ್ಪಾದನಾ ದೃಷ್ಟಿಯಿಂದ ಕೆಲಸ ತೆಗೆದುಕೊಂಡಿದ್ದಾರೆ. ಹೈದರಾಬಾದ್ ಕರ್ನಾಟಕದಲ್ಲಿ ಸುಮಾರು 9 ಲಕ್ಷ ನೀರಾವರಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಅದೇರೀತಿ ಸುಮಾರು 15 ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದು

ಕೊಂಡಿದ್ದಾರೆ. ಈ ಕೆಲಸಗಳೆನ್ನೆಲ್ಲಾ ತೆಗೆದುಕೊಂಡನಂತರ, ಇದಕ್ಕೆ ಎಷ್ಟು ಖರ್ಚಾಗಿದೆ ಎಂದು ನೋಡಿದರೆ, ಈ ಕೆಲಸಗಳು ಎಷ್ಟು ವರ್ಷಗಳಲ್ಲಿ ಮುಗಿದಾವು ಎನ್ನುವ ಅನುಮಾನ ಉಂಟಾಗಿದೆ. ಚಿಕ್ಕನೀರಾವರಿ ಯೋಜನೆಗಳಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ 9 ಕೋಟಿ ರೂಪಾಯಿಯಲ್ಲಿ 40....45 ಕೆಲಸಗಳನ್ನು ಸರ್ಕಾರದವರು ತೆಗೆದುಕೊಂಡರು. ಅದರಲ್ಲಿ ಕೇವಲ 26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರೆ ಮುಂದೆ 2-3 ವರ್ಷಗಳಲ್ಲಿ ಸರ್ಕಾರದವರು ಈ ಕೆಲಸಗಳನ್ನು ಸಂಪೂರ್ಣವಾಗಿ ಮಾಡದೇ ಹೋದರೆ ಇದುವರೆಗೂ ಖರ್ಚು ಮಾಡಿರುವ ಹಣ ನಿರರ್ಥಕವಾಗಿ ಹೋಗುತ್ತದೆ; ಪ್ರೊಡಕ್ಷನ್ ಆಗುವುದಿಲ್ಲ ಎನ್ನುವ ಮಾತನ್ನು ಮುಂದೆ ಬಡ್ಜೆಟ್ ಮಾಡುವ ಕಾಲಕ್ಕೆ ಇದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅದೇ ರೀತಿ ಹೈದರಾಬಾದ್ ಕರ್ನಾಟಕದಲ್ಲಿ ಬೆಂಡೆ ತೊರೆ ಇನ್ನಿತರ ಕಡೆಗಳ 16 ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ. ಲಕ್ಷಾವಧಿ ಕೆಲಸವಾಗಿದೆ. ಸಂಪೂರ್ಣವಾಗಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ 3....4 ತಿಂಗಳಿಂದ ಯಾವ ಕೆಲಸಗಳೂ ಆಗಿಲ್ಲ.

ಸರ್ಕಾರದವರು ಎಕಾನಮಿ ಮೇಜರ್ಸ್ ತೆಗೆದುಕೊಂಡಿರುವುದರಿಂದ ನಮ್ಮ ಭಾಗದಲ್ಲಿ ಆಗುವ ಕೆಲಸ ಈಗ ನಿಂತು ಹೋಗಿದೆ. ಮುಂದೆ ಆದರೂ ಎಷ್ಟರಮಟ್ಟಿಗೆ ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹಣ ಒದಗಿಸಲು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂದು ನೋಡಬೇಕಾಗಿದೆ. ಇನ್ನು ಕೃಷ್ಣ ಮೇಲ್ದಂಡೆ ಯೋಜನೆ ವಿಚಾರ ಹೇಳಬೇಕಾದರೆ ಕಲ್ಬುರ್ಗಿ ಜಿಲ್ಲೆಯ ಸುರಪೂರ್, ಜೀವರ್ಗಿ, ಸಿಂಧಿಗಿ, ಮತ್ತು ಇಂಡಿ ಭಾಗದಲ್ಲಿ ಕಾಲುವೆ ತೆಗೆಯುವ ಕೆಲಸವನ್ನು ಬರಗಾಲದ ಕಾಲದಲ್ಲಿ ಸರ್ಕಾರದವರು ತೆಗೆದುಕೊಂಡರು. ಕಲ್ಬುರ್ಗಿ ಜಿಲ್ಲೆಯಲ್ಲಿ 6-7 ಮೈಲಿ ಕಾಲುವೆಯನ್ನು ತೆಗೆದು ಈಗ ಕಳೆದು ಆರು ತಿಂಗಳಿಂದ ಯಾವುದೇ ರೀತಿಯ ಕೆಲಸ ಮಾಡಲಾರದೆ ನಿಂತು ಹೋಗಿದೆ. ನಾನು ಹೇಳತಕ್ಕದ್ದು ಇಷ್ಟೇ, ರೈತರು ಕಾಲುವೆ ಸಲುವಾಗಿ ಸ್ಥಳ ತೆಗೆದುಕೊಂಡಿದ್ದಾರೆ, ಅವರ ಹೊಲವನ್ನು ಕಳೆದುಕೊಂಡಿದ್ದಾರೆ, ಆದರೆ ಅವರಿಗೆ ಯಾವ ರೀತಿಯ ಪ್ರತಿಫಲವು ಕೂಡ ದೊರೆತಿಲ್ಲ. ಮುಂದಿನ ವರ್ಷ ಈ ಕೃಷ್ಣ ಮೇಲ್ದಂಡೆ ಯೋಜನೆಗೆ ಎಷ್ಟು ಹಣ ಇಡುತ್ತಾರೆ ಎಂದು ಕೇಳುತ್ತೇನೆ. ಒಂದು ವೇಳೆ 4 ಕೋಟಿ ರೂಪಾಯಿ ಅದಕ್ಕಾಗಿ ಇಟ್ಟರೆ ಅದರಲ್ಲಿ 2 ಕೋಟಿ ರೂಪಾಯಿ ತಾವು ಡಿವಿಜನ್ ಏನು ಕ್ರಿಯೇಟ್ ಮಾಡಿದ್ದೀರಾ, ಅಲ್ಲಿಯ ಅಧಿಕಾರಿಗಳ ಸಂಬಳಕ್ಕೆ ಹೋಗುತ್ತದೆ. ಆದ್ದರಿಂದ 1974—75ರಲ್ಲಿ ಕೃಷ್ಣ ಮೇಲ್ದಂಡೆಯ ಯೋಜನೆಯ ಕೆಲಸಕಾರ್ಯಗಳು ಯಾವ ರೀತಿಯಲ್ಲಿ ನಡೆಯಲಿಕ್ಕಿಲ್ಲವೆಂದು ನನಗೆ ಸ್ಪಷ್ಟವಾಗುತ್ತದೆ. ಮಾನ್ಯ ಚನ್ನಬಸಪ್ಪನವರು ಘೋರ್ಪಡೆಯವರು ಮತ್ತು ಮುಖ್ಯಮಂತ್ರಿಗಳು ಚಿಕ್ಕ ನೀರಾವರಿ ಯೋಜನೆಗಳು ದೊಡ್ಡ ನೀರಾವರಿ ಯೋಜನೆಗಳು

(ಶ್ರೀ ಬಾಪೂಗೌಡ ರಾಯಪ್ಪ)

ಮತ್ತು ಮೀಡಿಯಂ ನೀರಾವರಿ ಯೋಜನೆಗಳ ಕೆಲಸ ನಿಂದರಿಸಲಿಕ್ಕಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು ಕೂಡ ಈ ನೀರಾವರಿ ಯೋಜನೆಗಳ ಕೆಲಸ ಇವೊತ್ತು ನಿಂತುಹೋಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ರಾಜ್ಯದ ಆರ್ಥಿಕ ದೃಷ್ಟಿಯಿಂದ ಅತ್ಯಂತ ಅತ್ಯವಶ್ಯಕವಾದ ಯೋಜನೆಗಳ ಬಗ್ಗೆ ಸರ್ಕಾರದವರು ಅಲಕ್ಷ್ಯ ಮಾಡಲಿಕ್ಕೆ ಕಾರಣ ಏನು ಎಂದು ಅವರು ಸ್ಪಷ್ಟಮಾಡಬೇಕಾಗುತ್ತದೆ. ಹಿಂದಿನ ಪರಿಸ್ಥಿತಿ ನೋಡಬೇಕಾದರೆ ನಾವು ಹೊರಲಾರದಂಥ ಮಟ್ಟಿಗೆ ಧಾರಣೆಗಳು ಬರುತ್ತ ಇವೆ. ರೈತನು ಬೆಳೆಯುತಕ್ಕ ಬೆಳೆಗಾಗಲಿ ಭತ್ತಕ್ಕಾಗಲಿ, ಅಥವಾ ಇತರ ದವಸಧಾನ್ಯಗಳಿಗಾಗಲಿ ಕಡಿಮೆ ಬೆಲೆ ಕೊಡುತ್ತ ಇದ್ದೀರಿ. ರೈತನಿಂದ ಲೆವಿ ಮುಖಾಂತರ ಅವನು ಬೆಳೆದ ದವಸಧಾನ್ಯಗಳನ್ನು ತೆಗೆದುಕೊಂಡು ನಿಗಧಿ ಬೆಲೆ ಕೊಡುತ್ತ ಇದ್ದೀರಿ. ಆದರೆ ರೈತನಿಗೂ ಬೇಕಾದ ಸಿಮೆಂಟ್ ಆಗಲಿ, ಬಟ್ಟೆಯಾಗಲಿ, ಕಬ್ಬಿಣ ಆಗಲಿ, ಅವುಗಳ ಬೆಲೆ ತೀವ್ರ ಗತಿಯಿಂದ ಏರುತ್ತಿದೆ. ಹೋದ ವರ್ಷ ಒಂದು ಥೋತ್ರ 30—35 ರೂಪಾಯಿಗೆ ಸಿಗುತ್ತಿತ್ತು. ಈಗ 70—75 ರೂಪಾಯಿ ಕೊಟ್ಟರೂ ಸಿಗುವುದಿಲ್ಲ. ಕಂಟ್ರೋಲ್ ಮುಖಾಂತರ ಪಟ್ಟಣದಲ್ಲಿರುವ ಜನರಿಗೆ ಬಟ್ಟೆಗಳು ಸಿಗುತ್ತವೆಯೋ ಹೊರತು ಹಳ್ಳಿಯಲ್ಲಿರುವ ಜನರಿಗೆ ಸಿಗುವುದಿಲ್ಲ. ರೈತರಿಗೆ ಬೇಕಾದ ಬಟ್ಟೆ, ಸಿಮೆಂಟ್ ಮತ್ತು ಕಬ್ಬಿಣಕ್ಕೆ ಯಾವ ರೀತಿಯು ಕಂಟ್ರೋಲು ಇಲ್ಲ. ಆದರೆ ರೈತನು ಉತ್ಪಾದನೆ ಮಾಡುವ ಧಾನ್ಯಗಳನ್ನು ಲೆವಿ ಮುಖಾಂತರ ತೆಗೆದುಕೊಂಡು ಅದರ ಬೆಲೆಯನ್ನು ನಿಗಧಿ ಮಾಡಲು ಪ್ರಯತ್ನ ಮಾಡುತ್ತ ಇದ್ದೀರಿ. ಅದು ಸರಿಯಾದ ಪ್ರಯತ್ನ ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆ ದೃಷ್ಟಿಯಿಂದ ರೈತನಿಗೆ ಯಾವ ತರಹ ಅನುಕೂಲತೆಗಳು ಬೇಕೋ ಅವನ್ನು ಮಾಡಿ ಕೊಡದೆ ಹೆಚ್ಚಿನ ಪ್ರಮಾಣದಲ್ಲಿ ರೈತನ ಶಕ್ತಿಯನ್ನು ಕುಗ್ಗಿಸತಕ್ಕ ಪ್ರಯತ್ನ ಮಾಡುತ್ತಿದ್ದೀರಿ ಅದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತ ಇದೆ. 1973—74ರಲ್ಲಿ ಅಂಕಿ ಅಂಶಗಳನ್ನು ನೋಡಿದರೆ 3 ಲಕ್ಷ 50 ಸಾವಿರ ಜನರು ಉದ್ಯೋಗ ಬೇಕು ಎಂದು ಎಂಪ್ಲಾಯ್‌ಮೆಂಟ್ ಖಾತೆಯಲ್ಲಿ ನೊಂದಾವಣಿ ಮಾಡಿಸಿದ್ದಾರೆ. ಈ 3 ಲಕ್ಷ 50 ಸಾವಿರ ಜನರಿಗೆ ಕೆಲಸ ಬೇಕಾಗಿರುವಾಗ ನೀವು 50 ಸಾವಿರ ಜನರಿಗೆ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತ ಇದ್ದೀರಿ ವಿದ್ಯಾವಂತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತ ಇರುವಾಗ ಅವರ ಮುಖದ ಮೇಲೆ ಈ ರೀತಿ ಕೈ ಆಡಿಸುವ ಪ್ರಸಂಗ ಮಾತ್ರದಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಎಂ. ಎಸ್. ಇ. ಬಿ. ಅವರು 5 ಸಾವಿರ ಜನಕ್ಕೆ ಇಂಟರ್‌ವ್ಯೂ ಮಾಡಿದರು ? ಮೊನ್ನೆ ಇನ್ನು 3 ಸಾವಿರ ಹುಡುಗರಿಗೆ ಬೇರೆ ಇಂಟರ್‌ವ್ಯೂ ನಡೆಯುತ್ತ ಇದೆ. ಹೀಗೆ ಸುಮಾರು 8 ಸಾವಿರ

ಹುಡುಗರಿಗಾಗಿ ಕೇವಲ ಗುಲ್ಬರ್ಗ ಜಿಲ್ಲೆಯ ಒಂದರಲ್ಲಿಯೇ ಇಂಟರ್‌ವ್ಯೂ ನಡೆಯಿತು. ಪ್ರತಿಯೊಬ್ಬ ಹುಡುಗನು ಇಂಟರ್‌ವ್ಯೂ ಮಾಡಿಕೊಂಡು ಬರಬೇಕಾದರೆ 100 ರೂಪಾಯಿಯಿಂದ 200 ರೂಪಾಯಿ ಅವರಿಗೆ ಖರ್ಚುಮಾಡುತ್ತಾರೆ. ಇಷ್ಟು ಖರ್ಚು ಮಾಡಿದರೂ ಕೂಡ ಅವನಿಗೆ ನೌಕರಿ ಸಿಕ್ಕುತ್ತದೆ ಎನ್ನುವ ಆಸೆ ಇಲ್ಲ. ಈ ರೀತಿ ಹುಡುಗರಿಗೆ ಆಗುವ ಹರಾಸಿಮೆಂಟ್ ಅನ್ನು ತಪ್ಪಿಸಬೇಕು. 3 ಲಕ್ಷ 50 ಸಾವಿರ ಜನರಿಗೆ ಕೆಲಸ ಕೊಡತಕ್ಕ ವಿಚಾರ ಮಾಡಬೇಕೇ ವಿನಹ ಕೇವಲ 50 ಸಾವಿರ ಜನರಿಗೆ ಕೆಲಸ ಕೊಟ್ಟರೆ ಅದರಿಂದ ಈ ಪ್ರಶ್ನೆ ಪರಿಹರಿಸಿದಂತಾಗುವುದಿಲ್ಲ. ಆದ್ದರಿಂದ ಈ 50 ಸಾವಿರ ಜನರಿಗೆ ತಾತ್ಪೂರ್ತಿಕ ರೀತಿಯಲ್ಲಿ ಒಂದು ವರ್ಷ ಟ್ರೈನಿಂಗ್ ಕೊಡುವಂಥ ಪ್ರಯತ್ನ ಏನು ಮಾಡಿದ್ದೀರಿ ಅದರಿಂದ ಜನರಲ್ಲಿ ಅಶಾಂತವಾದುದು ಹೆಚ್ಚಾಗುತ್ತಿದೆಯೇ ವಿನಹ ಕಡಿಮೆಯಾಗುವುದಿಲ್ಲ. ಮತ್ತು ಜನರಲ್ಲಿ ನೆಮ್ಮದಿಯಾಗುವುದಿಲ್ಲ. ಈ ದೃಷ್ಟಿಯಿಂದ ಜನರಿಗೆ ಹೆಚ್ಚಿನ ಕೆಲಸ ಒದಗಿಸಬೇಕು ಎಂದು ಹೇಳುತ್ತೇನೆ.

ಇನ್ನು ಗುಲ್ಬರ್ಗ ಭಾಗದಲ್ಲಿ ಸುಮಾರು 17 ಕೋಟಿ ರೂಪಾಯಿ ಕ್ಷಾಮ ಪರಿಹಾರ ಕೆಲಸ ಕಾರ್ಯಗಳನ್ನು ಸರ್ಕಾರದವರು ತೆಗೆದುಕೊಂಡರೆ ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಈ 17 ಕೋಟಿ ರೂಪಾಯಿ ಕೆಲಸಗಳಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚು ಹಣ ಇವೊತ್ತು ಪೋಲಾಗಿದೆ ಎಂದು ಹೇಳಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಹಾಸನ ಪ್ರಕರಣ ಹೇಳುವುದಿಲ್ಲ, ಈ ಗುಲ್ಬರ್ಗದಲ್ಲಿ ಖರ್ಚು ಮಾಡಿದ 17 ಲಕ್ಷ ರೂಪಾಯಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹಣ ಪೋಲಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವವನಿದ್ದೇನೆ. ಮಾನ್ಯ ದೇವೇಗೌಡರು ಗುಲ್ಬರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಾಗ ಅಲ್ಲಿ ಹೇರಳವಾಗಿ ಜನರು ಬಂದು ಇಂಥಿಂಥ ಭಾಗದಲ್ಲಿ ಹಣ ಪೋಲಾಗಿದೆ ಎಂದು ಹೇಳಿದ್ದರು. ತಾವು 63 ಕೋಟಿ ರೂಪಾಯಿ ಈ ಕ್ಷಾಮ ನಿವಾರಣೆ ಸಲುವಾಗಿ ಏನು ಖರ್ಚು ಮಾಡಿದ್ದೀರಿ ಅದರಿಂದ ಜನರಿಗೆ ಸರಿಯಾದ ಉಪಯೋಗವಾಗಿದೆಯೇ ಇಲ್ಲವೇ ಎನ್ನುವ ಬಗ್ಗೆ ತಮಗೆ ಸಮಾಧಾನವಾಗಬೇಕಾದರೆ ತಾವು ಒಂದು ಕಮಿಷನ್ ನೇಮಿಸಿ ಅದರ ಮೂಲಕ ಸಮಾಧಾನಪಡಿಸಿಕೊಳ್ಳಬೇಕು. ಜನತೆಯ ಸಲುವಾಗಿ ಖರ್ಚು ಮಾಡಿದ ಹಣ ಜನತೆಗೆ ಹಿತವಾಗಲಾರದೆ ಕೇವಲ ಒಂದು ವರ್ಗಕ್ಕೆ ಹಣ ಸೇರಿ ಕೆಲವು ಜನರಿಗೆ ಅನುಕೂಲ ಆಗುವ ಪ್ರಸಂಗವಾಗಿದೆ. ನಾನು ಎಷ್ಟೋ ಅಧಿಕಾರಿಗಳು ಮೂರು ತಿಂಗಳಲ್ಲಿ ಮನೆಯನ್ನು ಕಟ್ಟಿಸಿಕೊಂಡಿರುವುದು ಅಥವಾ ಕಾರು ತೆಗೆದುಕೊಂಡು ಇರುವುದನ್ನು ನೋಡಿದ್ದೇನೆ. ಆದುದರಿಂದ ಈ 63 ಕೋಟಿ ರೂಪಾಯಿ ಎಲ್ಲೆಲ್ಲ ಖರ್ಚಾಗಿದೆ ಅದು ಯಾವ ರೀತಿ ಖರ್ಚು ಆಗಿದೆ ಅದರಿಂದ ಒಟ್ಟು ಕೆಲಸ ಎಷ್ಟು ಮುಗಿಸಿದ್ದಾರೆ. ವಾಟರ್ ಟ್ಯಾಂಕುಗಳನ್ನು ಕೊಂಡುಕೊಂಡು ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ಎಲ್ಲ

(ಶ್ರೀ ಬಾಪೂಗೌಡ ರಾಯಪ್ಪ)

ಪರೀಕ್ಷಿಸಿ ಸಮಾಧಾನ ಮಾಡಿಕೊಳ್ಳಲು ಒಂದು ಪ್ರತ್ಯೇಕವಾದಂಥ ಯಂತ್ರವನ್ನು ಹುಟ್ಟಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಹೇಳುತ್ತೇನೆ.

ರಾಜ್ಯಪಾಲರು ಮಾಡಿದಂಥ ಭಾಷಣ ಔಪಚಾರಿಕ ಭಾಷಣ. ಇದು ದೇಶದ ಆರ್ಥಿಕ ದೃಷ್ಟಿಯಿಂದ ಮತ್ತು ಸಾಮಾಜಿಕ ದೃಷ್ಟಿಯಿಂದ ಯಾರಿಗೂ ತೃಪ್ತಿ ಉಂಟುಮಾಡುವುದಿಲ್ಲ. ಸರ್ಕಾರದವರು ಮುಂದೆ ಯಾವ ರೀತಿ ಕೆಲಸಕಾರ್ಯಗಳನ್ನು ಮಾಡುತ್ತಾರೆ ಎಂದು ಜನರಿಗೆ ಆಶ್ವಾಸನೆ ಕೊಟ್ಟಿದ್ದರೋ ಆ ಆಶ್ವಾಸನೆ ಈಡೇರಿಸುವುದರಲ್ಲಿ ವಿಫರಾಗುತ್ತಾರೆ ಎನ್ನುವ ಎಚ್ಚರಿಕೆಯನ್ನು ಕೊಟ್ಟು ಅಧ್ಯಕ್ಷರು ನನಗೆ ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-00 P. M.

‡SRI A. M. BELLIAPPA (Mercara).—Madam Speaker, at the outset I thank you for having given me this opportunity to participate in this discussion. Two years ago our party was noted into power by the people with the fond hope that we will fulfil the promises that we had given to them at the time of the elections. During the last four or five day's discussion we find that there is lot of criticism from our friends in the opposition to the effect that we have not fulfilled the pledges that we made to the people, namely, we did not remove poverty. I would request them to consider whether it is possible to eradicate poverty in a day or two. I do not think we have got any magin wand or Alladin's wonderful lamp to remove this poverty in a day or two. We have taken up several projects. One of them is Land Reforms. In the course of one and a half years we passed that Act. For 25 years it was not done. On the 1st of March this year the Act has come into force. Could we not see that about five lakh tenants have become owners? Is it not a way towards the removal of poverty.

*Mr. Deputy Speaker in the chair.*

Secondly, take the People's Housing Scheme. Which Government has started such a scheme, I am asking my friends in the opposition. No Government has started such a scheme to house the people who have not been housed all these years. As a result of this scheme, so many people are getting houses. I may tell my friends in the opposition with due respect that this is one way of removing poverty or to improve the living conditions of the poor peoples of this State.

Thirdly, there are the rural communication roads. Within a few days after we assumed power in this State, our Hon. Minister for Public Works has taken up this scheme. In each taluk about 50 miles of road has been taken up now and assurance has been given by him that next year they are going to asphalt and metal these roads and improve them. I have recommended about 11 roads in my district and those roads are in villages which are away from the district head quarters. These villagers for years and years have been carrying their articles on head. Is it not, I respectfully ask my friends, one way of improving the living conditions of the people ?

I have been hearing lot of criticism with regard to the budget that the Central Government has presented very recently. Two and a half years ago our friends in the opposition on floor of the Parliament praised Srimathi Indira Gandhi and said she was Durga Devi and that she was everything. They should realised where from this money to fight the Bangla Desh war came. They should also realise wherefrom we got the money to spend to maintain a crore of people as refugees. They should also realise wherefrom we got the money to feed one lakh of P. O. Ws all these 2½ years. Wherefrom can we get all this money unless we tax the people ? So my respectful submission to my friends in the Opposition is that there is not meaning in their criticising the Government. As Srimathi Mudiman said, they must also give a helping hand to solve this problem and mere criticism will not

(Sri A. M. Belliappa)

help. It is no use saying we have not done this or that. They must realise that we have taken up several schemes and projects to solve the problems of the people.

In Gujarath, there have been riots and agitations. My submission is that all these riots and agitations are on account of reactionary and communal forces. They thought that we would be digging our grave yard in U. P. and Orissa but it has turned out to be otherwise. Now, we find that it was not the grave yard of the Congress but was on the other hand, a spring board for action.

Coming to the Governor's Address, under the head 'Forest', I wish to submit a few words because the Hon. Chief Minister is here. I expected the Hon. Forest Minister also to be here so that could bring to his notice the difficulties experienced by the forest dwellers. It is a happy thing to note that the forest revenues have continued to rise. I come from the district of Coorg and I am happy to say that since the last two years the smuggling of timber has gone down very much there. Formerly it was very much rampant. It may be that on account of the efficient administration in the Forest Department smuggling in rose wood and sandal wood has come down. I have also got the highest appreciation for the officers of the Forest Department. They are doing their job very well. The forest dwellers number about 400 or 500 in the district of Coorg and especially in a place called Kilamatti in Virajpet Taluk these people have been on forest lands since the last 50 years. They have been occupying these lands and constructing their houses also. They are not encroachers. They were invited by the erstwhile Coorg Government for working in the forest because at that time we understand there were no labourers to work in those forests. So, for the last 50 years or so they have been in occupation of these lands and have produced income for the country and for themselves.

With utmost respect to the Government and to the Chief Minister and to the Minister for Forests, I must state that for the last one year's attempts have been made and orders have been issued to remove these persons and it is impossible to bear the sorrowful state of affair of these persons. There are instances where elephants have been taken and houses have been damaged and it is a sight which one cannot see. Therefore, my submission is this : let this question be considered on a humanitarian aspect and shelter is given to these people. I understand the argument of the Government that we have only 13% forest area in our State as against the national average of 30% and therefore they want to remove these people. But my submission is; let not these people be removed. These people are already there for over a number of years and they have already occupied the area. We appreciate the anxiety of the Government that there should be more forests. For that I suggest that the Government may not allow in future for people to occupy forests. I request the Minister to consider this aspect and give them shelter and allow them to continue.

With regard to electricity, my district is a small district but a very rich district. We are giving a lot of foreign exchange and we also pay a lot of money to the State exchequer. Unfortunately, if the power consumption of my district is taken, it can be seen that only 30 or 35 villages have been electrified. Therefore I request the Government that at least during this year some consideration to our district is given and electricity provided to more people in our district.

Lastly I wish to speak about irrigation. We are a surplus paddy growing district. If some amount is invested on minor irrigation works, we can grow more paddy. There are a number of small streams and rivers over which if we put small bunds, we can double the paddy growing area. My respecful submission is, please don't construct high level tanks. I am told investiga-

(SRI A. M. BELLIAPPA)

tions are going on to find out the fesilibility of constructing a 71 feet dam across Cauvery in a place called Hosapatna under a co-operative scheme. My submission is, we apprehend that Coorg which is a pioneer district in the entire State which produces coffee-about 40 per cent we are producing in India and the entire coffee may not be there after a few years on account of construction of this project. So, I request the Hon. minister to consider this aspect. The people of my district are opposed to this and we are afraid with the construction of this project the very identity of our district may be wiped out. I request the Government to kindly consider this point and consider this problem with a humanitarian approach.

I thank you for giving me this opportunity to speak. Jai Hind.

MR. DEPUTY SPEAKER : I feel extremely happy and jubilant when the Hon. member said 'Jai Hind'. Under the rules exclamations are not allowed. I have to observe the rules.

SRI A. M. BELLIAPPA : Excuse me.

‡ ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ) : ಮಾನ್ಯ ಅಧ್ಯಕ್ಷರೇ : ನಾನು ಈ ಹೊತ್ತಿನ ದಿವಸ ಮಾನ್ಯ ಗೌರ್ನರ್ ಅವರು ಜಂಟೀ ಶಾಸನ ಸಭೆಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಬಗ್ಗೆ ಮಂಡಿಸಿರತಕ್ಕ ವಂದನಾರ್ಪಣೆಯ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತಾ ಈ ಸಭೆಯ ಮುಂದೆ ಕೆಲವು ವಿಷಯಗಳನ್ನು ಇಡುವುದಕ್ಕ ಅಪೇಕ್ಷಿಸುತ್ತೇನೆ.

ಮಾನ್ಯ ಗೌರ್ನರ್ ಅವರು ತಮ್ಮ ಭಾಷಣದಲ್ಲಿ ಲಾ ಅಂಡ್ ಆರ್ಡರ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅಷ್ಟೇ ಅಲ್ಲದೆ ರಾಜ್ಯದ ಬಾರ್ಡರ್ ವಿಚಾರದಲ್ಲೂ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ಆ ಬಾರ್ಡರ್ ಗೊಂದಲದಲ್ಲಿ ನೊಂದ ಜನರಿಗೆ ಪರಿಹಾರವನ್ನೂ ಕೂಡಾ ಕೊಡಲಾಗಿದೆ. ಆದರೆ ನಮ್ಮ ಭಾರತದಲ್ಲಿ ಜನತೆಯ ನೆಮ್ಮದಿ—ಶಾಂತಿ ಸೌಹಾರ್ದತೆಗಳು ಕದಡುವುದಕ್ಕೆ ಅನೇಕ ಕಾರಣ

ಗಳಿವೆ. ಅವುಗಳಲ್ಲಿ ಭಾಷೆಯೂ ಕೂಡ ಒಂದಾಗಿದೆ. ಆದರೆ ನಮ್ಮ ಮುಖ್ಯ ಮಂತ್ರಿಗಳು ಮೊನ್ನೆ ಇದೇ ಸಭೆಯಲ್ಲಿ ಅಪ್ಪಣೆ ಕೊಡಿಸಿದಂತೆ ಈ ಭಾಷಾ ವೈಷಮ್ಯಕ್ಕಿಂತಲೂ ಜಾತಿ ವೈರತ್ವ ವೈಶಮ್ಯಗಳು ಬಹಳ ಕೆಟ್ಟ ಪರಿಣಾಮಗಳನ್ನು ಉಂಟು ಮಾಡತಕ್ಕದ್ದಾಗಿದೆ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಬಾರ್ಡರ್ ಇಷ್ಯೂಕ್ಕಿಂತ ಈ ಕಮ್ಯುನಲ್ ವೈರತ್ವ ಬಹಳ ತೀವ್ರವಾದದ್ದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಸರ್ಕಾರದವರು ಇತ್ತ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅತ್ಯಗತ್ಯ. ಇಲ್ಲದಿದ್ದರೆ ರಾಜ್ಯಗಳಲ್ಲಿರತಕ್ಕ ಮೈನಾರ್ಟಿ ಕೋಮುಗಳಿಗೆ ಬಹಳ ಕಿರುಕುಳ ತೊಂದರೆಗಳಾಗುತ್ತವೆ. ಈ ಬಗ್ಗೆ ಪೋಲೀಸರೂ ಕೂಡಾ ಸರಿಯಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಇದೇ ಸಂಬಂಧದಲ್ಲಿ ನನ್ನ ಕ್ಷೇತ್ರದಲ್ಲೂ ಮತ್ತು ಮೈಸೂರು ನಗರದಲ್ಲಿ ಕೂಡಾ ನಮ್ಮ ಕೋಮಿನ ವಿದ್ಯಾರ್ಥಿಗಳು ಬಹಳ ತೊಂದರೆಯನ್ನು ಅನುಭವಿಸಿದ್ದಾರೆ. ಈ ಜಾತಿಗಳ ಗೊಂದಲ ಬಹಳ ಕೆಟ್ಟದ್ದು.

ದಾಳಿ ಮಾಡಿದಾಗ ಕೆಲವರಿಗೆ ಗಾಯವಾಗಿದೆ, ಆಸ್ತಿಗೆ ಹಾನಿಯಾಗಿದೆ, ಕೆಲವು ಹಾಸ್ಟಲುಗಳಲ್ಲಿದ್ದವರು ಅದನ್ನು ಬಿಟ್ಟು ಹೋಗುವ ಸಂದರ್ಭ ಉಂಟಾಗಿದೆ, ಇದರ ಬಗ್ಗೆ ಗಮನ ಕೊಟ್ಟು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸಕಾಲದಲ್ಲಿ ಸಹಾಯ ಮಾಡಬೇಕು. ಚಾಮರಾಜನಗರದ ಒಂದು ವಿಷಯ ಹೇಳುವುದಾದರೆ ಹಿಂದುಳಿದ ವರ್ಗದವರಿಗೆ ಪೋಲೀಸು, ನ್ಯಾಯಾಂಗ, ರೆವಿನ್ಯೂ ಮುಂತಾದ ಇಲಾಖೆಗಳಲ್ಲಿ ನೌಕರಿ ದೊರೆತಿಲ್ಲ, ಕೇವಲ ಕಡಮೆ ಜನರಿಗೆ ದೊರೆತಿರಬಹುದು. ಇದರಿಂದ ಜನರಿಗೆ ನಂಬಿಕೆ ಕಡಮೆಯಾಗುವುದು. ಹಿಂದುಳಿದ ಜನರಿಗೆ ಸಾಕಷ್ಟು ನೌಕರಿಗಳು ಈ ಇಲಾಖೆಗಳಲ್ಲಿ ದೊರೆತರೆ ತಮ್ಮ ಜನರ ರಕ್ಷಣೆಯಾಗುವುದು ಎಂಬ ವಿಶ್ವಾಸವುಂಟಾಗುವುದು. ಎಷ್ಟೋ ಸಂದರ್ಭಗಳಲ್ಲಿ ಹಿಂದುಳಿದವರಿಗೆ ಪೋಲೀಸರು ಮುಂತಾದವರು ಸಕಾಲದಲ್ಲಿ ಸೂಕ್ತ ರಕ್ಷಣೆ ನೀಡುವುದಿಲ್ಲ. ಹಾಗೆ ತೆಗೆದುಕೊಳ್ಳದಿರುವಾಗ ಹಾನಿ ಹೆಚ್ಚಾಗಬಹುದು. ಉದಾಹರಣೆಗೆ ಚಾಮರಾಜನಗರದಲ್ಲಿ ಹರಿಜನರ ಹಾಸ್ಟಲಿಗೆ ಕಲ್ಲು ಹೊಡೆದಿರುವ ಸಂದರ್ಭವಿದೆ. ಮೈಸೂರು ಮತ್ತು ಬೆಂಗಳೂರುಗಳಲ್ಲೂ ಹೀಗೇ ಆಗಿದೆ. ಸರಕಾರದವರು ಸೂಕ್ತ ಕಾಲದಲ್ಲಿ ಕ್ರಮ ತೆಗೆದುಕೊಂಡಿದ್ದರೆ ಇಂಥ ಸನ್ನಿವೇಶಕ್ಕೆ ಅವಕಾಶವಿರುತ್ತಿರಲಿಲ್ಲ. ಬೇರೆ ವಿದ್ಯಾರ್ಥಿಗಳು ಹರಿಜನರ ಹಾಸ್ಟಲಿನಿಂದ ಮುಂದೆ ಹೋಗಿ ಮತ್ತೆ ಹಿಂದೆ ಬಂದು ಹರಿಜನರ ಹಾಸ್ಟಲಿನವರಿಗೆ ತೊಂದರೆ ಮಾಡಿದ್ದಾರೆ. ಪೋಲೀಸಿನವರೂ ಜೊತೆಯಲ್ಲಿದ್ದರು. ಅವರು ಮನಸ್ಸು ಮಾಡಿದ್ದರೆ ಆಗ ಆದ ತೊಂದರೆಯನ್ನು ತಪ್ಪಿಸಬಹುದಾಗಿತ್ತು. ಹಾಗೆ ಮಾಡದೆ ಹೋದುದರಿಂದ ಹಾಸ್ಟಲಿನ ಆಸ್ತಿಗೆ, ಪದಾರ್ಥಗಳಿಗೆ ಧಕ್ಕೆ ಉಂಟಾಗಿದೆ. ನಮ್ಮ ರಾಜ್ಯದಲ್ಲಿ ಅನೇಕ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆ ವಹಿಸಿ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ

(ಶ್ರೀ ಕೆ. ಸಿದ್ದಯ್ಯ)

ಅಲ್ಪ ಸಂಖ್ಯಾತ ಕೋಮುಗಳಿಗಾಗಿರುವ ತೊಂದರೆಯನ್ನು ತಪ್ಪಿಸಬಹುದಾಗಿತ್ತು. ಹಾಗೆ ಮಾಡಿದ್ದರೆ ಬಹಳವಾಗಿ ನಷ್ಟವಾಗುತ್ತಿರಲಿಲ್ಲ. ಇದಲ್ಲದೆ ಕೆಲವು ಗ್ರಾಮಗಳಲ್ಲಿ ಬಹಳ ಕಡಮೆ ಹರಿಜನರಿರುವರು, ಅವರು ಬೇರೆಯವರನ್ನು ತಮ್ಮ ಜೀವನೋಪಾಯಕ್ಕೆ ಅವಲಂಬಿಸಬೇಕಾಗಿದೆ. ಅಲ್ಲಿನ ಹರಿಜನರು ತಮ್ಮ ಹಕ್ಕನ್ನು ರಾಜ್ಯಾಂಗದ ಪ್ರಕಾರ ಚಲಾಯಿಸಲು ಹೋದಾಗ ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹೊರಿಸಿರುವ ಅನೇಕ ಸಂದರ್ಭಗಳಿವೆ. ಇದರಿಂದ ಇರುವ ಹಕ್ಕುಗಳನ್ನು ಚಲಾಯಿಸದೆ ಹರಿಜನರು ಕೈಬಿಡಬೇಕಾಗುವುದು ಚಲಾಯಿಸಿದರೆ ಬಹಿಷ್ಕಾರ ಹಾಕುವುದರಿಂದ ನಿತ್ಯ ಜೀವನಕ್ಕೆ ಕಷ್ಟವಾಗುವುದು. ಈ ಸನ್ನಿವೇಶವನ್ನು ತಪ್ಪಿಸಬೇಕು. ಇಲ್ಲದಿದ್ದರೆ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ಹಕ್ಕನ್ನು ಚಲಾಯಿಸುವುದಕ್ಕಾಗುವುದಿಲ್ಲ, ಅವರು ತಮ್ಮ ಹಕ್ಕನ್ನು ಚಲಾಯಿಸಲು ಅನುಕೂಲವಾಗುವಂತೆ ತಕ್ಕ ಸನ್ನಿವೇಶವನ್ನು ಕಲ್ಪಿಸಿಕೊಡಬೇಕು. ನನ್ನ ಕ್ಷೇತ್ರದಲ್ಲಿ ನಡೆದಿರುವ ಒಂದೆರಡು ವಿಚಾರ ಹೇಳುತ್ತೇನೆ. ಒಂದು ಹೋಟಲಿಗೆ ಹರಿಜನರು ಕಾಫಿ ಕುಡಿಯಲು ಹೋದಾಗ ಸೋಷಿಯಲ್ ಬಾಯ್ ಕಾಟ್ ಮಾಡಿದ್ದಾರೆ, ಇನ್ನೂ ತೆಗೆದಿಲ್ಲ. ಕಾಗಲವಾಡಿ, ಚಾಮರಾಜನಗರ ತಾಲ್ಲೋಕು, ಇಲ್ಲಿ ಹೀಗಾಗಿದೆ. ಪರಿಹಾರ ಸಿಕ್ಕಲಿ ಎಂದು ಇಂಥಾದ್ದನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಯಾನಗಳ್ಳಿಯ ಸುಮಾರು 30 ಹರಿಜನರ ಸಂಸಾರಗಳಿವೆ, ಅವರು ತಮ್ಮ ಊರನ್ನು ಬಿಟ್ಟಿದ್ದಾರೆ, ಒಂದು ವರ್ಷದಿಂದಲೂ ಅವರಿಗೆ ಪರಿಹಾರ ಸಿಕ್ಕಿಲ್ಲ. ಅಪರಾಧ ಮಾಡಿರುವವರಿಗೆ ಶಿಕ್ಷೆಯಾಗಬಹುದು. ಸಾಮಾಜಿಕ ಬಹಿಷ್ಕಾರ ಇತರ ಜನರು ಹಾಕಿದರೆ ಅನೇಕರು ಉಪವಾಸ ಮಾಡಬೇಕಾಗುವುದು. ಅಂಥ ಸಂದರ್ಭದಲ್ಲಿ ಸರಕಾರವೇನು ಪರಿಹಾರ ನೀಡಬೇಕೆಂಬುದನ್ನು ಯೋಚನೆ ಮಾಡಬೇಕು. ಹಾಗೆ ಮಾಡಿ ಸೂಕ್ತ ಪರಿಹಾರ ಒದಗಿಸಬೇಕು.

ಎರಡನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಲೇಬರ್ ವಿಷಯ ಪ್ರಸ್ತಾಪಿಸಿದ್ದಾರೆ. ನಮ್ಮ ದೇಶದಲ್ಲಿ ಗಿರಣಿಗಳು, ಕೈಗಾರಿಕೋದ್ಯಮಗಳು ಮುಂತಾದುವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸರಕಾರ ಸಾಧ್ಯವಾದ ಕೆಲವು ಸೌಲಭ್ಯಗಳನ್ನು ಕೊಟ್ಟಿರಬಹುದು. ಆದರೆ ರೈತ ಕಾರ್ಮಿಕರ ವಿಷಯದಲ್ಲಿ ಸಾಕಷ್ಟು ಗಮನಕೊಟ್ಟಿಲ್ಲ. ನಿಜವಾಗಿಯೂ ಹೇಳುವುದಾದರೆ ನಮ್ಮ ದೇಶದಲ್ಲಿ ಕಾರ್ಮಿಕ ಕೂಲಿಗಳೇ ದೇಶದ ಬೆನ್ನು ಮೂಳೆ. ಕೆಲವರು ಸ್ವಂತ ವ್ಯವಸಾಯ ಮಾಡುವರು. ಆದರೆ ಹೆಚ್ಚು ಜಮೀನಿರುವವರು ಕೂಲಿಗಳ ಸಹಾಯವಿಲ್ಲದೆ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಅವರು ಅನೇಕ ಸಂದರ್ಭಗಳಲ್ಲಿ ವ್ಯವಸಾಯಕ್ಕೆ ಕಾರ್ಮಿಕರನ್ನು ನೇಮಿಸಬೇಕಾಗುವುದು. ಇಂಥ ಸನ್ನಿವೇಶ ಇದೆ ಸರಕಾರ ವ್ಯವಸಾಯ ಕೂಲಿಗಳ ಬಗ್ಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಪರಿಣಾಮಕಾರಿ

ಯಾಗಿ ಅವರಿಗೆ ಸಹಾಯ ಮಾಡುತ್ತಿಲ್ಲ. ಮಿನಿಮಂ ವೇಜಸ್ ನಿಗದಿ ಮಾಡಿ ಕೆಲವು ಸೌಲಭ್ಯ ಕಲ್ಪಿಸಿರಬಹುದು. ಆದರೆ ಅದರಿಂದ ಸಾಕಷ್ಟು ಸಹಾಯ ವಾಗಿಲ್ಲ ಕಾರಣ ಸರಕಾರದ ಆಜ್ಞೆಯನ್ನು ಸರಿಯಾಗಿ ಜಾರಿಗೆ ತರುತ್ತಿಲ್ಲ, ಇದರಲ್ಲಿ ಕುಂದು ಕೊರತೆಯಿದೆ. ಸರಕಾರಿ ಉದ್ಯಮಗಳಲ್ಲಿ ಮಿನಿಮಂ ವೇಜಸ್ ಕೊಟ್ಟಿರಬಹುದು. ಲೋಕೋಪಯೋಗಿ ಇಲಾಖೆ, ಎಂ.ಎಸ್.ಇ ಬಿ, ವ್ಯವಸಾಯ ಮತ್ತು ಅರಣ್ಯ ಇಲಾಖೆ, ರೇಷ್ಮೆ ಇಲಾಖೆ ಮುಂತಾದ ಸರಕಾರಿ ಇಲಾಖೆಗಳಲ್ಲಿ ಅನೇಕ ಕಾರ್ಮಿಕರು ಕೆಲಸ ಮಾಡುತ್ತಿದಾರೆ. ಅವರಿಗೆ ಸರಿಯಾದ ಕೂಲಿ ಕೊಡ ಬೇಕು. ಅಧಿಕಾರಿಗಳಿಗೆ ಯಾವ ತತ್ವ ಅನುಸರಿಸಿ ಸಂಬಳ ಸಾರಿಗೆ ನಿಗದಿ ಮಾಡಿ ದೆಯೋ ಅದೇ ರೀತಿ ಕಾರ್ಮಿಕರಿಗೂ ಮಾಡಬೇಕು. ಹಾಗೆ ಮಾಡಬೇಕಾದ್ದು ಧರ್ಮ ಮತ್ತು ನ್ಯಾಯ. ಇಲ್ಲದಿದ್ದರೆ ಅವರಿಗೆ ಕನಿಷ್ಟ ಸಹಾಯ ದೊರೆಯು ವುದಿಲ್ಲ. ಈ ವಿಚಾರವನ್ನು ಸರಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು.

ವ್ಯವಸಾಯ ಕಾರ್ಮಿಕರ ಕೂಲಿ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಬಹಳ ದಿವಸಗಳಿಂದ ಇವರ ಬಗ್ಗೆ ಸರ್ಕಾರದವರು ಗಮನವನ್ನು ಹರಿಸಿಲ್ಲ. 1968ನೇ ಇಸವಿಯಿಂದ ಸರ್ಕಾರ ಇವರ ಕೂಲಿಯನ್ನು ನಿಗದಿ ಮಾಡಿದ್ದು ಇತ್ತೀಚೆಗೆ ಮಾಡಿರ ಬಹುದು ಇಷ್ಟು ವರ್ಷಗಳವರೆಗೂ ಮಾಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಎರಡನೆಯದಾಗಿ, ಈ ರೈತ ಕಾರ್ಮಿಕರು, ಮೊದಲಿನಿಂದಲೂ ಈ ಜೀತ ಸಿಸ್ಟಂಗೆ ಸಿಕ್ಕಿಕೊಂಡಿದ್ದಾರೆ. ಅವರ ಜೀವಮಾನವೆಲ್ಲವೂ, ಅಲ್ಲದೆ ಅವರ ಮೊಮ್ಮಕ್ಕಳೂ ಸಿಕ್ಕಿಹಾಕಿಕೊಂಡು ಕೆಲಸ ಮಾಡಿರತಕ್ಕ ಸಂದರ್ಭ ಉಂಟು. ಪಾರ್ಲಿಮೆಂಟರಿ ಷೆಡ್ಯೂಲ್ಡ್ ಕ್ಯಾಸ್ಟ್ ಕಮಿಟಿಯವರು ಇಲ್ಲಿಗೆ ಬಂದಾಗ, ಧಾರವಾಡ ಜಿಲ್ಲೆಯ ಒಂದು ಊರಿಗೆ ಭೇಟಿ ಕೊಟ್ಟಿದ್ದರು. ಅಲ್ಲಿ ಒಂದು ರೀತಿಯ ಬಾಂಡ್ ಲೇಬರ್ ಸಿಸ್ಟಂ ಇದೆ. ಅದನ್ನು ಅವರು ಪಾಯಿಂಟ್ ಔಟ್ ಮಾಡಿದ್ದಾರೆ. ಅಲ್ಲದೆ ಅವರು ಸರ್ಕಾರದವರು ಅದರ ಬಗ್ಗೆ ರೀ ಸೆಟಲ್‌ಮೆಂಟ್ ಮಾಡುತ್ತಾರೆ ಎಂದು ಹೇಳಿದ್ದಾರೆ ಇದುವರೆಗೂ ಅದನ್ನು ಮಾಡಲಿಲ್ಲ. ಈ ಜೀತ ಸಿಸ್ಟಂನಲ್ಲಿ ಬಲಾತ್ಕಾರವಾಗಿ ಕೆಲಸಮಾಡತಕ್ಕ, ಜನಗಳನ್ನು ಶೋಷಣೆ ಮಾಡತಕ್ಕ ಸನ್ನಿವೇಶ ಇದೆ. ಇದನ್ನು ತಪ್ಪಿಸಬೇಕು ಎಂದು ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

3-30 P. M.

ಇನ್ನು ಎಜ್ಯುಕೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸರ್ಕಾರದವರು ಸರ್ಟನ್ ಏಜ್ ಗ್ರೂಪ್‌ನವರನ್ನು ಕಂಪಲ್ಸರಿ ಎಜುಕೇಷನ್‌ನಲ್ಲಿ ತೆಗೆದುಕೊಂಡಿದ್ದಾರೆ. ಇದು ನಾನಾ ಕಾರಣಗಳಿಂದ ಕೆಲವರಿಗೆ ಮಾತ್ರ ತಲುಪ ಬಹುದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಹಿಂದುಳಿದವರ ಬಗ್ಗೆ ಹೇಳುತ್ತೇನೆ. ಒಂದು

(ಶ್ರೀ ಕೆ. ಸಿದ್ದಯ್ಯ)

ಜಾತಿಯನ್ನು ಕಸುಬಿನ ಮೇಲಾದರೂ ಗ್ರೂಪ್ ಮಾಡಬಹುದು, ಅಥವಾ ವರ್ಗದ ಮೇಲಾದರೂ ಗ್ರೂಪ್ ಮಾಡಬಹುದು. ಒಟ್ಟಿನಲ್ಲಿ ಹೇಳುವುದಾದರೆ, ದೇಶದಲ್ಲಿ ಜಾತಿಯ ವರ್ಗ ಎನ್ನತಕ್ಕದ್ದು ಪ್ರಬಲವಾದಂಥ ಜನಗಳಲ್ಲಿ ಮಾನಸ್ಸಿನಲ್ಲಿದೆ ಎನ್ನ ತಕ್ಕದ್ದನ್ನು ಇಂದಿಗೂ ಮರೆಯುವುದಕ್ಕಾಗುವುದಿಲ್ಲ. ಕೆಲವರು ಜಾತಿಯೇ ಇಲ್ಲ ಎಂದು ಹೇಳಬಹುದು, ಆದರೆ ಜಾತಿಯನ್ನು ನಿರ್ಮೂಲನ ಮಾಡುವ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಜಾತಿಯನ್ನು ರೆಕಗ್ನೈಸ್ ಮಾಡುವುದಿಲ್ಲ ಎನ್ನು ವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಇವತ್ತಿನ ದಿವಸ ಜಾತಿಇಲ್ಲ ಎಂದು ಹೇಳತಕ್ಕವರು, ನಮ್ಮ ಹಿಂದುಗಳು ಏನು ಇದ್ದಾರೆ, ಯಾರು ತಾನೆ ನಮ್ಮ ಹಿಂದುಗಳಿಗೆ ಒಬ್ಬ ಜಗದ್ಗುರು ಇದ್ದಾರೆಂದು ಒಪ್ಪಿಕೊಳ್ಳುತ್ತಾರೆ? ಷೆಡ್ಯೂಲ್ ಕ್ಯಾಸ್ಟ್‌ನವರ ಜಗದ್ಗುರುಗಳನ್ನು ಮಾಡಬೇಕೆನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ. ನಿಜವಾಗಿಯೂ ಹೇಳಬೇಕಾದರೆ, ಷೆಡ್ಯೂಲ್ ಕ್ಯಾಸ್ಟ್‌ನವರು ಹಿಂದುಗಳೇ ಅಲ್ಲ ಎಂದು ಹೇಳತಕ್ಕದ್ದು ಇದೆ. ಕೊನೆಯಪಕ್ಷ, ಹಿಂದುಗಳಲ್ಲಿ ಶೂದ್ರರನ್ನು ಜಗದ್ಗುರುಗಳನ್ನಾಗಿ ಮಾಡುವುದಕ್ಕೆ ಎಷ್ಟು ಜನ ತಯಾರಿದ್ದಾರೆ?

ಶ್ರೀ ಕೋಣಂದೂರು ಲಿಂಗಪ್ಪ ; ಶೂದ್ರರೆಂದು ಮತ್ತೊಂದು ಹೊಸ ಮತವನ್ನು ಸೃಷ್ಟಿಮಾಡುತ್ತೀರಾ ?

ಶ್ರೀ ಕೆ. ಸಿದ್ದಯ್ಯ ; ದೇಶದಲ್ಲಿ ಜಾತಿಗಳ ಒಂದು ಪ್ರಾಬಲ್ಯತೆ ಅವರ ಒಂದು ಹಿಡಿತ ನಮ್ಮ ಜನತೆಯ ಮೇಲೆ ಇದೆಯೆನ್ನುವುದನ್ನು ಒಪ್ಪಿಕೊಳ್ಳಬೇಕು. ಸೋಷಿಯಲ್ ಸ್ಟ್ರಕ್ಚರ್ ಈ ರೀತಿ ಇರುವಾಗ ನಾವು ಯಾರಾದರೂ ಹಿಂದೆ ಬಿದ್ದಿರ ತಕ್ಕವರನ್ನು, ಸಾಮಾಜಿಕವಾಗಿ ಹಿಂದೆ ಬಿದ್ದಿರತಕ್ಕವರನ್ನು ಒಂದು ಜಾತಿಯ ಆದಾರದ ಮೇಲೆ ಅವರಿಗೆ ಸೌಲಭ್ಯಗಳನ್ನು ಕೊಟ್ಟರೆ ಅದು ಏನು ತಪ್ಪಾಗುತ್ತದೆ? ಜಾತೀವಾದಿಗಳು ಇದನ್ನು ಸಹಿಸದೆ ಇರಬಹುದು, ಆದರೆ ನಮ್ಮಲ್ಲಿ ರಾಷ್ಟ್ರೀಯ ಮನೋಭಾವ ಇರಬೇಕು. ಇದನ್ನು ನಾವು ಹೆಚ್ಚಾಗಿ ಬೆಳೆಸಿಕೊಳ್ಳಬೇಕು. ಯಾವುದಾದರೂ ಒಂದು ಜಾತಿ ಇದರಲ್ಲಿ ಲಯನ್ ಷೇರ್ ತೆಗೆದುಕೊಳ್ಳಬಹುದು, ಆದರೆ ಅದನ್ನು ಅಲೋ ಮಾಡುವುದಿಲ್ಲ ಎಂದು ಕೆಲವರು ಹೇಳಬಹುದು. ನಾನು ಅಂಥವರಿಗೆ ಕಮ್ಯುನಲಿಸ್ಟ್ ಎಂದು ಹೇಳುತ್ತೇನೆ. ಏಕೆಂದರೆ, ಕೆಲವರು ನ್ಯಾಷನಲ್ ಸ್ಕೀಂನ ನೆಪ ಇಟ್ಟುಕೊಂಡು ಒಂದೇ ಜಾತಿಯವರು ಲಾಭವನ್ನು ಹೊಡೆಯುತ್ತಾರೆ, ಇದನ್ನು ಹೇಗೆ ಭಾಗಮಾಡುವುದು ಎಂದು ಕೇಳಿದರೆ ಅದು ತಪ್ಪಾಗುತ್ತದೆ. ಸ್ಕೀಂ ನ್ಯಾಷನಲ್ ಇರಬಹುದು, ಆದರೆ ರಿಸಲ್ಟ್ ಕಮ್ಯುನಲ್ ಆಗುತ್ತದೆ. ಈ ದೃಷ್ಟಿಯಿಂದ ಹಿಂದುಳಿದಿರತಕ್ಕ ಯಾವ ವರ್ಗಗಳೇ ಆಗಲೀ ಆ ಜನಗಳಿಗೆ ಸಹಾಯವನ್ನು ಮಾಡಬೇಕು. ಅವರಿಗೆ ಜಾಸ್ತಿ ಷೇರನ್ನು ಕೊಡಬೇಕು

ಇದು ನ್ಯಾಯುವಾದಂಥಾದ್ದು, ಧರ್ಮವಾದಂಥ ಷೇರು. ಇದನ್ನು ಜಾತಿಯು ಆಧಾರದ ಮೇಲೆ ಮಾಡಿದರೂ ಸಹ ತಪ್ಪು ಆಗುವುದಿಲ್ಲ. ಯಾವ ಉದ್ದೇಶವಿಟ್ಟು ಕೊಂಡು ಈ ಕೆಲಸವನ್ನು ಮಾಡುತ್ತೇವೆಯೋ, ಅದಕ್ಕೆ ಜಾತಿಯು ಆಧಾರ ಇಟ್ಟು ಕೊಂಡು ಕೊಟ್ಟರೂ ಒಂದೇ, ನ್ಯಾಷನಲ್ ಸ್ಕೀಂ ನಲ್ಲಿ ಕೊಟ್ಟರೂ ಒಂದೆ. ಆದರೆ ಈ ರೀತಿ ಕೊಡುವುದರಿಂದ, ಕಮ್ಯುನಲ್ ರಿಸಲ್ಟ್ ಪ್ರೊಡ್ಯೂಸ್ ಮಾಡಿದರೆ ಅಂಥಾದ್ದು ಬೇಡ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಯೋಜನೆ ಯನ್ನು ಮಾಡಬೇಕು. ಇದರಿಂದ ಸಮಾಜ ಮುಂದೆ ಬರುತ್ತದೆ, ಜಾತಿ ಜಾತಿ ಎಂದು ಹೇಳತಕ್ಕ ಗೊಂದಲವೂ ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಎಂಪ್ಲಾಯ್‌ಮೆಂಟ್ ವಿಷಯದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಇತ್ತೀಚೆಗೆ ಸರ್ಕಾರದಲ್ಲಿ ನೌಕರಿಯನ್ನು ಒದಗಿಸಿಕೊಡತಕ್ಕದ್ದು ಹೆಚ್ಚಾಗಿದೆ. ಹಿಂದುಳಿದ ವರ್ಗದವರಿಗೆ ಪ್ರಾಧಾನ್ಯತೆ ಕೊಡಬೇಕು ಎಂದು ಸರ್ಕಾರ ಒಂದು ಕಾನೂನನ್ನು ಸಹ ಮಾಡಿದೆ. ಹೀಗೆ ಮಾಡಿರುವಾಗ ನಾನು ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಇದ್ದೇನೆ. ಇದು ಬಹಳ ಪರಿಣಾಮಕಾರಿಯಾದಂಥ ವಿಷಯ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಮಾಡಿದ್ದರಲ್ಲಿ, ಅವರವರ ವರಮಾನದ ಮೇಲೆ ಇದನ್ನು ಮಾಡಿದ್ದಾರೆ. ವರ ಮಾನ ಎಷ್ಟು ಇರಬೇಕು ಎಂದು ಸರ್ಕಾರದವರು ನಿಗದಿ ಮಾಡಿದ್ದಾರೆ. ವರ ಮಾನವನ್ನು ಯಾವ ಯಾವ ರೀತಿಯಲ್ಲಿ ಎಷ್ಟು ಎಷ್ಟು ಬರುತ್ತದೆ ಎನ್ನು ವುದನ್ನು ಕ್ಯಾಲ್ಕ್ಯುಲೇಟ್ ಮಾಡಬೇಕು, ಎಸ್ಟಿಮೇಟ್ ಮಾಡಬೇಕು ಎನ್ನತಕ್ಕದ್ದನ್ನು ನಿಗಧಿ ಮಾಡಿಲ್ಲ. ಕೊನೆಯು ಪಕ್ಷ ಒಬ್ಬರ ವರ ಮಾನ 250 ರೂಪಾಯಿಗಳು ಇದೆಯೆಂದರೆ ಅವರನ್ನು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಮಾಡಿದ್ದಾರೆ. ಈ ಬ್ಯಾಕ್‌ವರ್ಡ್ ಕ್ಲಾಸ್ ಸರ್ಟಿಫಿಕೇಟ್ ಕೊಡತಕ್ಕವರು ತಹಸೀಲ್ದಾರರು. ಇವರು ಒಬ್ಬ ಮನುಷ್ಯನಿಗೆ 250 ರೂ. ಗಳ ವರಮಾನ ಬರುತ್ತದೆಯೇ ಎಂದು ಹೇಳತಕ್ಕದ್ದರ ಬಗ್ಗೆ ತೃಪ್ತಿಯಾಗಿದ್ದರೆ ಆ ಒಂದು ಬೇಸಿಸ್ ಮೇಲೆ ಸರ್ಟಿಫಿಕೇಟ್ ಅನ್ನು ಕೊಡುತ್ತಾರೆ. ಆದರೆ ಇದರ ಬಗೆ ನಾನು ಹೇಳುವಾಗ, ಇಲ್ಲಿ ಹಿಂದುಳಿದ ವರ್ಗದವರಿಗೆ ಬಹಳವಾಗಿ ಮೋಸ ವಾಗಿದೆ. ಅನ್ಯಾಯವಾಗಿದೆ, ಇಂಥ ಸಂದರ್ಭಗಳು ಬಹಳ ಹೆಚ್ಚಾಗಿವೆ. ಏಕೆಂದರೆ, ಈ ಮೋಸವನ್ನು ತಡೆಗಟ್ಟುವುದಕ್ಕೆ ಮಾರ್ಗಗಳು ಇದ್ದರೂ ಸಹ ಸರ್ಕಾರದವರು ಅದನ್ನು ಮಾಡಿಲ್ಲ. ಒಬ್ಬ ಮನುಷ್ಯನಿಗೆ ಅನೇಕ ರೀತಿಯು ವರಮಾನಗಳು ಇರುತ್ತವೆ, ಸಂಬಳ, ವ್ಯವಸಾಯ ಮತ್ತು ಇತರ ಮಾರ್ಗಗಳು ಇರುತ್ತವೆ. ಆದರೆ ತಹಸೀಲ್ದಾರರು, ಇದನ್ನೆಲ್ಲಾ ಸರಿಯಾಗಿ ನೋಡಿಕೊಳ್ಳ ಬೇಕು. ಇಂಥ ಜಮೀನು ಇದ್ದರೆ, ಇಂತಿಷ್ಟು ವರಮಾನ ಬರುತ್ತದೆ, ಒಟ್ಟು ಒಬ್ಬ ಮನುಷ್ಯನ ವರಮಾನ ಇಷ್ಟು ಎಂದು ಸರಿಯಾಗಿ ಲೆಕ್ಕಾಚಾರ ಮಾಡಿದರೆ ಇದರಿಂದ ಹಿಂದುಳಿದ ವರ್ಗದ ಜನಗಳಿಗೆ ಅನುಕೂಲವಾಗುತ್ತದೆ.

(ಶ್ರೀ ಕೆ. ಸಿದ್ದಯ್ಯ)

ಇದುವರೆಗೂ ಹಿಂದುಳಿದ ವರ್ಗದವರಿಗೆ ಅನುಕೂಲ ಆಗಿತ್ತೇ ಎಂದು ಪರಿಶೀಲನೆ ಮಾಡಿದರೆ ಬಹಳ ಹೆಚ್ಚಿನ ಭಾಗ ಬಹಳ ಹಿಂದುಳಿದಿರತಕ್ಕ ಜನ 250 ರೂ. ಅದಕ್ಕಿಂತ ಕಡಿಮೆ ಇರತಕ್ಕಂಥ ಜನಗಳಿಗೆ ಸಹಾಯವಾಗಿಲ್ಲ, ದೊಡ್ಡ ಜಮೀನ್ದಾರರಿಗೆ ಸಹಾಯವಾಗಿದೆ. ಸರ್ಕಾರಿ ನೌಕರದಾರರ ಮಕ್ಕಳಿಗೆ ಸಹಾಯವಾಗಿದೆ. ತಾತ್ಕಾಲಿಕವಾಗಿ ಕೂಡ ಸಬ್ ಕಮಿಟಿ ಮಾಡಿದ್ದೇವೆಂದು ಹೇಳುತ್ತೀರಿ. ಅದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ, ಒಂದು ನಿಯಮವನ್ನು ಹೊರಡಿಸಿದರೆ ಅದರಿಂದ ಹೆಚ್ಚು ಜನಗಳಿಗೆ ನ್ಯಾಯ ತಪ್ಪಿ ಹೋಗುತ್ತದೆಂದು ಸರ್ಕಾರದ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಇಲ್ಲಿ ಹೇಳುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸ್ ಆರ್ಡರ್‌ನಲ್ಲಿ ಹಿಂದೆ ಸಹ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರಿ ಉದ್ದಿಮೆ ಕೊಡುವಾಗ ಸರ್ಕಾರಿ ನೌಕರಿಯಲ್ಲಿ ಮೀಸಲು ಸ್ಥಾನಗಳನ್ನು ಮೀಸಲಾಗಿಡುವ ಸನ್ನಿವೇಶದಲ್ಲಿ ಸುಪ್ರಿಂ ಕೋರ್ಟಿನ ಡಿಸಿಷನ್ ಸಹ ಈ ಬಗ್ಗೆ ಇದೆ. ದೇವದಾಸ್ ವರ್ಸ್ಸಸ್ ಯೂನಿಯನ್ ಗೌವರ್ನ್ಮೆಂಟ್ 1963-64 ನೇ ಇಸ್ವಿಯಲ್ಲಿ ಇದು ಆಗಿದೆ. ಅದರಲ್ಲಿ ಏನು ಹೇಳಿದ್ದಾರೆಂದರೆ ಅದು ಯಾವ ವರ್ಗದ ಜನಾಂಗವೇ ಆಗಲಿ, ಪ್ರತಿಸಾರಿಯೂ ಆ ಒಂದೇ ವರ್ಗದ ಜನಗಳಿಗೆ ಬಹುಪಾಲು ಈ ಸೌಲಭ್ಯ ಹೋಗುತ್ತಿದೆ, ಬೇರೆ ವರ್ಗದ ಜನಗಳಿಗೆ ಸಿಕ್ಕುವ ಅನುಕೂಲತೆ ಕಡಿಮೆಯಾಗುತ್ತಿದೆ ಎಂದು, ಇದರಿಂದ ತಾವು ಯಾವ ಉದ್ದೇಶ ಇಟ್ಟುಕೊಂಡು ಮಾಡಿದ್ದೀರಿ ಆ ಉದ್ದೇಶ ಸಫಲವಾಗುವುದಿಲ್ಲ ಮೊದಲು ಮೊನಪಲಿಸ್ಟ್ ಟೆಂಡೆನ್ಸಿ ಬರುತ್ತದೆ. ಡೆವಲಪ್‌ಮೆಂಟ್ ಸ್ಕೀಮ್ ಒಂದು ತತ್ವದ ಮೇಲೆ ಅಪ್ಲೈ ಆಗಬೇಕು. ಅಗ್ರಿಕಲ್ಚರ್ ತೆಗೆದುಕೊಂಡರೆ, ಅಥವಾ ಇನ್ನು ಯಾವುದಾದರೂ ಒಂದು ಕೆಲಸ ತೆಗೆದುಕೊಂಡರೆ ಪ್ರತಿ ವರ್ಷವೂ ಕೋಟ್ಯಾಂತರ ರೂ. ಗಳನ್ನು ಒಂದು ಭಾಗದ ಜನರಿಗೇ ಕೊಡುತ್ತಾ ಹೋದರೆ ಅದು ಮೊನಾಪಲಿಸ್ಟ್ ಟೆಂಡೆನ್ಸಿಗೆ ಆಸ್ಪದವಾಗುತ್ತದೆ. ಅದರ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಸರ್ಕಾರಿ ನೌಕರಿ ಬಗ್ಗೆ ಶೆಡ್ಯೂಲ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್ ಕ್ಯಾಸ್ಟನ್ನು ತೆಗೆದುಕೊಂಡು, ಅದರ್ ಬ್ಯಾಕ್‌ವಾರ್ಡ್ ಕ್ಲಾಸ್ಟ್ ಮತ್ತು ಜನರಲ್ ಲಿಸ್ಟನ್ನು ತೆಗೆದುಕೊಂಡು ಜಾತಿ ಆಧಾರದ ಮೇಲೆ, ಎಷ್ಟೆಷ್ಟು ಅಪಾಯಿಂಟ್‌ಮೆಂಟ್ ಯಾರ್ಯಾರಿಗೆ ಹೋಗಿದೆ ಎಂಬುದನ್ನು ನೋಡುವುದಾದರೆ, ಪ್ರತಿ ವರ್ಷವೂ ಒಂದೇ ಜಾತಿಯವರಿಗೇ ಹೋಗತ್ತಿರುವುದು ಮನಾಪಲಿಸ್ಟ್ ಟೆಂಡೆನ್‌ಸಿ ಆಗುವುದಿಲ್ಲವೇ ? ಆದುದರಿಂದ ಈ ಟೆಂಡೆನ್ಸಿಯನ್ನು ಏತಕ್ಕೆ ಕಡಿಮೆ ಮಾಡಬಾರದು ? ಇದನ್ನು ಕಡಿಮೆ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲನೆ ಮಾಡುವುದು ನ್ಯಾಯವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ.

ಸರ್ಕಾರದವರು ಈ ಕಡೆಗೆ ಸಂಪೂರ್ಣ ಗಮನವನ್ನು ಹರಿಸಿ ಸೂಕ್ತ ಜಾತೀಯತೆಯನ್ನು ಹೋಗಲಾಡಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಬಂದರೆ ಜಾತಿ ಪ್ರಾಬಲ್ಯತೆ ಕಡಿಮೆ ಯಾಗುತ್ತದೆ. ಎಂದು ಹೇಳಿ ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಎಸ್. ವಿ. ನಾಯಕ್ (ಕುಮಟಾ) ;—ಮಾನ್ಯ ಉಪ ಸಭಾಪತಿಗಳೇ ವಿಧಾನ ಮಂಡಲದಲ್ಲಿ ಫೆಬ್ರವರಿ 25ನೇ ತಾರೀಖಿನ ದಿನ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಸಮರ್ಥಿಸುತ್ತಾ ಅವರ ಭಾಷಣಕ್ಕೆ ನಾನು ಬೆಂಬಲ ನೀಡುತ್ತೇನೆ ಅವರು ಬಹಳ ಸ್ಥೂಲವಾಗಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತಂದರು ಅಲ್ಲದೆ ಆರ್ಥಿಕ ಅಸಮತೆಯನ್ನು ಮುಖ್ಯವಾಗಿ ತೊಲಗಿಸಲು ಮತ್ತು ಪ್ರದೇಶದ ಅಸಮತೆಗಳನ್ನು ತೊಲಗಿಸಲು ಧೃಡ ಸಂಕಲ್ಪದಿಂದ ಶ್ರಮಿಸೋಣ ಎಂದು ಅಹ್ವಾನವನ್ನು ಇತ್ತಿದ್ದಾರೆ ಅವರಿಗೆ ನನ್ನ ಕೃತಜ್ಞತೆಗಳು. ರಾಜ್ಯ ಕಳೆದ ವರ್ಷದ ಭೀಕರ ಪರಿಸ್ಥಿತಿ 1942ನೇ ಇಸ್ವಿಯಲ್ಲಿ ಬಂಗಾಳದಲ್ಲಿ ಬಂದ ಭೀಕರ ಪರಿಸ್ಥಿತಿಯು ಸ್ಪಷ್ಟ ಚಿತ್ರವನ್ನು ಕೊಡುತ್ತಾ ಇದೆ. ಮಾನ್ಯ ಗೋಪಾಲಕೃಷ್ಣ ಅಡಿಗರವರ ಮಾತಿನಲ್ಲಿ ಹೇಳುವುದಾದರೆ,

> ''ಇಂದು ಬಾಳಿದು ಕೂಳಕಾಳಗವು,
> ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕೆ,
> ಅನ್ನದ ನ್ಯಾಯು ದಾವಾಗ್ನಿಯಲ್ಲಿ ಕರಗುತಿದೆ,
> ನಡತೆ ಸಂಸ್ಕೃತಿ, ಪ್ರೀತಿ ದಿವದಬಯಕೆ''

ಆದರೂ ಕೂಡ ''ನರ ಪಶುವು ನರಪಶುವ ಕೊಂದು ತಿನ್ನಬಹುದಾದ ಪರಿಸ್ಥಿತಿಯನ್ನು, ರಂಗಣಗುಣಿದು ರಣಹದ್ದು ಬಿಜಯಂಗೈಯ ಬಹುದಾದ ಪರಿಸ್ಥಿತಿಯನ್ನು, ಬೀದಿಯ ನಾಯಿ ಜೇತೋಸ್ಮಿ ಎನ್ನಬಹುದಾದ ಪರಿಸ್ಥಿತಿಯನ್ನು'' ತಪ್ಪಿಸಿದಂಥ ಶ್ರೇಯಸ್ಸು ನಮ್ಮ ಸರ್ಕಾರಕ್ಕೆ ಬರುತ್ತದೆ. ಹಿಂದೆ ಯಾವ ಸರ್ಕಾರವೂ ಕೈಗೊಳ್ಳದೇ ಇದ್ದಂಥ 63 ಕೋಟಿ ರೂಪಾಯಿಗಳ ಪರಿಹಾರ ಕಾಮಗಾರಿಯನ್ನು ಒದಗಿಸಿದ ಧನ್ಯ ಕಾರ್ಯ ಸರ್ಕಾರದ್ದು.

ಶ್ರೀ ಕೋಣಂದೂರು ಲಿಂಗಪ್ಪ :—ಇಷ್ಟು ಸುಂದರವಾದ ಕವನವನ್ನು ಇಂಥ ಸರ್ಕಾರಕ್ಕೆ ತಾವು ಹೋಲಿಸಿದಿರಿ.

ಶ್ರೀ ಎಸ್. ವಿ. ನಾಯಕ್ :—ದೇಶದ ಇಂದಿನ ಪರಿಸ್ಥಿತಿಗೆ ವಿರೋಧ ಪಕ್ಷದವರೇ ಹೊಣೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಮೊನ್ನೆ ದಿವಸ ಹುಬ್ಬಳ್ಳಿಯಲ್ಲಿ ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಆಗಿರುವ ರಾಮಕೃಷ್ಣ ಹೆಗ್ಗಡೆಯವರು ವಿದ್ಯಾರ್ಥಿಗಳಿಗೆ ಪ್ರಚೋದನೆಯನ್ನು ಕೊಡುತ್ತಾ ಸಾಮಾನ್ಯವಾದ ಕಠೋರ ಪರಿಸ್ಥಿತಿಯನ್ನು ವರ್ಣಿಸಿದರು.

ಶ್ರೀ ಕೋಣಂದೂರು ಲಿಂಗಪ್ಪ :—ಲಂಚಕೋರ ಅಧಿಕಾರಿಗಳು ಇದ್ದರೆ ಮುತ್ತಿಗೆ ಹಾಕಿ ಎಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಸ್. ವಿ. ನಾಯಕ್ :—ಲೋಕ ಕಲ್ಯಾಣಕ್ಕೆ ಕಂಟಕವಾದಾಗ ತರಬೇಕಾದ ಚಳುವಳಿಗಳ ಹೆಸರಿನಲ್ಲಿ ಕೊಲೆ, ಹೊಡೆದಾಟ ಬಡೆದಾಟ ಮಾಡುವುದು, ಪುಂಡಾಟಿಕೆ ಮಾಡುವುದು ಧರ್ಮವಲ್ಲ, ಸಾಧುವಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

24 ವರ್ಷಗಳ ರಾಜ್ಯಭಾರ ಮಾಡಿದಂಥ ನಮ್ಮ ಎದುರಿನ ಆಸ್ಥಾನಗಳಲ್ಲಿ ಕುಳಿತಿರುವಂಥ ಮಹನೀಯರು ಬೆಳ್ಳಿ ಹಬ್ಬವನ್ನು ಆಚರಿಸುವಂಥ ಸುಸಂದರ್ಭವನ್ನು, ಒಂದು ಅವಕಾಶವನ್ನು ನಮಗೆ ಬಿಟ್ಟುಕೊಟ್ಟು ಹೋಗಿದ್ದಾರೆ. ಬೆಳ್ಳಿ ಹಬ್ಬವನ್ನು ಆಚರಿಸುವಂತ ಸುಸಂದರ್ಭದಲ್ಲಿ 25 ವರ್ಷಗಳ ವರೆಗೆ ಆಡಳಿತ ಮಾಡಿದಂಥ ಪಕ್ಷ ಯಾವ ರೀತಿ ಶಿಕ್ಷಣವನ್ನು ಜನತೆಗೆ ಒದಗಿಸಿತು ಎನ್ನುವುದು ಬಹಳ ಮಾರ್ಮಿಕವಾದ ವಿಷಯ. ವಿದ್ಯಾರ್ಥಿಗಳಲ್ಲಿ ಒಳ್ಳೆಯ ಚಾರಿತ್ರ್ಯವನ್ನು ಬೆಳೆಸುವುದನ್ನು ಬಿಟ್ಟು ಯಾವರೀತಿ ಶಿಕ್ಷಣ ಕೊಟ್ಟಿದೆ ಎನ್ನುವುದು ಈ ರಾಜ್ಯದ ಹಿರಿಯ ಕವಿ, ಸಾಹಿತಿಗಳೂ ವಿಮರ್ಶಕರ್ತ, ಕಡಲಕವಿ ಭಾರ್ಗವಿಯೊದ ಶ್ರೀ ಶಿವರಾಮ ಕಾರಂತರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು, ಇಂದಿನ ಪ್ರಭುದ್ಧ ಶಿಶುಗಳ ಶೈಶವಾಸ್ಥೆ ನೀಗುವುದೆಂದು ? ಇಂದಿನ ಶಿಕ್ಷಣ ಪದ್ಧತಿ, ಶಿಕ್ಷಣ ರೂಢಿಸಲ್ಪಟ್ಟ ವ್ಯವಸ್ಥೆ ಆಗಿಲ್ಲ ಎಂದು ಅಂದರು. ಏನೇ ಇರಲಿ ನಮ್ಮ ಸರ್ಕಾರ ಅಭಿವೃದ್ಧಿ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡಿದೆ. ಅದನ್ನು ಪರಿಶೀಲನೆ ಮಾಡಬೇಕು. ಇಂದಿನ ಶತಮಾನದ ಪ್ರಕೃತಕ್ಕೆ ಬಲಿಯಾಗಿ ರೈತನು ತನ್ನ ಹಾಸ್ಯ ಮನೋ ಭಾವನೆಯನ್ನು ತಪ್ಪಿಸಲು ಭೂ ಸುಧಾರಣೆ ಕಾಯ್ದೆಯನ್ನು ತಂದು ಉಳುವವನೇ ಭೂಮಿ ಒಡೆಯನೆಂದು ಸಾರಿದ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ. ಇದೇ ರೀತಿಯಲ್ಲಿ 25 ವರ್ಷಗಳು ಕಳೆದರೂ ಕೂಡ ಆರ್ಥಿಕ ಅಸಮತೆ ನೀಗಿಸಿ ಸಾಮಾಜಿಕ ಸುಭ್ರದ್ರತೆಯನ್ನು ಒದಗಿಸಿ ಕೊಡುವುದಕ್ಕೆ ಪ್ರಯತ್ನಮಾಡಿ ಜನತೆಗೆ ವಸತಿ ಸೌಕರ್ಯವನ್ನು ಒದಗಿಸಿದಂಥ ಶ್ರೇಯಸ್ಸು ಕೂಡ ಈ ಸರ್ಕಾರಕ್ಕೇ ಸಲ್ಲುತ್ತದೆ.

ಸಣ್ಣ ನೀರಾವರಿ ಯೋಜನೆಯ ಅಂಗವಾಗಿ ಶರಾವತಿ ನದಿಗೆ 5 ಕೇಂದ್ರಗಳಲ್ಲಿ ಏತ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಸುಮಾರು 82 ಲಕ್ಷ ರೂಪಾಯಿಗಳ ಯೋಜನೆ ಹೊನ್ನಾವರ ಮತ್ತು ಕುಮಟಗಳಲ್ಲಿ ಕುಡಿಯುವ ನೀರಿನ ಸೌಲಭ್ಯದ ಬಗ್ಗೆ ಸರ್ಕಾರದ ಮುಂದಿದ್ದು ಅದನ್ನು ಕೂಡಲೇ ಸರ್ಕಾರ ಒದಗಿಸಿಕೊಡುತ್ತದೆಂದು ನಂಬಿದ್ದೇನೆ. ಅದೇ ರೀತಿ ಹೊನ್ನಾವರಿ ಮೀನುಗಾರಿಕೆ ಬಂದರಿನ ಯೋಜನೆ

ಯನ್ನು ಕೈಕೊಂಡಿದ್ದಕ್ಕಾಗಿ ನನ್ನ ಕೃತಜ್ಞತೆಗಳು. ವಿದ್ಯುಚ್ಛಕ್ತಿಯ ಬಿಕ್ಕಟ್ಟಿನ ಪರಿಹಾರಕ್ಕೆ ಕಾಳಿ ವಿದ್ಯುತ್ ಯೋಜನೆ ಕೈಕೊಂಡು ತೀವ್ರವಾಗಿ ಕಾರ್ಯಪ್ರವೃತ್ತ ವಾಗಿದ್ದರೂ ಕೂಡ ಕಾಳಿ, ಬೆಡತಿ, ಅಘನಾಶಿನಿ ಸೇರುವ ಕಡೆ ವಿದ್ಯುತ್ ಯೋಜನೆ ಬರುವ ಕಾಲದಲ್ಲಿ ಹಲವಾರು ಪ್ರದೇಶಗಳು ನೀರಿನಲ್ಲಿ ಮುಳುಗಿ ಹೋಗುವ ಭಯ ಎಬ್ಬಿಸಿದ್ದು, ಅಂಥಹ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಪುನರ್ನಿವೇಶನ ಕಲ್ಪಿಸುವ ವ್ಯವಸ್ಥೆಯನ್ನು ಸರ್ಕಾರ ಕೂಡಲೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಈ ದೇಶದಲ್ಲಿ ಯಾವುದಾದರೂ ಸರ್ಕಾರ ಆರ್ಥಿಕ ಸುಭದ್ರತೆ, ಸಾಮಾಜಿಕ ಸಮಾನತೆಯನ್ನು ಒದಗಿಸಿ ಕೊಡುವುದಕ್ಕೆ ಸಾಮರ್ಥ್ಯವನ್ನು ಹೊಂದಿದೆ, ಶಕ್ಯವಾಗಿದೆ ಎಂದರೆ ಆಡಳಿತ ಕಾಂಗ್ರೆಸ್ ಒಂದೇ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇರುವದೆಲ್ಲವನ್ನು ಎಲ್ಲ ಜನತೆ ತೆರವಾಗಿಸುವ ಸಮ ಬಗೆಯ, ಸಮಸುಖದ, ಸಮ ದುಃಖದ ಸಾಮರಸ್ಯದ ಸಾಮಗಾನ ಲಹರಿಯ ಮೇಲೆ ತೇಲಿಬರುವಂತೆ ನಾಡನ್ನು ಕಟ್ಟುವ ಸಾಮರ್ಥ್ಯ ನಮ್ಮ ಸರ್ಕಾರಕ್ಕೆ ಇದೆ ಎಂದು ಹೇಳಿ, ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ).—ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ಸ್ನೇಹಿತರು ಮಂಡಿಸಿದ ರಾಜ್ಯಪಾಲರ ಭಾಷಣವನ್ನು ಪ್ರೋತ್ಸಾಹಿಸಿ ಕೆಲವು ವಿಷಯಗಳನ್ನು ಮಾತನಾಡಲು ನಿಂತಿದ್ದೇನೆ. ಪ್ರಥಮವಾಗಿ ಅರಣ್ಯ. ನಮ್ಮ ರಾಜ್ಯದಲ್ಲಿ ಅರಣ್ಯ ಚೆನ್ನಾಗಿದೆ. ಆದರೆ ಕೆಲವು ಭಾಗಗಳಲ್ಲಿ ಬಹಳ ನಷ್ಟವಾಗಿದೆ. ಉದಾಹರಣೆಗೆ ಹೇಳುವುದಾದರೆ, ವಿರಾಜಪೇಟೆ, ನಾಗರ ಹೊಳೆ ಹತ್ತಿರ ಇರುವ ಫಾರೆಸ್ಟಿನಲ್ಲಿ ಅನೇಕ ಗಂಧದ ಮರಗಳು ಕಾಣೆಯಾಗಿವೆ. ರಾತ್ರಿ ಕಂಡಂಥ ಮರಗಳು ಬೆಳಿಗ್ಗೆ ಇರುವುದಿಲ್ಲ. ನಮ್ಮ ಕಡೆ ಕೇರಳ ಗಡಿ ಮುಟ್ಟುವುದರಿಂದ ಈ ರೀತಿ ಕಳ್ಳತನವಾಗುತ್ತದೆ. ಇದನ್ನು ತಪ್ಪಿಸಲು ಅಲ್ಲಿಗೆ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿ ಕಂಟ್ರೋಲ್ ಮಾಡಲೇಬೇಕಾಗುತ್ತದೆ. ಈ ದಿಸೆಯಲ್ಲಿ ಬಾರ್ಡರ್ ಪ್ರೊಟೆಕ್ಷನ್ ಅಫೀಸರ್ಸ್ ಎಂದು ಸರ್ಕಾರ 15 ಜನರನ್ನು 9 ತಿಂಗಳ ಹಿಂದೆ ನೇಮಕಮಾಡಿತ್ತು. ಅರಣ್ಯವನ್ನು ಕಾಯಲಿಕ್ಕೆ ನೇಮಕವಾದ ಅವರಿಗೆ ಕಳೆದ 9 ತಿಂಗಳಿಂದ ಸಂಬಳವಿಲ್ಲದೆ ಕೊರಗುತ್ತಿರುವುದನ್ನು ನೋಡಿದರೆ ತುಂಬ ದುಃಖವಾಗುತ್ತದೆ. ಯಾವ ಜನರನ್ನು ನೀವು ಅರಣ್ಯ ರಕ್ಷಣೆ ಮಾಡುವುದಕ್ಕೆ ಬಿಟ್ಟಿದ್ದೀರಿ. ಅವರಿಗೆ ಬೇರೆ ರೀತಿಯಲ್ಲಿ ಹಣ ಖರ್ಚುಮಾಡಿ ಪ್ರಯೋಜನ ವಿಲ್ಲ. ಅವರ ಸಮಸ್ಯೆ ಆದಷ್ಟು ಬೇಗನೆ ನೀಗಬೇಕು ಎಂದು ಕೇಳಿಕೊಳ್ಳುತ್ತೇನೆ. ವಿರಾಜಪೇಟೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿಯಾಗಬೇಕು. ನಮ್ಮದು ಕೊಡಗಿಗೆ ಸಂಬಂಧಪಟ್ಟ ಹಿಂದುಳಿದ ಪ್ರದೇಶವಾಗಿದೆ. ವಿದ್ಯುಚ್ಛಕ್ತಿ ಪೂರೈಕೆ ಹೆಚ್ಚಿನ ಮಟ್ಟದಲ್ಲಿ ಆಗಬೇಕು. ಇನ್ನು ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸರ್ಕಾರ

(ಶ್ರೀ ಜಿ. ಕೆ. ಸುಬ್ಬಯ್ಯ)

ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಾ ಇರುವುದು ಸ್ತುತ್ಯವಾಗಿದೆ. ಕೆಲವು ಭಾಗಗಳಲ್ಲಿ ವಿದ್ಯಾಮಟ್ಟ ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಸರ್ಕಾರದವರು ಯಾವ ಒಂದು ತತ್ವವನ್ನು ಇಟ್ಟುಕೊಂಡು ಕಂಪಲ್ಸರಿ ಪ್ರೈಮರಿ ಎಜ್ಯುಕೇಷನ್ ಯೋಜನೆ ಮಾಡಿದ್ದಾರೆ ಅದು ಫಲದಾಯಕವಾಗುತ್ತಾ ಇಲ್ಲ. ಪ್ರತಿವರ್ಷ ಉಪಾಧ್ಯಾಯರನ್ನು ಎನುಮರೇಷನ್ ಮಾಡುವುದಕ್ಕೆ ಕಳುಹಿಸುತ್ತಾರೆ. ಕಂಪಲ್ಸರಿ ಪ್ರೈಮರಿ ಎಜುಕೇಷನ್ ಏನಾಗಿದೆ, ಕಂಪಲ್ಸರಿ ಪ್ರೈಮರಿ ಎನುಮರೇಷನ್ ಆಗಿದೆ. ಉಪಾಧ್ಯಯರು ಜಿ. ಪಿ. ಇ. ನಂಬರ್ ಹಾಕುತ್ತಾರೆ. ಲಿಸ್ಟ್ ಇರುವುದಿಲ್ಲ. ನನ್ನ ಅರ್ಥ It is not compulsory Primary Education but it has been termed as compulsory enumeration. ಎನುಮರೇಷನ್ ಮಾತ್ರ ಆಗುತ್ತಾ ಇದೆ. ಹರಿಜನ ಗಿರಿಜನರ ವಿದ್ಯಾಭಿವೃದ್ಧಿ ಸರಿಯಾಗಿ ನಡೆಯುತ್ತಾ ಇಲ್ಲ. ಅದನ್ನು ಸರಿ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ದೇಶದಲ್ಲಿ ಸಮಾಜಕಲ್ಯಾಣ ಕಾರ್ಯಕ್ರಮದಲ್ಲಿ 17 ಇನ್‌ಸ್ಟಿಟ್ಯೂಷನ್‌ಗಳಿವೆ. ನನಗೆ ಗೊತ್ತಿರುವ ಹಾಗೆ ಕಳೆದ 2-3 ತಿಂಗಳಿಂದ ಅಕ್ಕಿ ಅಭಾವದಿಂದ ಆಶ್ರಮ ಶಾಲೆಗಳು, ಹಾಸ್ಟೆಲ್‌ಗಳು ನಡೆದಿಲ್ಲ. ಇದು ವ್ಯಸನಕರವಾದ ಸಂಗತಿಯಾಗಿದೆ. ಹರಿಜನ-ಗಿರಿಜನರ ಮಕ್ಕಳ ಸಂಖ್ಯೆಕೂಡ ಪ್ರತಿಯೊಂದು ಇನ್‌ಸ್ಟಿಟ್ಯೂಷನ್‌ನಲ್ಲಿ ಕಡಿಮೆಯಾಗುತ್ತಾ ಇದೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಎಲ್ಲಾ ದಿಕ್ಕಿನಲ್ಲಿ ಬೇಕಾದಷ್ಟು ಹಣವನ್ನು ಖರ್ಚುಮಾಡಿ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹ ಕೊಡುತ್ತಾ ಇರುವುದು ಸರಿ. ಹಿಂದಿನ ಕಾಲದಲ್ಲಿ ವಿದ್ಯಾಭಿವೃದ್ಧಿ ಮಾಡುವುದಕ್ಕೆ ಏನು ಮಾಡುತ್ತಿದ್ದರು ಎಂದು ಹೇಳಿದರೆ, ಶ್ರೀರಾಮನಾಮವ ಬರೆಯದ ಕೈ, ಮಕ್ಕಳನ್ನು ಎತ್ತಿ ಮುದ್ದಿಸದ ಕೈ, ಬಿಕ್ಷಕನಿಗೆ ಭಿಕ್ಷೆ ನೀಡದ ಕೈ ಮರಗೈ ಎಂದು ಹಿಂದಿನ ಸರ್ವಜ್ಞ ಕವಿ ಮಾಡಿದ್ದಾರೆ. ನನಗನ್ನಿಸುತ್ತದೆ, ಈ ರೀತಿ ವಿದ್ಯಾಕ್ಷೇತ್ರಕ್ಕೆ ವಿಪರೀತವಾಗಿ ಹಣ ಖರ್ಚುಮಾಡುವಾಗ ಈ ಪದ ಯಾವ ಮಟ್ಟಕ್ಕೆ ಹೋಗುತ್ತದೆ ಎಂದರೆ, ಪೊಲೀಸರಿಗೆ ಕಲ್ಲು ಹಾಕದ ಕೈ, ಬೀದಿ ದೀಪಗಳನ್ನು ಒಡೆಯದ ಕೈ, ಬೀಡಿ, ಸಿಗರೇಟು, ಶರಾಬು ಮುಟ್ಟದ ಕೈ ಮರಗೈ, ಎಂದು ಅನ್ನಿಸುತ್ತದೆ. ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಈ ಮಟ್ಟಕ್ಕೆ ಕೈಗಳು ಇಳಿಯದ ರೀತಿಯಲ್ಲಿ ನೋಡಿಕೊಂಡು ಮುಂದೆ ಬರತಕ್ಕ ವಿದ್ಯಾರ್ಥಿ ಜನಾಂಗವನ್ನು ಸುಸಂಸ್ಕೃತರನ್ನಾಗಿ ಮಾಡಲಿಕ್ಕೆ ಶ್ರಮ ಪಡಬೇಕೆಂದು ನನ್ನ ಕೋರಿಕೆಯಾಗಿದೆ.

ಕಡೆಯದಾಗಿ ಕಾವೇರಿ ನದಿ ನೀರನ್ನು ಕೊಡಗಿನಲ್ಲಿ ಹೆಚ್ಚಿಗೆ ಉಪಯೋಗ ಮಾಡುವುದಿಲ್ಲ; ಕಾವೇರಿನಲ್ಲಿ ಇಲ್ಲಿನ ಪುಣ್ಯಕ್ಷೇತ್ರದಿಂದ ಹರಿಯುತ್ತದೆ. ಕಾವೇರಿ ನದಿಗೆ ಹೊಸಪಟ್ಟಣದಲ್ಲಿ ಅಣೆಕಟ್ಟು ಕಟ್ಟಿ ಪೆರಿಯಾಪಟ್ಟಣ, ಹುಣಸೂರು ಭಾಗಕ್ಕೆ

ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಯೋಜನೆ ತಯಾರು ಮಾಡಿದ್ದಾರೆ. ಇದರಿಂದ ಇಡೀ ಕೊಡಗಿನ ಕೆಲವು ಭಾಗಗಳು ಮುಳುಗಡೆಯಾಗಿ, ಫಲವತ್ತಾದ ಜಮೀನು ನೀರಿನ ಅಡಿಯಲ್ಲಿ ಹೋಗುತ್ತದೆ. ತಮಗೆ ಗೊತ್ತಿರುವಹಾಗೆ ಫಾರೆಸ್ಟ್‌ನಲ್ಲಿ ಜಮೀನು ವ್ಯವಸಾಯ ಮಾಡುವುದಕ್ಕೆ ಬಿಡುವುದಿಲ್ಲ. ಇಲ್ಲಿ ನಿರ್ಗತಿಕರಿಗೆ ನೆಲ ಕೊಡಲಿಕ್ಕೆ ಸಾಧ್ಯವಿದೆ. ಆದುದರಿಂದ ಈ ಯೋಜನೆಯನ್ನು ಕೈಬಿಟ್ಟು ಜಮೀನನ್ನು ಮುಳುಗಿಸದೆ, ಬೇರೆ ವಿಧದಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದುದರಿಂದ ಈ ಯೋಜನೆಯನ್ನು ಕೈಬಿಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4 P. M.

‡ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿ ನಗರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣದ ಬಗ್ಗೆ ಸುಮಾರು ಆರು ದಿವಸಗಳ ಕಾಲ ಬೇಕಾದಷ್ಟು ಚರ್ಚೆ ನಡೆಯಿತು. ತಮಗೆ ಗೊತ್ತಿದ್ದ ಹಾಗೆ ಅನೇಕ ಮಂದಿ ಸದಸ್ಯರು ಸಂದರ್ಭಕ್ಕನುಸಾರವಾಗಿ ವಿಮರ್ಶೆಗಳಿಗಿಂತ ಕಟುವಾದ ಟೀಕೆಗಳನ್ನು ಮಾಡಿದ್ದು ಅಲ್ಲದೆ ಇದು ಸಾಂಪ್ರದಾಯಿಕ ಭಾಷಣ ಅನ್ನುವ ಮಟ್ಟಕ್ಕೆ ಹೋದದ್ದು ನಾವೆಲ್ಲ ಕೇಳಿದ್ದೇವೆ. ದೇಶದಲ್ಲಿ ಸಮಸ್ಯೆಗಳು ಏನೋ ಇವೆ. ಈ ಟೀಕೆಗಳಲ್ಲಿ ನನಗೂ ನಂಬಿಕೆ ಇದೆ, ಆದರಲ್ಲೂ ರಚನಾತ್ಮಕವಾದ ಟೀಕೆಗಳಲ್ಲಿ ನನಗೆ ವಿಶೇಷ ನಂಬಿಕೆ ಇದೆ. ವಿರೋಧ ಪಕ್ಷದವರ ಅಭಿಪ್ರಾಯಕ್ಕೂ ಹೆಚ್ಚಿನ ರೀತಿಯಲ್ಲಿ ಅಮೆಂಡ್‌ಮೆಂಟ್ ಕೊಡುವುದರಲ್ಲಿ ನಾನು ಮೊದಲನೆಯವನು. ಹೀಗಿರುವಾಗ ರಾಜ್ಯಪಾಲರು ಸಂಸ್ಥಾನದಲ್ಲಿ ಹಿಂದೆ ಏನು ನಡೆದಿದೆ, ಮುಂದೆ ನಾವು ಏನು ಮಾಡುತ್ತೇವೆ ಎನ್ನುವುದನ್ನು ಒಂದು ಪಕ್ಷಿ ನೋಟದ ರೂಪದಲ್ಲಿ ನಮ್ಮ ಮುಂದೆ ಇಟ್ಟಿದ್ದಾರು. ನಾನು ಮೊದಲೇ ಹೇಳಿದ ಹಾಗೆ ಸರ್ಕಾರ ಮತ್ತು ಸಾರ್ವಜನಿಕರಿಗೆ ಸರಿಯಾದ ಸಹಕಾರ ಇರಬೇಕು. ಎನ್ನುವುದರಲ್ಲಿ ನಾವು ಒಬ್ಬ ಟೀಕೆ ಮಾಡುವುದು ಸುಲಭ ಆದರೆ ಯಾವುದನ್ನು ಕಾರ್ಯಗತ ಮಾಡಬೇಕಾದರೆ ಅದರಲ್ಲಿ ಇದೊಂದು ಲೋಪದೋಷಗಳು ಬರತಕ್ಕ ಎಡರುತೊಡರುಗಳು ಏನು ಎನ್ನುವುದನ್ನು ಗಮನಿಸಬೇಕು. ಬರಗಾಲ ಈ ದೇಶದಲ್ಲಿ ಬರಬಾರದು, ದೇಶ ಸುಭಿಕ್ಷವಾಗಿ ಇರಬೇಕು. ಪ್ರತಿಯೊಬ್ಬ ಯುವಕ ಯುವತಿಯರಿಗೆ ಉದ್ಯೋಗ ಕಲ್ಪಿಸಿಕೊಡಬೇಕು. ಜೀವನದ ಬಾಳು ಹೆಚ್ಚಿನ ರೀತಿಯಲ್ಲಿ ಆಗಬೇಕು ಎನ್ನುವ ಆಸೆ ಆಕಾಂಕ್ಷೆ ಪ್ರತಿಯೊಬ್ಬರಿಗೂ ಇದೆ. ಆದರೆ ಈಗ ಇರುವ ಪರಿಸ್ಥಿತಿಯಲ್ಲಿ ಅದನ್ನು ಹೇಗೆ ಮಾಡುವುದಕ್ಕೆ ಸಾಧ್ಯ ಎಂದು ಯೋಚನೆ ಮಾಡಬೇಕು. ಅಧ್ಯಕ್ಷರು ತಮಗೆ ಗೊತ್ತಿರುವ ಹಾಗೆ ಕೆಲವು ಸಂದರ್ಭಗಳು ಸ್ಥಳೀಯವಾಗಿರುತ್ತವೆ. ಕೆಲವು ರಾಷ್ಟ್ರೀಯವಾಗಿರುತ್ತವೆ. ಇನ್ನು ಕೆಲವು ಅಂತರ್ ರಾಷ್ಟ್ರೀಯವಾಗಿರುತ್ತವೆ. ಉದಾಹರಣೆಗೆ ಬರಗಾಲ ಬರುವುದು ಯಾರಿಗೂ ಇಷ್ಟ ಇರುವುದಿಲ್ಲ. ಬರಗಾಲವನ್ನು ಎದುರಿಸುವುದು ಪ್ರತಿಯೊಬ್ಬ ಮಾನವನ ಕರ್ತವ್ಯ, ಬರಗಾಲ ಬರದ

(ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು)

ಹಾಗೆ ಏನು ಮಾಡಬೇಕೋ ಅದನ್ನು ನಾವು ಮಾಡಬೇಕು. ನಾವು ಈ ಸಂದರ್ಭದಲ್ಲಿ ಒಂದು ಮಾತನ್ನು ಗಂಟಾಘೋಷವಾಗಿ ಒತ್ತಿ ಹೇಳುತ್ತೇನೆ. ಹಿಂದೆ ಎಂದೂ ಮಾಡದಷ್ಟು ಕೆಲಸ ನಾವು ಮಾಡಿದ್ದೇವೆ. ಇದಕ್ಕೆ ಗುಜರಾತಿನಲ್ಲಿ ಏನು ನಡೆಯುತ್ತಿದೆ ಎಂದು ಒಂದು ಸಣ್ಣ ಉದಾಹರಣೆ ಕೊಟ್ಟರೆ ಅರ್ಥವಾಗುತ್ತದೆ. ಅಂತಹ ಪರಿಸ್ಥಿತಿ ಹೋದ ವರ್ಷ ನಮ್ಮ ಸಂಸ್ಥಾನದಲ್ಲಿ ಒದಗಿತ್ತು, ಆಗ ಕೇಂದ್ರ ಸರ್ಕಾರದವರ ದಯದಿಂದ ನಮ್ಮ ಸರ್ಕಾರದವರು ಆ ಒಂದು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಸುಮಾರು 60 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಜನ ಹದಗೆಟ್ಟು ಹೋಗದ ಹಾಗೆ ನಮ್ಮ ಸರ್ಕಾರ ಮಾಡಿಲ್ಲವೇನು ? ಕರ್ನಾಟಕ ಎನ್ನುವ ಹೆಸರನ್ನು ನಮ್ಮ ರಾಜ್ಯಕ್ಕೆ ಇಡಬೇಕೆಂದು 25 ವರ್ಷದಿಂದ ಮೀನ, ಮೇಷ ನೋಡುತ್ತ ಇದ್ದಾಗ ಒಂದು ದಿಟ್ಟತನದಿಂದ ಹೆಜ್ಜೆ ಇಟ್ಟು ಕರ್ನಾಟಕ ಹೆಸರನ್ನು ನಮ್ಮ ರಾಜ್ಯಕ್ಕೆ ಇಡಲಿಲ್ಲವೇನು. ಅದೇ ರೀತಿ ಯಾವ ನೊಂದ ಜನ ಇದ್ದಾರೆ, ಯಾರು ಬಡತನಕ್ಕೆ ಗುರಿಯಾಗಿದ್ದಾರೆ, ಅವರ ಬಾಳಿಗೆ ಮೆರಗು ಕೊಡುವುದ ಕ್ಕೋಸ್ಕರ, ಹಿಂದುಳಿದ ಜನಾಂಗದ ಆಯೋಗವನ್ನು ರಕ್ಷಿಸಿಲ್ಲವೇನು, ಎಲ್ಲಕ್ಕಿಂತ ಮಿಗಿಲಾಗಿ 1956ರಿಂದ 1973ರ ವರೆಗೆ ಬರೀ ಭಾಷಣ ಬರವಣಿಗೆಗಳಲ್ಲಿ ಇದ್ದುದು ಕವಿಗಳ ಕನಸು ನೆನಸಾಗಲಿಲ್ಲವೇನು ? ಭೂಸುಧಾರಣೆ ಕಾನೂನು ತರಲಿಲ್ಲವೇನು? ಈ ಭೂಸುಧಾರಣೆ ಕಾನೂನಿಂದ ನಾಲ್ಕುವರೆ ಲಕ್ಷ ಎಕರೆ ಜಮೀನಿಗೆ ಉಳುವವನೇ ಒಡೆಯನಾಗತಕ್ಕ ಕಾಲ ಬಂದಿಲ್ಲ ಏನು ? ಅದೇ ತರಹ ಐ. ಡಿ ಸೆಂಟ್ರಲೈಸೇಷನ್ ಆಫ್ ಇಂಡಸ್ಟ್ರೀಸ್ ಮಾಡಬೇಕು ಎನ್ನುವ ಉದ್ದೇಶದಿಂದ 40 ಪರ್ಸೆಂಟ್ ಇಂಡಸ್ಟ್ರೀಸ್ ಇಲ್ಲಿ ಕೇಂದ್ರಿಕೃತವಾಗಿರುವುದನ್ನು ತೆಗೆಯುವುದಕ್ಕೆ ಸರ್ಕಾರದವರು ಕೆಲವು ಬೋರ್ಡುಗಳನ್ನು ಮೊನ್ನೆ ತಾನೆ ಮಾಡಿದ್ದಾರೆ. ವುಲ್‌ಬೋರ್ಡ್, ಮಾಡಿ ಅದರಿಂದ ನೂರಾರು ಜನಕ್ಕೆ ಸಹಾಯವಾಗುವುದಿಲ್ಲ ಏನು. ಲೆದರ್ ಬೋರ್ಡು ಮಾಡಿಲ್ಲವೇನು, ಅದರಿಂದ ಸಾವಿರಾರು ಜನಕ್ಕೆ ಕೆಲಸ ಸಿಗತಕ್ಕ ಅವಕಾಶ ಇಲ್ಲವೇನು. ವಾಕ್ಫ್ ಬೋರ್ಡನ್ನು ಸರ್ಕಾರ ಮಾಡಿಲ್ಲವೇನು, ಯಾವ ಯಾವ ಕಾರ್ಯಗಳನ್ನು ಈ 27 ತಿಂಗಳಲ್ಲಿ ನಾವು ಮಾಡಿದ್ದೇವೆ, ಎನ್ನುವುದನ್ನು ತಮ್ಮ ಮುಂದಿಟ್ಟಿದ್ದೇವೆ. ದೇಶದಲ್ಲಿ ಇರತಕ್ಕ ನ್ಯೂನತೆಗಳನ್ನು ತಪ್ಪಿಸುವುದ ಕ್ಕೋಸ್ಕರ, ಬಡತನ ನೀಡುವುದಕ್ಕೋಸ್ಕರ ಕಾಟೇಜ್ ಇಂಡಸ್ಟ್ರೀ, ವಿಲೇಜ್ ಇಂಡಸ್ಟ್ರಿ, ರೂರಲ್ ಇಂಡಸ್ಟ್ರೀ ಅವುಏನು ಇವೆ ಅವನ್ನು ವಿಕೇಂದ್ರಿಕರಣ ಮಾಡಿ ಜನ ಈಗ ಎಲ್ಲಿ ಇದ್ದಾರೆ ಅವರು ಅಲ್ಲಿ ಇದ್ದು ಹೊಲಸೆ ಬರದ ಹಾಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅದೇ ತರಹ ವಿದ್ಯಾಭ್ಯಾಸದ ಬಗ್ಗೆ ತಾವು ಕಂಡಾಗ ಹಾಗೆ ನಾವು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೇವೆ, ಅಂದರೆ ಬಜೆಟ್ಟಿನ 1/5 ಭಾಗದಷ್ಟು ಹಣ ಈ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೇವೆ. ಇದರಿಂದ ಸರ್ಕಾರ ಕಂಪಲ್‌ಸರಿ

ಎಜುಕೇಷನ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮೊನ್ನೆ ತಾನೇ 620 ಜೂನಿಯರ್ ಕಾಲೇಜುಗಳನ್ನು ಸರ್ಕಾರದವರು ಓಪನ್ ಮಾಡಿದ್ದಾರೆ. ಹೀಗೆ ಸುಮಾರು 67 ಕೋಟಿ ರೂಪಾಯಿ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ವಂದನಾ ನಿರ್ಣಯದ ಮೇಲೆ ನಾವು ಏನು ಮಾತನಾಡಿದ್ದೇವೆ ಅದರ ಬಗ್ಗೆ ಅವರು ರಿಪ್ಲೈ ಮಾಡಬೇಕೆ, ಅಥವಾ ರಿಪ್ಲೈ ಮಾಡುತ್ತ ಇರುವಾಗ ಮತ್ತೊಂದು ಭಾಷಣ ಮಾಡುವುದು ಸರಿಯೇ.

MR. DEPUTY SPEAKER.—Then Hon'ble member is replying in a form which is peculiarly his own. The other replies will come soon from the Government.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು : ನಾನು ಮೊದಲೇ ಹೇಳಿದೆ. ರಚನಾತ್ಮಕ ಟೀಕೆ ಟಿಪ್ಪಣಿಗಳನ್ನು ಒಪ್ಪಿಕೊಳ್ಳುತ್ತೇನೆ ಎಂದು. ಗವರ್ನರ್ ಭಾಷಣದಲ್ಲಿ ಸರ್ಕಾರದವರು ಹಿಂದೆ ಏನು ಮಾಡಿದ್ದರು ಮುಂದೆ ಏನು ಮಾಡುತ್ತಾರೆ ಎನ್ನುವ ವಿಚಾರ ಹೇಳಲಿಲ್ಲ ಎಂದು ಟೀಕೆ ಟಿಪ್ಪಣಿಗಳನ್ನು ಮಾಡಿದರು, ಅದಕ್ಕೆ ಏನು ಉತ್ತರ ಹೇಳಬೇಕೋ, ಬೇಡವೋ ? ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂಥ ಕೋಪ ಎನ್ನುವಂತೆ ನಿಮಗೆ ಏತಕ್ಕೆ ಕೋಪ ಬಂತು. ಇನ್ನು ವಿದ್ಯಾಭ್ಯಾಸಕ್ಕಾಗಿ ಸಾಕಾದಷ್ಟು ಅನುಕೂಲತೆಗಳನ್ನು ಜನರಿಗೆ ಕಲ್ಪಿಸುತ್ತಿದ್ದಾರೆ. ಏಯಿಡೆಡ್ ಸ್ಕೂಲುಗಳು, ಕಮರ್‌ಸಿಯಲಿಸ್ಟ್ ಆಗಿದ್ದವು ಅದಕ್ಕೆ ಒಂದು ಬಿಲ್ಲನ್ನು ತರುತ್ತಾ ಇದ್ದೇವೆ. ಈ ಮೆಡಿಕಲ್ ಇನ್‌ಸ್ಟಿಟ್ಯೂಷನ್‌ಗಳ ಸಲುವಾಗಿ ಮಂತ್ರಿಮಂಡಲ ಬಂದ ಮೇಲೆ ಒಂದು ಸಪರೇಟ್ ಯೂನಿವರ್‌ಸಿಟಿ ಮಾಡಬೇಕೆಂದು ಹೋದದ್ದು ಭಾರತದಲ್ಲಿ ಮೊದಲನೆ ಹೆಜ್ಜೆ ಅಲ್ಲವೆ. ಇದೇ ತರಹ ಆಹಾರ ಸಮಸ್ಯೆ ಮೇಲೆ ಬೇಕಾದಷ್ಟು ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ಆದರೆ ಸರ್ಕಾರದ ನಿಲುವನ್ನು ಬದಲಾಯಿಸಲು ಯಾರ ಕೈಯಿಂದಲೂ ಆಗುವುದಿಲ್ಲ. ಕಾರಣ ಬಡ ಬಗ್ಗ ಜನರಿಗೆ ಅನ್ನ ಕೊಡಬೇಕು, ವೀಕರ್ ಸೆಕ್ಷನ್‌ಗೆ ರಕ್ಷಣೆ ಕೊಡಬೇಕು ಎಂದು ನಮಗೂ ಸಹ ಆಸೆ ಇದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ರೈತರಿಗೆ ಈ ತರಹ ಸೆಪರೇಟ್ ಪ್ರೈಸ್ ಅಥವಾ ರೆಮ್ಯುನರೇಟೀವ್ ಪ್ರೈಸ್ ಯಾವಾಗಲೂ ಸಿಕ್ಕಲಿಲ್ಲ, ಸುಗ್ಗಿ ಕಾಲದಲ್ಲಿ ಬೆಲೆ ಬಿದ್ದುಹೋಗುತ್ತಿತ್ತು, ಈಗ ಒಂದು ಕ್ವಿಂಟಾಲ್ ಭತ್ತವನ್ನು 100 ರೂಪಾಯಿಗೆ ಮಾರುತ್ತಿದ್ದಾರೆ ಹೀಗೆ ಹಿಂದೆ ಎಂದೂ ಕಾಣದಷ್ಟು ಸಪೋರ್ಟಿನ ಪ್ರೈಸ್ ಅನ್ನು ರೈತರಿಗೆ ಕೊಟ್ಟಿರುವುದರಿಂದ ಪ್ರೈಸ್ ಸ್ಟೆಬಲಿಟಿ ಬಂದಿದೆ. ಹೋದ ವರ್ಷ ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳಲ್ಲಿ ಏನು ಕಷ್ಟ ಬಂದಿತ್ತು, ಆ ಕಷ್ಟವನ್ನು ನೋಡ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಬಾರದು ಎನ್ನುವ ಉದ್ದೇಶದಿಂದ ಮತ್ತು ಬಫರ್ ಸ್ಟಾಕ್ ಬಿಲ್ಡ್ ಅಪ್ ಮಾಡುವ ಉದ್ದೇಶದಿಂದ ಈ ಡಿಸ್ಟ್ರಿಕ್ಟ್ ಟು ಡಿಸ್ಟ್ರಿಕ್ಟ್ ಬ್ಯಾನ್ ಮುಂದುವರಿಸಿದ್ದಾರೆ. ಆದರೆ ಸೊಸೈಟಿಗಳು ಎಷ್ಟು ಬೇಕಾದರು ಕಾಂಪಿಟಿಟೀವ್ ರೇಟಿನಲ್ಲಿ ಪರ್‌ಚೇಸ್ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ, ಅದು ದೊಡ್ಡ ಹೆಜ್ಜೆ ಅಲ್ಲವೆ, ಮಾತೆತ್ತಿದರೆ ಪ್ರತಿಯೊಬ್ಬರಿಗೂ ಆಹಾರ ಕೊಡಬೇಕೆಂದು, ಈ ಆಹಾರ ಸಮಸ್ಯೆಯನ್ನು ಬೃಹದಾಕಾರವಾಗಿ ಪಿಶಾಚಿಯನ್ನಾಗಿ ಮಾಡುತ್ತಿದ್ದೀರಿ. ಕಾರಣ ಏನು ಎನ್ನುವುದು ತಮಗೆಲ್ಲಾ ಗೊತ್ತಿದೆ. ಈಗ ರೇಷನಿಂಗ್‌ನಲ್ಲಿ ಎರಡು ತರಹ ಇದೆ. ಒಂದು ಇನ್‌ಫಾರ್ಮಲ್ ರೇಷನಿಂಗ್, ಎರಡು ಸ್ಟ್ಯಾಚ್ಯುಟರಿ ರೇಷನಿಂಗ್ ಎಂದು. ನಮ್ಮ ದೇಶದಲ್ಲಿ ಸ್ಟ್ಯಾಚುಟರಿ ರೇಷನಿಂಗ್ ಇದ್ದಿದ್ದರೆ ಅಂಗಡಿಯಲ್ಲಿ ಹೊರಗಡೆ ಅಕ್ಕಿಯನ್ನು ಒಂದು ಪಾವು ಕೊಡುವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ನಾವು ಇನ್‌ಫಾರ್ಮಲ್ ರೇಷನಿಂಗ್ ತಂದಿದ್ದರ ಪರಿಣಾಮವಾಗಿ ಬೇರೆ ಅಕ್ಕಿಯನ್ನು ಕೊಂಡುಕೊಳ್ಳಲು ಅವಕಾಶ ಇದೆ. ಅದೂ ಅಲ್ಲದೆ ನಮ್ಮ ಸರ್ಕಾರದವರು ಈ ರೇಷನಿಂಗ್ ಪದ್ಧತಿಯನ್ನು ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಇರುವ ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲೂ ಕೂಡ ವಿಸ್ತರಿಸುತ್ತೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದ ಜನರು ಗುಜರಾತ್‌ನಲ್ಲಿ ಮತ್ತು ಬೇರೆ ಬೇರೆ ಪ್ರಾಂತಗಳಲ್ಲಿ ಏನು ಗಲಭೆ ಆಗುತ್ತದೋ ಅದರಂತೆ ಆಗಬಾರದು ಮಾದರಿ ಮೈಸೂರು ಜನರಾಗಿ ಬಾಳಬೇಕು ಎನ್ನುವ ಒಂದು ಉದ್ದೇಶ ಇಟ್ಟುಕೊಂಡು ಈ ಆಹಾರದ ಸಮಸ್ಯೆ ಬಗೆಹರಿಸಬೇಕು ಎನ್ನುವ ಮನೋಭಾವ ತಳೆದಿದ್ದಾರೆ.

ಇನ್ನು ಇದರ ಜೊತೆಗೆ ಕೇಂದ್ರದ ನೆರವಿನಿಂದ ಕೆಲವು ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೆ. ಅಲ್ಲದೆ ಹಿಂದೆ ಕೆಲವು ಪ್ರಾಜೆಕ್ಟ್‌ಗಳ ಕೆಲಸಗಳನ್ನು ಏನು ತೆಗೆದುಕೊಂಡಿದ್ದರೋ ಅದನ್ನು ಪೂರ್ಣ ಮಾಡಬೇಕಾದರೆ ಇನ್ನು 300 ಕೋಟಿ ರೂಪಾಯಿ ಆದರೂ ಬೇಕು. ಈಗ ಏನು ಪ್ರಾಜೆಕ್ಟ್ ಕೆಲಸಕ್ಕೆ 72 ಕೋಟಿ ರೂಪಾಯಿ ತಂದಿದ್ದರೋ ಅದು ಸಾಲದು. ಆದುದರಿಂದ ಈ ಪ್ರಾಜೆಕ್ಟ್ ಕೆಲಸವನ್ನು ಕಂಪ್ಲೀಟ್ ಮಾಡುವುದಕ್ಕೆ ಕೇಂದ್ರ ಸರ್ಕಾರದೊಡನೆ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಇದರ ಜೊತೆಗೆ ಕಾಳೀನದಿ ಪ್ರಾಜೆಕ್ಟ್ ಕೆಲಸವನ್ನೂ ಸಹ ಕೇಂದ್ರ ಸರ್ಕಾರದವರೇ ತೆಗೆದುಕೊಂಡಿದ್ದಾರೆ. ಇಷ್ಟು ಕೆಲಸ ನಮ್ಮ ಸರ್ಕಾರದವರು ಮಾಡಿದರೂ ಕೂಡ 27 ತಿಂಗಳಿನಿಂದ ನಮ್ಮ ಸರ್ಕಾರ ಏನು ಅದು ಯಾವ ಕೆಲಸವನ್ನೂ ಸಹ ಸಾಧಿಸಿಲ್ಲ, ಸರ್ಕಾರಿ ಬೊಕ್ಕಸವನ್ನು ಖರ್ಚು ಮಾಡಿದ್ದಾರೆ ಎಂದು ಆರೋಪಣೆ ಮಾಡಿದರೆ ಏನು ಪ್ರಯೋಜನ ? ಈ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿರುವುದು ಮಹಾ ಸಾಧನವಲ್ಲವೆ ?

ಇನ್ನು ಇದರ ಜೊತೆಗೆ ಇನ್ನೂ ಅನೇಕ ಡೆವೆಲಪ್‌ಮೆಂಟ್ ಇರ್ರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿರುವುದು ತಮಗೆಲ್ಲಾ ಗೊತ್ತಿದೆ. ಇದನ್ನು ಮೂರು ತರಹವಾಗಿ ವಿಂಗಡಿಸಿದ್ದಾರೆ. (1) ಮೈನರ್ ಇರಿಗೇಷನ್, (2) ಮೀಡಿಯಂ ಇರ್ರಿಗೇಷನ್ (3) ಮೇಜರ್ ಇರ್ರಿಗೇಷನ್ ಎಂದು. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡಿದ ಹಾಗೆ ಈ ಪ್ರಾಜೆಕ್ಟ್‌ಗಳು ಕುಂಠಿತವಾಗದೇ ಇದ್ದ ಹಾಗೆ ಇದಕ್ಕೆ ಒಂದು ಸ್ಪೆಷಲ್ ಪ್ರಿಯಾರಿಟಿ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ದೇಶ ಅಭಿವೃದ್ಧಿಯಾಗಬೇಕಾದರೆ ಪ್ರೊಡಕ್ಷನ್ ಅಂಡ್ ಡಿಸ್ಟ್ರಿಬ್ಯೂಷನ್ ಆರ್ ಇಂಟರ್ ರಿಲೇಟೆಡ್ ಆಗಿರಬೇಕು. ಬೇಕಾದರೆ ನಮ್ಮ ದೇಶದಲ್ಲಿ ಒಂದು ಕನ್ನಡಕ ತಯಾರು ಮಾಡಬೇಕಾದರೆ, ಒಂದು ವಾಚ್ ತಯಾರು ಮಾಡ ಬೇಕಾದರೆ ಒಂದೇ ದಿವಸದಲ್ಲಿ ತಯಾರು ಮಾಡಬಹುದು.

ಆದರೆ ಅಕ್ಕಿ ತಯಾರು ಮಾಡಬೇಕಾದರೆ ಮೂರು ತಿಂಗಳು ಬೇಕಾಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಎಲ್ಲವನ್ನೂ ವಿತರಣೆ ಮಾಡುವುದು ಹೇಗೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಆದುದರಿಂದ ಈ ಕೆಲಸಕ್ಕೆ ಸಾರ್ವಜನಿಕರ ಸಹಕಾರ, ಎಲ್ಲಾ ಪಕ್ಷಗಳ ಸಹಕಾರ ಬೇಕು, ಬರೀ ಘೋಷಣೆಯಿಂದ ಮಾಡ ತಕ್ಕಂಥ ಕೆಲಸವಲ್ಲ. ಆದುದರಿಂದ ಈ ಕೆಲಸಗಳಿಗೆ ಎಲ್ಲರ ನೆರವು ಬೇಕು. ನೀವು ಯಾವುದೋ ಕಾರಣ ಕೊಟ್ಟು ಅದನ್ನು ದೊಡ್ಡದನ್ನಾಗಿ ಮಾಡಿ ಹೇಳು ತಿದ್ದೀರಿ. ಹಾಗಾದರೆ ನಾವು ಇಷ್ಟೆಲ್ಲಾ ಮಾಡಿದ್ದು ಮಣ್ಣುಪಾಲು ಆಗಿದೆ ಎಂದು ತೋರಿಸಿರುವುದರಿಂದ ನಾನು ಇದರ ಬಗ್ಗೆ ಒತ್ತಿ ಹೇಳಬೇಕಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಸಮಸ್ಯೆ ಇಡೀ ಭಾರತ ದೇಶದಲ್ಲೇ ಅಲ್ಲ ಇದು ಸ್ಥಳೀಯ ವಾಗಿ, ರಾಷ್ಟ್ರವಾಗಿ, ಅಂತರರಾಷ್ಟ್ರವಾಗಿ ಇದೆ. ಅದನ್ನೆಲ್ಲಾ ನಾವು ನೋಡ ಬೇಕು, ಈ ಸುಭಿಕ್ಷ ಮೈಸೂರು ದೇಶದಲ್ಲಿ ಇಷ್ಟ ಠವ ಟ್ಟಿಗೆ ಇರುವುದನ್ನು ನೋಡಿ ನಾವು ಸಂತೋಷಪಡಬೇಕಾಗುತ್ತದೆ. ಸೀಮೆಯೆಣ್ಣೆ, ಪೆಟ್ರೋಲ್, ಬಟ್ಟೆ ಇವನ್ನೆಲ್ಲಾ ಉದಾಹರಣೆ ತೆಗೆದುಕೊಂಡು ಬೆಲೆ ಏರಿಕೆ ಬಗ್ಗೆ ಹೇಳಿದರೆ ಎಲ್ಲ ರಾಜ್ಯದಲ್ಲೂ ಇರುವಾಗ ಅದಕ್ಕೆ ನಾವೂ ಕೂಡ ಭಾಗಿಗಳಾಗಬೇಕು. ನಮ್ಮ ದೇಶದಲ್ಲಿ ಇಷ್ಟೆಲ್ಲಾ ಕಷ್ಟ ಇದ್ದರೂ ಕೂಡ ನಮ್ಮ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಬೆಂಗಳೂರಿನ ಜನತೆಗೆ ಒಂದು ಮಹತ್ಕಾರ್ಯವನ್ನು ಸಾಧಿಸಿಕೊಟ್ಟಿದ್ದಾರೆ. ಮುಖ್ಯವಾಗಿ ಹೇಳುವುದಾದರೆ ಬಾಯಾರಿದ ಬೆಂಗಳೂರಿಗೆ ಕಾವೇರಿ ಬಂದಿದ್ದಾಳೆ. ಅದರಲ್ಲಿ ಮತ್ತೆ ಎರಡು ಯೋಜನೆಗಳನ್ನು ಹಾಕಿಕೊಂಡಿ ದ್ದಾರೆ. ಅದು 20 ಲಕ್ಷ ರೂಪಾಯಿನ ಪ್ರಾಜೆಕ್ಟ್. ತಮಗೆಲ್ಲಾ ಗೊತ್ತಿದ್ದ ಹಾಗೆ ಭಗೀರಥ ಗಂಗೆಯನ್ನು ತರಬೇಕಾದರೆ ಬಹಳ ಕಷ್ಟಪಟ್ಟು ಆಕಾಶದಿಂದ ಕೆಳಗೆ ತಂದ, ಆದರೆ ನಾವು ಕೆಳಗಡೆಯಿಂದ ಮೇಲಕ್ಕೆ ತರಬೇಕಾಯಿತು. ನಾವು ಇಲ್ಲಿಗೆ ಸುಮಾರು 1700 ಅಡಿ ಎತ್ತರದಿಂದ ಇಲ್ಲಿಗೆ ತರಬೇಕಾಯಿತು. ಕೇವಲ 23 ತಿಂಗಳಿನಲ್ಲಿ ನಮ್ಮ ಸರ್ಕಾರ ಈ ಕೆಲಸವನ್ನು ಮುಗಿಸಿರುವುದು ಹೆಮ್ಮೆಯ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ವಿಷಯುವಲ್ಲವೇ ? ಈಗ ಬೆಂಗಳೂರಿನಲ್ಲಿ ನೀರಿನ ಕೊರತೆ ಕಡಿಮೆಯಾಗಿಲ್ಲವೇ ? ಮೊದಲು ಬೇಸಿಗೆ ಕಾಲದಲ್ಲಿ ನೀರಿಗಾಗಿ ಬೆಂಗಳೂರು ಜನರು ಎಷ್ಟು ಕಷ್ಟಪಡುತ್ತಿದ್ದರು. ಈ ಕಾವೇರಿ ನೀರಿಗೆ ಬಹಳ ಕಷ್ಟಪಟ್ಟು ಈ ಸಮಸ್ಯೆಯನ್ನು ಬಗೆಹರಿಸಲಿಲ್ಲವೇ. ಅದಕ್ಕೋಸ್ಕರ ನಮ್ಮ ಸರ್ಕಾರದವರು ಇರ್ರಿಗೇಷನ್‌ಗೆ ಮತ್ತು ಪವರ್‌ಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಅವೆರಡೂ ದೇಶದ ಆಧಾರ ಸ್ತಂಭಗಳು ಇದ್ದ ಹಾಗೆ ಅದೇರೀತಿ ಈವೊತ್ತಿನ ದಿವಸ ಹೈಡ್ರೋಲ್ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡಿದ್ದಾರೆ. ನಮ್ಮಲ್ಲಿ ವಿದ್ಯುಚ್ಛಕ್ತಿ ದರ ಕಡಿಮೆ, ಬೇರೆ ದೇಶಗಳಲ್ಲಿ ನೋಡಿದರೆ ದರ ಹೆಚ್ಚು ಮಾಡಿದ್ದಾರೆ. ನಮ್ಮ ಸರ್ಕಾರ ಮಾಡಿರುವುದು ಇದು ಒಂದು ಅಚೀವ್‌ಮೆಂಟ್ ಅಲ್ಲವೆ ?

ಇನ್ನು ಇದರ ಜೊತೆಗೆ ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಪ್ರಯತ್ನ ಪಡುತ್ತಾ ಇದ್ದಾರೆ. ಈ ಬಗ್ಗೆ ಕೆಲವು ಟೀಕೆಗಳೂ ಕೂಡ ಬಂದಿವೆ. ಈ ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ನಮ್ಮ ಪ್ರಧಾನ ಮಂತ್ರಿಗಳೇ ಬೇಕಾದಷ್ಟು ಆಶ್ವಾಸನೆ ಕೊಟ್ಟಿದ್ದಾರೆ. ಈವೊತ್ತು ಅದಕ್ಕಾಗಿ ಬೇಕಾದಷ್ಟು ಪ್ರಯತ್ನಗಳು ನಡೆಯುತ್ತಾ ಇವೆ. ಒಟ್ಟಿನಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟನ್ನು ತರುತ್ತಾರೆ.

ಇನ್ನು ತಮಗೆಲ್ಲಾ ಗೊತ್ತಿರುವ ಹಾಗೆ ಕೇಂದ್ರದವರೇ ಕೆಲವು ಅಧಿಕಾರಿಗಳು ಇಲ್ಲಿಗೆ ಬಂದು ನಮ್ಮ ರಾಜ್ಯದಲ್ಲಿರುವ 19 ಜಿಲ್ಲೆಗಳಲ್ಲಿ 11 ಜಿಲ್ಲೆಗಳು ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್ ಎಂದು ಗೊತ್ತು ಮಾಡಿದ್ದಾರೆ. ಅದರಲ್ಲೂ ಕೂಡ ಬಳ್ಳಾರಿ ರಾಯಚೂರು ಮತ್ತು ಧಾರವಾಡ ಈ ಮೂರು ಜಿಲ್ಲೆಗಳು ಮೋಸ್ಟ್ ಬ್ಯಾಕ್‌ವರ್ಡ್ ಎಂದು ಟೆಕ್ನೊ ಎಕನಾಮಿಕ್‌ನವರು ಸರ್ವೆ ಮಾಡಿದ್ದಾರೆ. ಅದನ್ನು ಇಂಡಸ್ಟ್ರೀಸ್‌ಗೆ ಡೀಸೆಂಟ್ರಲೈಸ್ ಮಾಡಬೇಕು ಎಂದು ಹೇಳಿದ್ದಾರೆ. ಹಾಗೆಯೇ ಈವೊತ್ತಿನ ದಿವಸ ನ್ಯಾಷನಲ್ ರಿಸೋರ್ಸಸ್ ಪೊಟೆನ್ಷಿಯಾಲಿಟಿ ಅಂಡ್ ಪ್ರೊಡಕ್ಷನ್ ಏನು ಇದೆ ಅದನ್ನು ಸರ್ವೆ ಮಾಡುತ್ತಿದ್ದಾರೆ. ಅದರಂತೆ ತಮಗೆಲ್ಲಾ ಗೊತ್ತಿರುವ ಹಾಗೆ ಇವೊತ್ತಿನ ದಿವಸ ಚಿತ್ರದುರ್ಗದಲ್ಲಿ ತಾಮ್ರದ ಫ್ಯಾಕ್ಟರಿ ಆಗಿದೆ, ಬೆಳಗಾಂ ನಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ ಆಗಿದೆ, ಹಾಗೆಯೇ ಕುದುರೆ ಮುಖದ ಯೋಜನೆ ಆಗಿದೆ. ಹೀಗೆ ಒಂದಲ್ಲ ಒಂದು ಕೈಗಾರಿಕೆಗಳನ್ನು ಮಾಡಿದ್ದಾರೆ. ಹಾಗೆಯೇ ವಿದ್ಯಾಭ್ಯಾಸದ ಮಟ್ಟದಲ್ಲಿ, ಆರೋಗ್ಯದ ಮಟ್ಟದಲ್ಲಿ, ಪ್ರತಿಯೊಂದು ಮಟ್ಟದಲ್ಲೂ ಒಂದೊಂದು ಉದ್ದೇಶ ಇಟ್ಟುಕೊಂಡು ಅಭಿವೃದ್ಧಿ ಯೋಜನೆಗಳನ್ನು ಮಾಡಬೇಕೆಂದು ಮಾಡಿದ್ದಾರೆ. ಕೇವಲ 2 ವರ್ಷದಲ್ಲಿ ಇಷ್ಟೊಂದು ಪ್ರಗತಿಯನ್ನು ನಮ್ಮ ಸರ್ಕಾರ ಸಾಧಿಸಿದೆ ಎನ್ನುವುದನ್ನು ಈ ಸರ್ಕಾರದ ಮುಂದೆ ಹೇಳಲು ಇಷ್ಟ ಪಡುತ್ತೇನೆ.

ಇನ್ನು ಖಾದಿ ಬೋರ್ಡ್ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಸುಮ್ಮನೆ ಹಿಂದಿನ ಪ್ರಸಂಗವನ್ನೆಲ್ಲಾ ಎತ್ತಿಕೊಂಡು ಹಿಂದಿನವರನ್ನು ಬಯ್ಯುವುದು ಬೇಡ. ಇದರ ವಿಚಾರದಲ್ಲಿ ಒಂದು ಎನ್‌ಕ್ವೈರಿ ಕಮಿಟಿ ಮಾಡಿ ಅದರ ಅಫೇರ್ಸ್ ಗಳನ್ನೆಲ್ಲಾ ಪರೀಕ್ಷೆ ಮಾಡಬೇಕು. ಹಿಂದೆ ಆಗಿರತಕ್ಕಂಥ ದುರಾಡಳಿತವನ್ನು ನಿಲ್ಲಿಸಿ ನೆಮ್ಮದಿಯಿಂದ ಬಾಳುವಂತೆ ಒಂದು ಹೊಸ ಅಧ್ಯಯನ ಮಾಡಬೇಕು. ಅಲ್ಲಿ ಬಡ ಬೋರೇಗೌಡನೂ ಸಹ ಒಂದು ಆದರ್ಶವಾದ ಜೀವನ ನಡೆಸುವಂತೆ ಒಂದು ಮಾರ್ಗ ಹಾಕಿಕೊಡಬೇಕು. ಖಾದಿ ಬೋರ್ಡ್‌ನಲ್ಲಿ ಈ ರೀತಿಯಾಗಿ ಡೆವಲಪ್ ಮಾಡಬೇಕಾದರೆ ಅದಕ್ಕೆ ಒಂದು ಹೆಚ್ಚಿನ ರೀತಿಯಲ್ಲಿ ಕೇಂದ್ರಸರ್ಕಾರದ ನೆರವು ಪಡೆದು, ಅದಕ್ಕೆ ಹೆಚ್ಚು ಉತ್ತೇಜನ ಕೊಡುವುದಾದರೆ ಗಾಂಧೀಜಿಯು ಕನಸು ನನಸಾಗುತ್ತದೆ, ಬಡ ಬೋರೇಗೌಡನ ಜೀವನಮಟ್ಟ ಏರುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಈ ಹೊತ್ತಿನ ದಿವಸ ಪ್ರಪಂಚದಲ್ಲಿ ಆದರ್ಶವಾದ ಒಂದು ಜೀವನವನ್ನು ಬಾಳುವಂತೆ ಮಾಡಬೇಕು ಎಂದು ನಮ್ಮ ದೇಶದ 50 ಕೋಟಿ ಜನರು ಏನು ಹೇಳುತ್ತಿದ್ದಾರೆ. ಅದನ್ನು ಅಲ್ಲಗಳೆದರೆ ಹೇಗೆ? ಇಡೀ ಪೂರ್ವಾರ್ಧಗೋಳ ನೋಡಿದರೆ ಅನ್‌ಡಿಸ್ಪ್ಯೂಟ್ ಅಂಡ್ ರೆಕಗ್‌ನೈಸ್ಡ್ ಲೀಡರ್ ಎಂದು ಆಕೆಗೆ ಇಂಥ ಗೌರವ ಕೊಟ್ಟಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಅಷ್ಟು ಸುಲಭವಾಗಿ ನಾಲ್ಕು ಭಾಷೆಯಲ್ಲಿ ಬಯ್ಯುವುದು ಎಂದರೆ ಅದು ನನಗೆ ಬಹಳ ವಿಷಾದಕರ ಎನಿಸುತ್ತದೆ. ಇಡೀ ಪ್ರಪಂಚವೇ ಅವರನ್ನು ನಾಯಕರನ್ನಾಗಿ ಒಪ್ಪಿಕೊಂಡಿದ್ದಾರೆ. ಆಕೆಗೂ ಸಹ ಒಂದು ಜವಾಬ್ದಾರಿ ರೀತಿಯಿಂದ ದೇಶವನ್ನು ಸರಿಯಾದ ರೀತಿಯಲ್ಲಿ ಒಂದು ಆದರ್ಶವಾದ ರೀತಿಯಲ್ಲಿ ಇಡಬೇಕು ಎನ್ನುವ ಆಸೆ ಇದೆ ಅಂಥಾವರನ್ನು ಈಹೊತ್ತಿನ ದಿವಸ ಏನನ್ನುತ್ತೀರಿ ಎಂದರೆ ಅವರ ರಾಜ್ಯಭಾರ ಬಂದಮೇಲೆ ಹಾಗೆ ಆಯಿತು, ಹೀಗೆ ಆಯಿತು ಅಂತ ಹೇಳುತ್ತಿದ್ದೀರಿ ಇದಕ್ಕೆ ನಾನು ಒಂದೇ ಒಂದು ನಿದರ್ಶನ ಕೊಡುತ್ತೇನೆ: ಅದು ಯಾವುದು ಎಂದರೆ ಬಾಂಗ್ಲಾ ದೇಶದ ಒಂದು ಪ್ರಾಬ್ಲೆಮ್‌ನ್ನೇ ತೆಗೆದುಕೊಳ್ಳಿ. ಈಹೊತ್ತಿನ ದಿವಸ ಪಾಕೀಸ್ತಾನ ಮತ್ತು ಹಿಂದೂಸ್ತಾನಕ್ಕೆ ಒಂದು ಸೌಹಾರ್ದವಾತಾವರಣ ಬೆಳೆಯಬೇಕಾದರೆ ಬಾಂಗ್ಲಾ ದೇಶದ ಒಂದು ಪ್ರಾಬ್ಲಮ್‌ನ್ನು ಸಾಲ್ವ್ ಮಾಡಿದ್ದರಿಂದ ಈಹೊತ್ತಿನ ದಿವಸ ಇಂಟರ್ ನ್ಯಾಷನಲ್ ರಾಜಕೀಯದಲ್ಲಿ ನಮ್ಮ ಒಂದು ಅಂತಸ್ತು ಪತಾಕೆ ಮೇಲಕ್ಕೆ ಹೋಗಲಿಲ್ಲವೇ? ಆದುದರಿಂದ ಈಹೊತ್ತಿನ ದಿವಸ ಪೂರ್ಣ ನಂಬಿಕೆ ನಮ್ಮ ಇಂದಿರಾ ಗಾಂಧಿಯವರ ಮೇಲೆ ಇದೆ. ಅದು ಬಿಟ್ಟು ನೀವು ಯಾವುದೋ ಒಂದು ಸಣ್ಣ ಉದಾಹರಣೆ ತೆಗೆದುಕೊಂಡು ಕೇವಲ ಸಂಕೇಶ್ವರದ ಒಂದು ಉದಾಹರಣೆ ತೆಗೆದುಕೊಂಡು ಅಲ್ಲಗಳೆದರೆ ಏನು ಅಂತ ನಾವು ತಿಳಿದುಕೊಳ್ಳಬೇಕು, ಇದಕ್ಕಿಂತಲೂ ಉತ್ತಮವಾದ ಉದಾಹರಣೆ ಯು. ಪಿ. ಎಲೆಕ್ಷನ್ ತೆಗೆದುಕೊಳ್ಳಿ, ಒರಿಸ್ಸಾ ಎಲೆಕ್ಷನ್ ತೆಗೆದುಕೊಳ್ಳಿ, ಆ ಬಗ್ಗೆ ಏತಕ್ಕೆ ಸುಮ್ಮನೆ ಇದ್ದೀರಿ? ಈ ಸಂದರ್ಭದಲ್ಲಿ ಆ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ ವಾಮಪಕ್ಷಗಳು ಏನು ಇವೆ ಅವೆಲ್ಲಾ ನಿರ್ನಾಮವಾಗಿ ಹೋಗಿವ. ಇನ್ನು ಆ ಬಗ್ಗೆ ಹೆಚ್ಚು ಹೇಳುವುದು ಬೇಡ.

ಇನ್ನು ಒಂದಕ್ಕೊಂದಕ್ಕೆ ಸಂದರ್ಭ ಹೇಗೆ ಬರುತ್ತದೆ ಎನ್ನುವುದನ್ನು ಹೇಳುತ್ತೇನೆ. ಈಗ ದೇಶದಲ್ಲಿ ಸಿಮೆಂಟ್ ಪೆಟ್ರೋಲ್ ವಗೈರೆ ಬೆಲೆಗಳು ಜಾಸ್ತಿಯಾಗಿವೆ ಎಂದು ಹೇಳುತ್ತೀರಿ. ಆದರೆ ಹೀಗಾಗಲು ಕಾರಣ ವೇನು ಎಂದು ಹೇಳುತ್ತೇನೆ. ಈಗ ದೇಶದಲ್ಲಿ ಕರೆಂಟನ್ನು ಜಾಸ್ತಿ ಉತ್ಪನ್ನ ಮಾಡಿದರೆ ಫ್ಯಾಕ್ಟರಿ ನಡೆಯುತ್ತದೆ, ಫ್ಯಾಕ್ಟರಿ ಚೆನ್ನಾಗಿ ನಡೆದರೆ ಸಿಮೆಂಟ್ ಜಾಸ್ತಿ ಉತ್ಪನ್ನವಾಗುತ್ತದೆ ಸಿಮೆಂಟ್ ಜಾಸ್ತಿ ಉತ್ಪನ್ನವಾದರೆ ಸೀಮೆಣ್ಣೆ ವಗೈರೆ ಜಾಸ್ತಿ ಉತ್ಪನ್ನವಾಗುತ್ತದೆ ಹೀಗೆ ಒಂದಲ್ಲ ಒಂದು ಸಂಬಂಧ ಇರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೆ ಈ ವಿಷಯವನ್ನು ಯಾವುದೋ ಒಂದು ದೊಡ್ಡ ಪಿಶಾಚಿಯ ಹಾಗೆ ಮಾಡಿಬಿಟ್ಟಿದ್ದೀರಲ್ಲಾ ? ಇದಕ್ಕೆ ಪ್ರತೀಕಾರವಾಗಿ ಹೇಳಬೇಕಾದರೆ ಜನಕ್ಕೆ ಅರ್ಥವಾಗುವುದಿಲ್ಲವೇ ಈಗ ಮೊನ್ನೆ ಎಲೆಕ್ಷನ್ ನಡೆದಂಥ ಯು. ಪಿ. ಮತ್ತು ಒರಿಸ್ಸಾ ಪ್ರಾಂತಗಳು ನೋಡಿ. ಜನಕ್ಕೆ 3 ವರ್ಷದಿಂದಲೂ ಅನುಭವ ಇದೆ. ಈಗ ಜನಗಳು ಓಟು ಕೊಡುವುದರಲ್ಲಿ ಬಹಳ ಬುದ್ಧಿವಂತರಾಗಿದ್ದಾರೆ. ಈವಾಗ ತಾಲ್ಲೂಕು ಬೋರ್ಡು ಎಲೆಕ್ಷನ್ ಆಗಲಿ, ವಿಲೇಜ್ ಪಂಚಾಯಿತಿ ಎಲೆಕ್ಷನ್ ಆಗಲಿ ಅಥವಾ ಎಂ. ಪಿ. ಎಲೆಕ್ಷನ್ ಆಗಲಿ ನೋಡಿ. ಯಾರಿಗೆ ಓಟು ಕೊಡಬೇಕು ಎನ್ನುವ ಭಾವನೆ ಬಂದಿದೆ ಎನ್ನುವುದನ್ನು ನೋಡಿ. ಆದರೆ ನಮ್ಮ ದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಏನು ಇದ್ದಾರೋ, ಆಂಟಿ ಸೋಷಲಿಸ್ಟ್ ಎಲಿಮೆಂಟ್ಸ್ ಏನು ಇದ್ದಾರೋ ಅವರು ಒಂದು ಪ್ರತೀಕವೇ ಹೊರತು ಇದು ಸಾಮಾನ್ಯ ಜನತೆಯ ಪ್ರತೀಕವಲ್ಲ. ಸಾಮಾನ್ಯ ಜನತೆಗೆ ನಮ್ಮ ದೇಶ ಪ್ರೇಮ ಹೇಗಿದೆ ನೋಡಿ. ನಮ್ಮ ದೇಶದ ಮಾನ್ಯ ನಾಯಕರುಗಳು ಯಾವರೀತಿಯಾಗಿ ಜೀವನ ನಡೆಸಿದ್ದಾರೆ ನೋಡಿ. ಉದಾಹರಣೆ ಹೇಳುವುದಾದರೆ ನಮ್ಮ ದೇಶದ ಪೂಜ್ಯ ಗಾಂಧೀಜಿಯವರನ್ನು ತೆಗೆದುಕೊಳ್ಳಿ, ಸರ್ದಾರ್ ವಲ್ಲಭಾಯ್ ಪಟೇಲರನ್ನು ತೆಗೆದುಕೊಳ್ಳಿ, ಶ್ರೀಮತಿ ಸರೋಜಿನಿ ನಾಯ್ಡು ಅವರನ್ನು ತೆಗೆದುಕೊಳ್ಳಿ, ನೆಹರೂರವರನ್ನೇ ತೆಗೆದುಕೊಳ್ಳಿ ಇದರ ಜೊತೆಗೆ ನಮ್ಮ ಈಗಿನ ನಾಯಕರಾದ ಶ್ರೀಮತಿ ಇಂದಿರಾಗಾಂಧಿಯವರನ್ನೇ ತೆಗೆದುಕೊಳ್ಳಿ, ಯಾವರೀತಿಯಾಗಿ ಜೀವನ ನಡೆಸುತ್ತಿದ್ದಾರೆ ಎನ್ನುವುದನ್ನು ನೋಡಿ. ಇದನ್ನೆಲ್ಲಾ ನೋಡಿದರೆ ನಾವು ಕಳೆದ ಎರಡು ವರ್ಷಗಳಿಂದ ದೇಶದ ಜನತೆಗೆ ಒಳ್ಳೆಯದನ್ನು ಮಾಡಲು ಕಾಯ-ವಾಚ-ಮನಸಾ ದುಡಿದಿದ್ದೇವೆ. ಇದರ ಒಂದು ಪಕ್ಷನೋಟವನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕಾಣಬಹುದು. ಅತಿ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಅನುಕೂಲ ಕಲ್ಪಿಸುವ ದಿಟ್ಟ ಹೆಜ್ಜೆಯನ್ನು ನಮ್ಮ ಸರ್ಕಾರ ಇಟ್ಟಿದೆ. ಆದ್ದರಿಂದ ಈ ವಂದನಾ ನಿರ್ಣಯಕ್ಕೆ ತಾವೆಲ್ಲರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಜೈ ಕರ್ನಾಟಕ

‡ ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಸಭೆಯ ಎದುರು ಪಕ್ಷದ ನಾಯಕರುಗಳು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರ ಎಲ್ಲರ ಭಾಷಣಗಳನ್ನೂ ನಾನು ಕೇಳಿದ್ದರಲ್ಲಿ ಅವರೆಲ್ಲರ ಮಾತಿನ ಧಾಟಿ ಹೇಗಿತ್ತೆಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಾನು ಪ್ರಯತ್ನ ಪಟ್ಟಿದ್ದೇನೆ. ಒಟ್ಟಿನಲ್ಲಿ ನಾನು ತಿಳಿದಿದ್ದೆ ಈ ರಾಜ್ಯಪಾಲರ ಭಾಷಣದ ಮೇಲೆ ತಾತ್ವಿಕವಾಗಿ ಟೀಕೆ ಮಾಡತಕ್ಕವರು ಈ ಸಭೆಯಲ್ಲಿ ಇಲ್ಲ ಅಂತ. ಆದರೆ ವಿರೋಧ ಪಕ್ಷಗಳವರು ಸರ್ಕಾರ ನಡೆಸತಕ್ಕ ಕಾರ್ಯನೀತಿಗಳಲ್ಲಿ ಏನಾದರೂ ದೋಷವಿದ್ದರೆ ಅದನ್ನು ಎತ್ತಿಹಿಡಿಯುವುದು ಒಂದು ಪವಿತ್ರ ಕರ್ತವ್ಯ, ಅವರಪಾಲಿಗಿದೆ. ಆದರೆ ಅವರು ಈ ಕಾರ್ಯವನ್ನು ಎಷ್ಟರ ಮಟ್ಟಿಗೆ ನಿರ್ವಹಣೆ ಮಾಡಿದ್ದಾರೆಂಬುದನ್ನು ಈ ಸಭೆ ಸೇರಿದಾಗಲೆಲ್ಲಾ ನೋಡಿದ್ದರಲ್ಲಿ ಆ ನಿರ್ವಹಣೆಯು ಬಾರಾಮೀಟರ್ ಕೆಳಕ್ಕೇ ಹೋಗುತ್ತಿದೆ. ನಾನು ತಿಳಿದಿದ್ದೆ—ವರ್ಷವರ್ಷ ಇಲ್ಲಿ ನಡೆಯುತಕ್ಕ ಕಾರ್ಯಕಲಾಪಗಳ ಅನುಭವದ ಮೇಲೆ ಅವರ ವಾದಗಳ ಧಾಟಿ ಉತ್ತಮಗೊಳ್ಳುತ್ತದೆ ಎಂದು. ಆದರೆ ಅದು ಉತ್ತಮಗೊಳ್ಳುವುದಕ್ಕೆ ಬದಲಾಗಿ ಇಳಿಮುಖನಾಗುತ್ತಿದೆ. ಇದನ್ನು ನೋಡಿದರೆ ಅವರಿಗೆ ಆ ವಿರೋಧಪಕ್ಷಗಳ ಕರ್ತವ್ಯವಾದರೂ ಏನೆಂಬುದನ್ನೂ ಚೆನ್ನಾಗಿ ಮನವರಿಕೆಯಾದಂತೆ ಕಾಣಲಿಲ್ಲ. ಆದರೆ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಅವರು ಹೇಳಬೇಕಾದ್ದಿದೆ. ಆದರೆ ಆಡಳಿತದಲ್ಲಿರತಕ್ಕ ಲೋಪದೋಷಗಳು, ಆಡಳಿತ ನೀತಿಯಲ್ಲಿರತಕ್ಕ ಲೋಪದೋಷಗಳು ಮತ್ತು ತಾತ್ವಿಕವಾದಲ್ಲಿ ಕಾಣತಕ್ಕ ಲೋಪದೋಷಗಳೇನಿವೆ ಇವುಗಳು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಿದ್ದರೂ ನಮ್ಮ ವಿರೋಧಪಕ್ಷಗಳವರ ದೃಷ್ಟಿಯಲ್ಲಿ ಇವುಗಳಲ್ಲಿ ಯಾವ ಬೇಧವನ್ನು ಅವರು ಕಾಣರು. ಅವರಿಗೆ ಎಲ್ಲವೂ ಒಂದೇ. ಅವರಿಗೆ ರಾಜ್ಯಪಾಲರ ಭಾಷಣವು ಒಂದೇ, ಬಡ್ಜೆಟ್ ಬಗ್ಗೆ ಮಾಡತಕ್ಕ ಭಾಷಣವೂ ಒಂದೇ, ಡಿಮ್ಯಾಂಡುಗಳ ಬಗ್ಗೆ ಮಾಡತಕ್ಕ ಭಾಷಣವೂ ಒಂದೆ. ಮಾನ್ಯ ಅಧ್ಯಕ್ಷರೇ ತಾವು ಕೂಡ ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಪ್ರಾರಂಭವಾದಾಗಿನಿಂದ ತಮಗೂ ಇದು ಚೆನ್ನಾಗಿ ಅನುಭವಕ್ಕೆ ಬಂದಿದೆಯೆಂದು ನಂಬುತ್ತೇನೆ. ಇಲ್ಲಿ ಈ ರಾಜ್ಯಪಾಲರ ಭಾಷಣದ ಮೇಲೆ ನಡೆಯತಕ್ಕ ಇಲ್ಲಿನ ಭಾಷಣಗಳನ್ನು ಒಂದು ರೆಕಾರ್ಡ್ ಮಾಡಿಟ್ಟರೆ ನಾಳೆ ಇವರು ಮಾಡತಕ್ಕ ಬಡ್ಜೆಟ್ ಭಾಷಣದ ಕಾಲಕ್ಕೆ ಈ ರೆಕಾರ್ಡ್‌ನ್ನು ತಿರುಗಿಸಿ ನೋಡಿದಾಗ ಇವರು ಮಾಡತಕ್ಕ ಭಾಷಣದಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂಬುದು ವೇದ್ಯವಾಗುತ್ತದೆ. ಅದರೆ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ಸಭೆಯಲ್ಲಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಅವರನ್ನು ದಯಮಾಡಿ ಕರೆಸುವುದು ಒಳ್ಳೆಯದು ಆದರೆ ನಾನು ಈಗ ಹೇಳುತ್ತಿರುವುದು ವಿರೋಧಪಕ್ಷಗಳವರು ಸರ್ಕಾರದ ಬಗ್ಗೆ ಟೀಕೆಗಳನ್ನು ಮಾಡಬಾರದೆಂದು ಹೇಳುತ್ತಿಲ್ಲ. ನಮ್ಮಲ್ಲಿರತಕ್ಕ ಲೋಪದೋಷಗಳನ್ನು ತಿಳಿಸಬೇಕಾದ್ದು ಅವರ ಕರ್ತವ್ಯ.

(ಶ್ರೀ ಡಿ. ದೇವರಾಜ ಅರಸ್)

ಈ ಪ್ರಜಾತಂತ್ರದಲ್ಲಿ ಆಳುವ ಪಕ್ಷ ಮತ್ತು ವಿರೋಧ ಪಕ್ಷ—ಹೀಗೆ ಎರಡು ಪಕ್ಷಗಳು ಇರಬೇಕಾದದು ಅತ್ಯಗತ್ಯ. ನಾನೀಗ ಆಡಳಿತವನ್ನು ನಡೆಸುತ್ತಿರುವುದು ಯೂನಿಟರ್ ಸಿಸ್ಟಂ ಆಫ್ ಗೌರ್ನಮೆಂಟ್ ಆಗುವುದಿಲ್ಲ. ಮಲ್ಟಿಪಾರ್ಟಿ ಪಾರ್ಟಿಗಳ ಅಗತ್ಯವಿಲ್ಲ. ನಮ್ಮದು ಪ್ರಜಾತಂತ್ರ ಸರ್ಕಾರ. ಇದರಲ್ಲಿ ಎರಡು ಪಕ್ಷಗಳು ಇರಲೇಬೇಕು. ಆದರೆ ಕೆಲ ಕೆಲವು ವಿಚಾರಗಳಲ್ಲಿ ಈ ನಾನು ಹೇಳತಕ್ಕ ಉಭಯ ಪಕ್ಷಗಳಿಗೂ ಹೊಂದಾವಣಿಕೆಯಾಗತಕ್ಕ ವಿಚಾರಗಳಿರುತ್ತವೆ. ಕೆಲವು ತತ್ವಗಳನ್ನು ಎರಡೂ ಪಕ್ಷಗಳು ಸಮರ್ಥನೆ ಮಾಡುತ್ತವೆ. ಅಂಥ ಕೆಲವು ವಿಷಯಗಳಿವೆ. ಉದಾಹರಣೆಗೆ ಈಗ ಹೇಳುವುದಾದರೆ—ದೇಶದಲ್ಲಿ ಲಾ ಅಂಡ್ ಆರ್ಡರ್ ವಿಚಾರ. ಇದನ್ನು ದೇಶದಲ್ಲಿ ಮೈಂಟೇನ್ ಮಾಡಲೇಬೇಕೆಂದು ಈ ಎರಡು ಪಕ್ಷಗಳೂ ಒಪ್ಪುತ್ತವೆ. ಇದರಲ್ಲಿ ಉಭಯ ಪಕ್ಷಗಳಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಇಲ್ಲಿ ಆಡಳಿತದಲ್ಲಿ ತಪ್ಪಿದೆ ಅಂದಾಗ ಅವರು ಟೀಕೆ ಮಾಡಲಿ. ಆದರೆ ನಮ್ಮ ವಿರೋಧ ಪಕ್ಷಗಳು ಈ ಮೂಲ ವಿಷಯಕ್ಕೆ ತಿಲಾಂಜಲಿಯನ್ನೀಯುತ್ತಿವೆ. ಅವು ಯಾವ ರೀತಿಯಲ್ಲಿ ತಿಲಾಂಜಲಿಯನ್ನು ಈಯುತ್ತಿವೆಯೆಂದರೆ—ಪ್ರತಿಯೊಂದು ವಿಷಯದಲ್ಲೂ ಮೂತೆತ್ತಿದರೆ—ಗಲಾಟೆ ಎಬ್ಬಿಸುವುದು ಗೊಂದಲವೆಬ್ಬಿಸುವುದರ, ಸತ್ಯಾಗ್ರಹ ಮಾಡುತ್ತೇವೆಂದು ಹೇಳುವುದು—ಆ ವಿಚಾರದಲ್ಲಿ ಸತ್ಯ ಇರಲಿ ಇಲ್ಲದಿರಲಿ, ಅಗ್ರಹಗಳನ್ನು ಹೂಡುವುದು, ಧರಣಿ ಮಾಡುವುದು ಇತ್ಯಾದಿ. ಇವೆಲ್ಲಾ ಇಲ್ಲಿಯತನಕ ಹೊರಗಡೆಯೇ ನಡೆಯುತ್ತಿದ್ದವು. ಇನ್ನು ಮುಂದೆ ಇವು ಸಭೆಯ ಒಳಗೂ ನಡೆಯುವಂತೆ ಕಾಣುತ್ತದೆ. ಅಂಥ ಪರಿಸ್ಥಿತಿಗಳು ಕಾಣುತ್ತಿವೆ. ಹಿಂದೆ ಯಾವುದೋ ಒಂದು ಕಾಲಕ್ಕೆ ಇವು ಬೇಕಾಗಿದ್ದವು. ಆದರೆ ಈಗ ಕಾಲ ವರ್ತಮಾನ ಪರಿಸ್ಥಿತಿಗಳೆಲ್ಲಾ ಬದಲಾಗಿದ್ದರೂ ಅದಿನ್ನೂ ನಮ್ಮ ಜನಕ್ಕೆ ಅರಿವಾಗಿಲ್ಲ. ಆ ಹಿಂದಿನದನ್ನೇ ಅಭ್ಯಾಸ ಮಾಡುವುದಕ್ಕೆ ಹುರುಪನ್ನು ತೋರಿಸುತ್ತಿದ್ದಾರೆ. ಹಿಂದೆ ಒಂದು ಕಾಲಕ್ಕೆ ದೇಶದ ಸ್ವಾತಂತ್ರ್ಯವನ್ನು ಗಳಿಸತಕ್ಕ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಕಾರ್ಮಿಕರನ್ನು ಕೂಲಿಗಾರರನ್ನು ರಾಜಕೀಯಕ್ಕೆ ಎಳೆಯಬೇಕಾಗಿತ್ತು. ಆದರೆ ಆಗಿದ್ದ ಕಾಲ ಸನ್ನಿವೇಶಗಳು ಈಗಿಲ್ಲ. ಈಗ ಇವುಗಳನ್ನು ಯಾರು ಮಾಡಿದರೂ ತಪ್ಪು. ನಮ್ಮ ಪಕ್ಷದವರಾಗಲೀ ನಿಮ್ಮ ಪಕ್ಷದವರಾಗಲೀ ಇದನ್ನು ಯಾರು ಮಾಡಿದರೂ ತಪ್ಪು. ಆದರೆ ನಮ್ಮ ಸ್ನೇಹಿತರಾದ ಶ್ರೀಮಾನ್ ತಿಮ್ಮಪ್ಪನವರ ಕೋಡೇ ಒಂದು ಸ್ಪೆಷಲ್. ಅದರ ಬಗ್ಗೆ ನಾನು ಈಗ ಹೇಳುತ್ತಿಲ್ಲ. ಆದುದರಿಂದ ಅವರು ಈಗಲೇ ಈ ವಿಚಾರದಲ್ಲಿ ಕುಳಿತರೆ ಏನಾಗುತ್ತದೆ ಅಂದರೆ ವಿರೋಧ ಪಕ್ಷ ಇಂದಲ್ಲ ನಾಳೆ ಅಧಿಕಾರಕ್ಕೆ ಬಂದು ಜವಾಬ್ದಾರಿ ನಿರ್ವಹಿಸಬೇಕಾಗಬಹುದು. ಎಂಬ ಜ್ಞಾನ ಅವರಲ್ಲಿದ್ದರೆ ಇದರ ಕಡೆ ಅವರು ಲಕ್ಷ ಕೊಡುತ್ತಿರಲಿಲ್ಲ. ಹಾಗಿಲ್ಲದೆ ಇರುವುದರಿಂದ ಹೀಗೆಲ್ಲಾ ಹೇಳುತ್ತಿದ್ದಾರೆ. ಮುಂದೆ ಇದರ ಪರಿಣಾಮವೇನು, ಈ ರೀತಿ ನಡೆದುಕೊಂಡರೆ

ಮುಂದೆ ನಾವು ಸರಕಾರ ನಡೆಸುವುದಕ್ಕಾಗುತ್ತದೆಯೇ ಎಂದು ಗಮನಿಸಿ ಯಾವ ವಿಚಾರದಲ್ಲಿ ನಾವು ಸಹಕರಿಸಬೇಕು, ಯಾವ ವಿಚಾರದಲ್ಲಿ ವಿರೋಧಿಸಬೇಕು, ಎಂದು ಇದರ ಕಡೆ ಲಕ್ಷ ಅವರು ಕೊಟ್ಟ ಹಾಗೆ ಕಾಣುತ್ತಿಲ್ಲ. ಚುನಾವಣೆ ನಡೆಯುವಾಗ ಗಲಾಟೆ ಮಾಡಬೇಕು, ಕಲ್ಲೆಸೆಯಬೇಕು, ಕಾರು ಜಜ್ಜಿ ಹಾಕಬೇಕು, ಎಂಬ ಭಾವನೆ ಬಂದಿದೆ. ಪ್ರಜಾತಂತ್ರದಲ್ಲಿ ಮ್ಯುಚುಯಲ್ ಡಿಸ್‌ಕಷನ್, ಡಿಬೇಟ್ ಇದರಿಂದ ಮಾನಸಿಕ ಪರಿವರ್ತನೆ ಮಾಡಬೇಕು. ಹಿಂಸಾ ಮಾರ್ಗ ಅನುಸರಿಸುವುದು ಸೂಕ್ತವಲ್ಲ. ಬಯ್ಯುವುದು ಬೇರೆ ಇದೆ, ಇದಿರುವವರಿಗೆ ಬಯ್ಯಿಸಿ ಕೊಳ್ಳುವುದಕ್ಕೆ ತಯಾರಿರಬೇಕು. ಟೀಕೆ ಮಾಡುವವರ ವಿಚಾರದಲ್ಲಿ ನಾನು ಮಾತನಾಡುವುದಿಲ್ಲ.

4-30 P.M.

ಈಗ ನಮ್ಮ ದೇಶದಲ್ಲಿ ರಾಜಕೀಯ ಪರಿಸ್ಥಿತಿ ಯಾವ ರೀತಿಯಿದೆ, ಆರ್ಥಿಕ ಪರಿಸ್ಥಿತಿ ಯಾವ ರೀತಿಯಿದೆ. ಹತ್ತಾರು ವರ್ಷದ ವಿಚಾರ ನಾನು ಮಾತನಾಡು ವುದಕ್ಕಿಂತ ನಮ್ಮ ಸರಕಾರ ಬಂದ ಮೇಲೆ ನಮ್ಮ ಪಕ್ಷ ಆಡಳಿತ ನಡೆಸಲು ಪ್ರಾರಂಭ ಮಾಡಿದ ಮೇಲೆ ಮೊದಲೇನು ಪರಿಸ್ಥಿತಿಯಿತ್ತು, ಅಂದಿನಿಂದ ಇಂದಿನ ವರೆಗೆ ನಾವು ಯಾವ ರೀತಿ ಸರಕಾರ ನಡೆಸುತ್ತಿದ್ದೇವೆ, ಯಾವ ಮಾರ್ಗದಲ್ಲಿ ಹೋಗುತ್ತಿದ್ದೇವೆ ಇದನ್ನು ಸ್ವಲ್ಪ ಗಮನಿಸಬೇಕಾಗಿದೆ. ಹಣಕಾಸಿನ ಪರಿಸ್ಥಿತಿ ಯನ್ನು ಹೆಚ್ಚು ಲಂಬಿಸಿ ಹೇಳಬೇಕಾದ ಅಗತ್ಯವಿಲ್ಲ. ನಾವು ಬಂದಾಗಿನಿಂದ ಒಂದು ದೊಡ್ಡ ಹೊರೆ ಹೊರಬೇಕಾಗಿ ಬಂದಿದೆ. ಓವರ್‌ಡ್ರಾಫ್ಟಿನ ವಿಚಾರ ನಾನು ಜ್ಞಾಪಿಸಬೇಕಾಗಿಲ್ಲ. ಸುಮಾರು 70-75 ಕೋಟಿ ಓವರ್ ಡ್ರಾಫ್ಟ್ ಇತ್ತು ಮಾನ್ಯ ಸದಸ್ಯರು ರಿಪೀಟ್ ಮಾಡಿದ್ದರಿಂದ ವಿಧಿಯಿಲ್ಲದೆ ಈ ವಿಚಾರ ಹೇಳಬೇಕಾ ಗಿದೆ. ಅಲ್ಲಿಂದ ಕ್ಷಾಮ ಬಂತು. ಇದ್ದಕ್ಕಿದ್ದ ಹಾಗೆ ಹಠಾತ್ತಾಗಿ 1972 ರಲ್ಲಿ ಒಂದು ಕಡೆ ಹಣದ ಅಭಾವ ಅಥವಾ ಓವರ್‌ಡ್ರಾಫ್ಟ್, ಮತ್ತೊಂದು ಕಡೆ ಕ್ಷಾಮದ ಭೀತಿ ಎದುರಿಸಬೇಕಾಯಿತು. ಈ ಒಂದು ಪರಿಸ್ಥಿತಿ ದೇಶದಲ್ಲಿತ್ತು ಇದರ ಜೊತೆಗೆ ಬೆಲೆಗಳ ವಿಚಾರ. 72 ರಲ್ಲಿದ್ದ ಬೆಲೆ ನೋಡಿದರೆ ಮೊದಲನೆಯ ವರ್ಷ ಸೇಕಡ 15 ರಷ್ಟು ಸರಾಸರಿ ಜಾಸ್ತಿಯಾಯಿತು. ಈ ವರ್ಷ ಶೇಕಡ 25 ರಷ್ಟು ಜಾಸ್ತಿಯಾಗಿದೆ. ನಾವು ಒಂದು ರಾಜ್ಯದ ಆರ್ಥಿಕ ವಿಚಾರವಾಗಲಿ ರಾಜಕೀಯ ವಿಚಾರವಾಗಲಿ ಪ್ರಸ್ತಾಪಿಸುವಾಗ ಇಲ್ಲಿಯ ಆರ್ಥಿಕ ಮತ್ತು ರಾಜಕೀಯ ವಿಷಯ ಗಳಿಗೂ ಇಡೀ ಭಾರತದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯ ಗಳಿಗೂ ಸಂಬಂಧವಿದ್ದೇ ಇದ್ದೇ ಇರುತ್ತದೆ ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳ ಬೇಕು. ಆರ್ಥಿಕ ವಿಚಾರದಲ್ಲಿ ತೀರ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ವಿಷಯ ಗಳಿಂದ ನಾವು ಪೂರ್ಣವಾಗಿ ದೂರವಾಗಿಲ್ಲ.

(ಶ್ರೀ ಡಿ. ದೇವರಾಜ ಅರಸ್)

ಬೆಲೆ ವಿಚಾರ ತೆಗೆದುಕೊಂಡರೆ ಕೇಂದ್ರದ ಆಹಾರ ಒಂದು ದೊಡ್ಡ ಪ್ರಮಾಣದಲ್ಲಿ ನಮ್ಮ ಉಗ್ರಾಣದಲ್ಲಿತ್ತು. ಜೂನ್ ಜುಲೈ 1972ರಲ್ಲಿ ಕೇಂದ್ರ ಸರಕಾರದವರು ದಕ್ಷಿಣದವರಿಗೆ ಎಷ್ಟು ಬೇಕಾದರೂ ಗೋಧಿ ಕೊಡಲು ಸಿದ್ಧ ಎಂದು ಹೇಳಿದ್ದಾರೆ. ನಾವು ಕೇಳುವುದಕ್ಕಿಂತ ಹೆಚ್ಚು ಕೊಡಲು ಅವರು ಸಿದ್ಧವಾಗಿದ್ದರು. ಆದರೆ ನಾವು ಹೆಚ್ಚು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿರಲಿಲ್ಲ. ನಾವು ಸಾಕು ಎಂದು ಹೇಳುತ್ತಿದ್ದೆವು. ಕೊಳ್ಳುವವರು ತಿನ್ನುವವರು ಆಗ ಹೆಚ್ಚಾಗಿರಲಿಲ್ಲ. ಆದರೆ ಪರಿಸ್ಥಿತಿ ತಕ್ಕಮಟ್ಟಿಗೆ ಉಲ್ಬಣವಾದಾಗ 3-4 ತಿಂಗಳಮೇಲೆ ಹೆಚ್ಚು ಕೊಡುವಂತಿರಲಿಲ್ಲ ಆಗ ನಾವು 50 ಸಾವಿರ ಟನ್ ಕೇಳಿದರೆ 30 ಸಾವಿರ ಟನ್ ಕೊಡುತ್ತಿದ್ದರು, 20 ಸಾವಿರ ಟನ್ ಕೊಡುತ್ತಿದ್ದರು, ಹಟಾತ್ತಾಗಿ ಇಂಥ ಪರಿಸ್ಥಿತಿಯುಂಟಾಯಿತು ಒಂದು ಕಡೆ. ಇನ್ನೊಂದು ಮುಖ್ಯವಾದ ವಿಚಾರ. 1969 ರಿಂದ ದೇಶದ ಚರಿತ್ರೆಯನ್ನು ಆಳವಾಗಿ ನೋಡಬೇಕು. 1969 ರಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಒಡಕುಂಟಾಯಿತು. ಈ ದಿವಸ ಸರಿಯೋ ತಪ್ಪೋ ಕಾಂಗ್ರೆಸ್ ಪಾಲಿಟಿಕ್ಸ್ ಎಂದರೆ ಎಲ್ಲಾ ರಾಜಕೀಯ ಪಕ್ಷದ ಪಾಲಿಟಿಕ್ಸ್ ಆಗುವುದು. ಅದರ ಪರಿಣಾಮ ಎಲ್ಲದ್ದರ ಮೇಲೂ ಉಂಟಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸರ್ವಾಂತರ್ಯಾಮಿ.

ಶ್ರೀ ಡಿ. ದೇವರಾಜ ಅರಸ್.—ತಾವೂ ಇದರೊಳಗೆ ಸೇರಿ ಹೋಗಿಬಿಟ್ಟಿದ್ದೀರಿ, ಇದು ನಮ್ಮ ದೇಶದ ರಾಜಕೀಯ ಪರಿಸ್ಥಿತಿ. 1969ನೇ ಇಸವಿಯಿಂದ ಕಾಂಗ್ರೆಸ್‌ನಲ್ಲಿ ನಡೆದಂಥ ಒಂದು ವಿಭಾಗ ಎಲ್ಲಾ ಕಡೆಗೂ ತನ್ನ ಪರಿಣಾಮವನ್ನು ಉಂಟುಮಾಡಿದೆ. ಆದ್ದರಿಂದ ಇದನ್ನು ನಾನು ಉಚ್ಚರಿಸುತ್ತಿದ್ದೇನೆ. ಈ ರೀತಿ ಇಬ್ಭಾಗವಾದುದಕ್ಕೆ ಕಾರಣ ಏನು? ಕಾರಣ ಮುಖ್ಯವಾಗಿ, ನಾವು ಹಿಂದೆ ಯಾವ ಯಾವ ಆರ್ಥಿಕ ಸಾಮಾಜಿಕ ನೀತಿಗಳನ್ನು ಅನುಸರಿಸುತ್ತೇವೆಂದು ಹೇಳಿ ಠರಾವುಗಳನ್ನು ಮಾಡಿದ್ದೆವೋ, ತೀರ್ಮಾನಗಳನ್ನು ತೆಗೆದುಕೊಂಡಿದ್ದೆವೋ ಆ ತೀರ್ಮಾನಗಳನ್ನು ಕಾರ್ಯಗತ ಮಾಡುವುದರಲ್ಲಿ ವಿಫಲರಾಗಿದ್ದೇವೆ, ಅದನ್ನು ನಾನು ಒಪ್ಪುತ್ತೇನೆ. ಜನತೆಯೂ ಕೂಡ ಅದನ್ನು ತಿಳಿದಿದೆ. ವಿಫಲತೆ ಉಂಟಾದ ಪರಿಣಾಮವಾಗಿ ನಮ್ಮ ರಾಜಕೀಯ ಪಕ್ಷಗಳು ದಿನೇ ದಿನೇ ಕ್ಷೀಣವಾಗುತ್ತಿವೆ. ನಾವು ಒಂದು ಗುಂಪಿನ ಜನ, ನಾವು ಮಾಡಿದಂಥ ಠರಾವುಗಳನ್ನು, ನಾವು ತೆಗೆದುಕೊಂಡಂಥ ತೀರ್ಮಾನಗಳನ್ನು ಕಾರ್ಯಗತ ಮಾಡುವುದಕ್ಕೆ ಒಟ್ಟಾಗಿದ್ದರೂ ಅದನ್ನು ವಿರೋಧಿಸತಕ್ಕ ಒಂದು ಗುಂಪು ಇದ್ದೇ ಇತ್ತು. ಅದು ಏನೇ ಕಾರಣ ಇರಲಿ, ಇದರಲ್ಲಿ ಭೇದ ಆಗಬೇಕು, ಎಂಬ ತಾತ್ವಿಕವಾದ ಒಂದು ತೀರ್ಮಾನಕ್ಕೆ ಬಂದದ್ದೂ ಆಯಿತು. ಈ ರೀತಿಯ ಒಡಕು ಉಂಟಾದ ಮೇಲೆ, ರೀ-ಅಕ್ಷನರೀ

ಫೋರ್ಸಸ್, ವೆಸ್ಟ್‌ಡ್ ಇಂಟರೆಸ್ಟ್ ಎಂದು ನಾವು ಏನು ಹೇಳುತ್ತೇವೆಯೋ ಅವರೆಲ್ಲಾ ಒಂದು ಕಡೆ ಸೇರಿದರು. ಎಲ್ಲಾ ರಾಜಕೀಯ ಪಕ್ಷಗಳು, ಎಲ್ಲಾ ವೆಸ್ಟೆಡ್ ಇಂಟರೆಸ್ಟ್, ರೀ—ಆಕ್ಷನರೀಸ್ ಎಂದು ಹೇಳುವವರೂ ಮತ್ತು ರೈಟಿಸ್ಟ್ ಎಲಿಮೆಂಟ್ಸ್ ಮಾರಿದ್ದಾರೋ, ನಮ್ಮ ಕಾಂಗ್ರೆಸ್ ಓ ಪಕ್ಷವಾಗಲೀ, ಇವರು ಹಿಂದಿನಿಂದಲೂ ಹಳೆಯ ಪದ್ಧತಿಗಳನ್ನು ಏನು ಬೆಳೆಸಿಕೊಂಡು ಬಂದಿದ್ದರೋ ಅವೆಲ್ಲಾ ಹೋಗಬೇಕು ಎಂದಾಗ ಇವರು ಮತ್ತೆ ಒಂದು ಕಡೆ ಆದರು.

ಶ್ರೀ ಟಿ. ಆರ್. ಶಾಮಣ್ಣ :—ತಮ್ಮಲ್ಲಿ ಇಂಥವರು ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :—ತಾವು ಐದು ದಿವಸಗಳಿಂದ ಮಾತನಾಡಿದ್ದೀರಿ, ದಯವಿಟ್ಟು ನಾನು ಹೇಳುವುದನ್ನು ಕೇಳಿ, ಇದೇ ನಮಗೆ ಬಂದಿರುವ ಕಷ್ಟ, ಹೊರಗೆ ನಾವು ಹೋದರೂ ಹೀಗೆ ಮಾಡುತ್ತಾರೆ. ನಾವು ಮಾತನಾಡಿದರೆ ಎಲ್ಲಾ ಬದಲಾವಣೆಯಾಗಿಬಿಡುತ್ತದೆ ಎಂದು ಇವರಿಗೆ ಕಷ್ಟ ಬಂತು.

ಶ್ರೀ ಟಿ. ಎಂ. ಮಂಜುನಾಥ :—ಇಲ್ಲದಿದ್ದನ್ನು ಹೇಳಿದರೆ ನಾವು ಹೇಗೆ ಕೇಳುವುದು.

ಶ್ರೀ ಡಿ. ದೇವರಾಜ ಅರಸ್ ;— ನೀವು ಕೇಳಲೇಬೇಕು ಕೇಳಿ. ಇರಲಿ, ನಮ್ಮ ಪಕ್ಷದಲ್ಲಿ ಒಡಕು ಉಂಟಾದ ಮೇಲೆ, ಚುನಾವಣೆಯಾದ ಮೇಲೆ ಪೊಲಿಟಿಕಲ್ ಅನ್‌ಲಿಸಿಸ್ ಮಾಡುವುದಕ್ಕೆ ಹೊರಟಾಗ ನಾವು ಇರತಕ್ಕಂಥ ವಿಚಾರವನ್ನು ಪ್ರಾಮಾಣಿಕವಾಗಿ ಒಪ್ಪಲೇಬೇಕಾಗುತ್ತದೆ. ಆದರೆ ಇಲ್ಲಿರತಕ್ಕಂಥವರೂ ಇದರಲ್ಲಿ ಸೇರಿಬಿಟ್ಟಿದ್ದಾರೆ. ಅದನ್ನು ತೆಗೆಯಬೇಕಾದದ್ದು ಇದೆ. ತೆಗೆಯುತ್ತೇವೆ, ಅಂಥಾದ್ದು ನಮ್ಮಲ್ಲಿದ್ದರೆ ತಪ್ಪು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನೇ ತೆಗೆದಾರು ?

ಶ್ರೀ ಡಿ. ದೇವರಾಜ್ ಅರಸ್.—ರಾಜಕೀಯದಲ್ಲಿ ಎಲ್ಲೆಯೂ ಹೋಗುವುದಿಲ್ಲ ಬಿಡಿ. ರೈಟ್ ರೀ-ಆಕ್ಷನರೀಸ್ ಎಲ್ಲಾ ಪೂರ್ತಿಯಾಗಿ ಒಂದು ಕಡೆ ಸೇರಿಬಿಟ್ಟಿದ್ದಾರೆ. ಜನಸಂಘದವರು ಸೇರಿದ್ದಾರೆ, ಕಾಂಗ್ರೆಸ್ ಓ ನವರು ಸೇರಿದ್ದಾರೆ. ನಮ್ಮ ತೀರ್ಮಾನಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇದ್ದಂಥ ಅಡಚಣೆಗಳು ಅನೇಕವು ಇವೆ. ಈ ಎರಡು ವರ್ಷಗಳಿಂದ ನಾವು ಏನು ಮಾಡಿದ್ದೇವೆ ಎಂದರೆ, ಇವುಗಳನ್ನು ನಾವು ಒಂದೊಂದಾಗಿ ಕಾರ್ಯಗತ ಮಾಡುವುದಕ್ಕೆ ಹೊರಟಿದ್ದೇವೆ. ನಾವು ಈ ರೀತಿ ಕಾರ್ಯಗತ ಮಾಡುವುದಕ್ಕೆ ಹೊರಟಿರುವುದೇ ಈ ದೇಶದಲ್ಲಿ ನಡೆಯುತ್ತಾ ಇರತಕ್ಕಂಥ ಗೊಂದಲಮಯ ವಾತಾವರಣಕ್ಕೆ ಕಾರಣವಾಗಿದೆ.

(ಶ್ರೀ ಡಿ. ದೇವರಾಜ್ ಅರಸ್)

ಇವರು ಕಾರ್ಯಗತ ಮಾಡಿಬಿಟ್ಟರೆ, ಈ ರೀ-ಆಕ್ಷನರೀಸ್ ಎಲಿಮೆಂಟ್ಸ್ ಶೋಷಕ ವರ್ಗದವರು ಏನು ಇದ್ದಾರೆ ಅವರ ಕಾಲ ಮುಗಿಯುತು ಎಂದು ಅವರಿಗೆ ಅರ್ಥ ವಾಗುತ್ತದೆ. ಅದಕ್ಕಾಗಿ ಸರ್ವಶಕ್ತಿಯನ್ನು ಖರ್ಚು ಮಾಡಿ, ಅವರು ನಮ್ಮ ಮೇಲೆ ಹೋರಾಟವನ್ನು ನಡೆಸುತ್ತಿದ್ದಾರೆ. ಇದು ದೇಶದಲ್ಲಿ ರಾಜಕೀಯವಾಗಿರ ತಕ್ಕಂಥ ಪರಿಸ್ಥಿತಿ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ರಾಜ್ಯವನ್ನು ಕೈಗೆ ತೆಗೆದುಕೊಂಡು ಎರಡು ವರ್ಷಗಳಿಂದ ನಡೆಸುವುದಕ್ಕೆ ಹೊರಟಿದ್ದೇವೆ. ರೀ-ಅಕ್ಷ ನರೀಸ್ ಎಲಿಮೆಂಟ್ಸ್ ಎಂದರೆ, ನಮ್ಮಲ್ಲಿ ಸಾಮಾಜಿಕ ಆರ್ಥಿಕ ವರ್ಗಗಳು ಬೇರೆ ಬೇರೆ ಇರುವುದಿಲ್ಲ. ದೇವರ ಹೆಸರಿನಲ್ಲಿ ರೀ-ಅಕ್ಷನರೀಸ್ ಇದ್ದಾರೆ, ಮತದ ಹೆಸರಿನಲ್ಲಿ ಇದ್ದಾರೆ, ಜಾತಿಯಲ್ಲಿ ಇದ್ದಾರೆ, ಹಣದಲ್ಲಿ ಇದ್ದಾರೆ. ಒಟ್ಟಿನಲ್ಲಿ ವ್ಯಾಪಾರಸ್ಥರು ಎಂದರೂ ಅಲ್ಲಿಯೂ ಹೆಚ್ಚಾಗಿ ಲಾಭ ಬಂದರೆ, ಅವರೆಲ್ಲಾ ಒಂದೇ ಜಾತಿ. ಈ ಬ್ಲಾಕ್‌ಮಾರ್ಕೆಟ್ ಮಾಡುವವರಿಗೂ ಜಾತಿ ಇದೆ, ಇಂಥಾದ್ದು ನಮ್ಮ ಪರಿಸ್ಥಿತಿ ಇರಬೇಕಾದರೆ, ನಾವು ಎರಡು ವರ್ಷಗಳಿಂದ ಸರ್ಕಾರವನ್ನು ಯಾವರೀತಿ ನಡೆಸುತ್ತಿದ್ದೇವೆ, ಸರ್ಕಾರದ ಸೂತ್ರವನ್ನು ಹಿಡಿದು, ಸರ್ಕಾರದ ರಥವನ್ನು ಹೇಗೆ ನಡೆಸುತ್ತಿದ್ದೇವೆ, ಪರಿಸ್ಥಿತಿಯನ್ನು ಹೇಗೆ ಎದುರಿಸುತ್ತಿದ್ದೇವೆ ಇದರ ಬಗ್ಗೆ ತಾವು ದಯಮಾಡಿ ಒಂದು ನಿಷ್ಕಲ್ಮಷ ಮನಸ್ಸಿನಿಂದ ಯೋಚನೆ ಮಾಡಿ ಇದರಲ್ಲಿ ನಾವು ಯಶಸ್ವಿಯಾಗಿದ್ದೇವೆಯೋ ಇಲ್ಲವೋ ಹೇಳಿ.

ಇನ್ನು ಲಾ ಅಂಡ್ ಆರ್ಡರ್, ಅಂದರೆ. ಕಾನೂನು ರಕ್ಷಣೆ ಮತ್ತು ಶಿಸ್ತು ರಕ್ಷಣೆ ಮಾಡತಕ್ಕಂಥಾದ್ದು, ಇದು ಎಲ್ಲಾ ನಾಗರೀಕ ಸರ್ಕಾರಗಳ ಜವಾಬ್ದಾರಿ ಇದು ಮೂಲಭೂತವಾದುದು. ಇದನ್ನು ನಾವೆಲ್ಲರೂ ಒಪ್ಪಿದ್ದೇವೆ. ಯಾರೂ ಇದಕ್ಕೆ ವಿರೋಧವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಕಾನೂನು ರಕ್ಷಣೆಯ ಬಗ್ಗೆ, ಲಾ ಅಂಡ್ ಆರ್ಡರ್ ಮೇಂಟೆನೆನ್ಸ್ ಬಗ್ಗೆ ನಾವು ಪ್ರಯತ್ನಪಟ್ಟು ಯಶಸ್ವಿಯಾಗಿ ದ್ದೇವೆಯೋ ಅಥವಾ ವಿಫಲರಾಗಿದ್ದೇವೆಯೋ ? ಇದರಬಗ್ಗೆ ಟೀಕೆ ಮಾಡು ವುದಾದರೆ, ಅದಕ್ಕೆ ನಾನು ಒಪ್ಪುತ್ತೇನೆ.

ಶ್ರೀ ಕೆ. ಹನುಮೇಗೌಡ :—ಗುಜರಾತಿನಲ್ಲಿ ಏನಾಗಿದೆ ?

ಶ್ರೀ ದೇವರಾಜ ಅರಸ್ :—ನಾನು ಈಗ ಕರ್ನಾಟಕದ ಬಗ್ಗೆ ಮಾತನಾಡು ತ್ತಿದ್ದೇನೆ. ನಿಮ್ಮನ್ನು ಇನ್ನೂ ಗುಜರಾತಿಗೆ ಕಳುಹಿಸಿಕೊಟ್ಟಿಲ್ಲ. ನಮಗೆ ಕರ್ನಾಟಕದಲ್ಲಿ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದು ಜವಾಬ್ದಾರಿ ಇದೆ, ಗುಜರಾತಿನಲ್ಲಿ ಅಲ್ಲ.

ಇನ್ನು ಕಾರ್ಮಿಕ ವರ್ಗದ ಬಗ್ಗೆ ಹೇಳುವುದಾದರೆ ಈ ಎರಡು ವರ್ಷಗಳಲ್ಲಿ, ಕಾರ್ಮಿಕ ವರ್ಗದಲ್ಲಿ ಬಹಳ ಘರ್ಷಣೆಗಳು ಉಂಟಾಗಿವೆ. ಒಂದು ರೀತಿಯಲ್ಲಿ ಕಾರ್ಮಿಕರು 1972-73ನೇ ಸಾಲಿನಲ್ಲಿ ನಡೆಸಿದಂಥ ಒಟ್ಟು ಸ್ಟ್ರೈಕ್ಸ್ ಲಾಕ್ ಔಟ್ ಇವೆಲ್ಲವನ್ನೂ ತೆಗೆದುಕೊಂಡರೆ 1973-74 ನೇ ಇಸವಿಗಿಂತ ಅದು ಕಡಿಮೆ ಇದೆ. ಆದರೆ ಲೇಬರ್ ಅನ್‌ರೆಸ್ಟ್ ಎಂದು ನಾವು ಏನು ಹೇಳುತ್ತೇವೆಯೋ ಅಂಥ ಒಂದು ವಾತಾವರಣ ದೇಶದಲ್ಲಿ ಹಬ್ಬಿದೆ. ಈ ಒಂದು ವಾತಾವರಣದ ಗಾಳಿ ಇಲ್ಲಿಯೂ ಬೀಸಿದೆ. ಒಟ್ಟಿನಲ್ಲಿ ಹೇಳುವುದಾದರೆ, ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ, ನಮ್ಮ ದೇಶದಲ್ಲಿ 1972ನೇ ಇಸವಿಯಲ್ಲಿ ಸುಮಾರು 70-80 ಸ್ಟ್ರೈಕ್ಸ್ 16 ಲಾಕ್ ಔಟ್ಸ್‌ಗಳು ಆಗಿವೆ. ಈ ಸಾರಿ ಈ ವರ್ಷದ ಅಖೈರಿಗೆ ಸ್ವಲ್ಪ ಕಡಿಮೆಯಾಗಿದೆ. ಒಟ್ಟಿನಲ್ಲಿ ಕಾರ್ಮಿಕರ ಒಂದು ಅಂದೋಳನಕ್ಕೆ ಏನೇ ಕಾರಣ ಇರಲಿ ನಾವು ಆಂಧೋಳನ ಮಾಡಬೇಕು ಎನ್ನುವುದಕ್ಕೆ ಕಾರಣ ಬೆಲೆಗಳು ಜಾಸ್ತಿಯಾಗುತ್ತಿವೆ. ನಾವು ಇದನ್ನು ತಡೆಗಟ್ಟುವುದಕ್ಕೆ ಅಸಮರ್ಥರಾಗಿದ್ದೇವೆ ಎಂದು ಇದ್ದಾಗ ದೇಶದಲ್ಲಿ ಏನು ನಡೆಯುತ್ತಿದೆ? ಕಾರ್ಮಿಕರು ಯಾವುದೋ ಒಂದು ಟೈಂನಲ್ಲಿ ತಮ್ಮ ಬೋನಸ್ ಮತ್ತು ಡಿ ಎ ಅನ್ನು ಹೆಚ್ಚಿಸಬೇಕು ಎಂದಾಗ ಇಲ್ಲಿ ನಾವು ಡಿ ಎ ಹೆಚ್ಚಿಸಿದ ಕೂಡಲೇ ಮಾರುಕಟ್ಟೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಲೆಕ್ಕ ಹಾಕಿ ನೋಡಿದರೆ ಬೆಲೆಗಳು ಜಾಸ್ತಿಯಾಗುತ್ತಿದೆ.

ಇದೇ ರೀತಿ ಸರ್ಕಾರಿ ನೌಕರರಿಗೆ ಭತ್ಯವನ್ನು ಜಾಸ್ತಿ ಮಾಡಿದ ಕೂಡಲೇ, ಬೆಳಿಗ್ಗೆ ಹೋಗಿ ಮಾರ್ಕೆಟ್ಟಿನಲ್ಲಿ ತರಕಾರಿ ಹಣ್ಣು ಹಂಪಲುಗಳು ಮೊದಲುಗೊಂಡು ಎಲ್ಲಾ ಪದಾರ್ಥಗಳ ಬೆಲೆಗಳನ್ನೂ ಜಾಸ್ತಿ ಮಾಡಿರುತ್ತಾರೆ, ಏತಕ್ಕೆ ಹೀಗೆ ಆಗುತ್ತದೆ? ಯಾರದು ತಪ್ಪು ನೀವೇ ನೋಡಿ ಎಂದು ಹೇಳುತ್ತೇನೆ, ಪರಿಸ್ಥಿತಿ ಹೀಗೆ ಇದೆ. ಏತಕ್ಕೆ ಈ ವಿಚಾರವನ್ನು ಹೇಳಿದೆನೆಂದರೆ ಸರ್ಕಾರ ಒಂದೇ ಇದೆಲ್ಲದಕ್ಕೂ ಜವಾಬ್ದಾರಿ, ಸರ್ಕಾರದ ಮೇಲೆಯೇ ಹೇಳುತ್ತೀರಿ ಪ್ರಜಾತಂತ್ರದಲ್ಲಿ ಇಂಥ ಪರಿಸ್ಥಿತಿಯನ್ನು ತಡೆಗಟ್ಟಬೇಕಾದರೆ ಸರ್ಕಾರ ಒಂದರಿಂದಲೇ ಸಾಧ್ಯವಿಲ್ಲ, ನಮ್ಮ ಎದುರು ಪಕ್ಷದವರದೂ ಜವಾಬ್ದಾರಿ ಇದೆ, ಕಾರ್ಮಿಕರ ಜವಾಬ್ದಾರಿನೂ ಇದೆ, ಬೇರೆ ಬೇರೆ ರಂಗದಲ್ಲಿ, ಆರ್ಗನೈಜೇಷನ್‌ಗಳಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅವರೆಲ್ಲರ ಜವಾಬ್ದಾರಿನೂ ಇದೆ. ಒಂದು ಕಡೆ ಬೆಲೆಗಳು ಏರುತ್ತಾ ಇದೆ ಎಂದರೆ ಸಾಮಾನುಗಳು ಕೂಡ ಇಲ್ಲದೆ ಹೋದರೆ ಬೆಲೆಗಳು ಕೂಡ ಏರುತ್ತವೆ. ಸಾಮ್ಯಾನುಗಳ ಅಭಾವ, ಸಾಮಾನುಗಳನ್ನು ಉತ್ಪಾದನೆ ಮಾಡತಕ್ಕದ್ದು ಕಡಿಮೆಯಾದರೆ ಬೆಲೆ ಏರುತ್ತದೆ. ಉತ್ಪಾದನೆ ಕಡೆ ನೋಡಿ ಏನು ಆಗುತ್ತಿದೆ ಎಂದು, ಲಾಕೌಟ್‌ಗಳು, ಸ್ಟ್ರೈಕ್‌ಗಳು ಜಾಸ್ತಿಯಾಗುತ್ತಿರುವುದರಿಂದ ಉತ್ಪಾದನೆ ಕಡಿಮೆಯಾಗುತ್ತಿದೆ. ಸ್ಟೀಲ್ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಉತ್ಪಾದನೆಯು ಮಟ್ಟ ಕಡಿಮೆಯಾಗುತ್ತಿದೆ. ಪ್ರೊಡಕ್ಷನ್ ಕಡಿಮೆ

(ಶ್ರೀ ಡಿ. ದೇವರಾಜ್ ಅರಸ್)

ಆಗುವುದಕ್ಕೆ ಕಾರಣ ಸ್ಟ್ರೈಕ್‌ಗಳು. ಅದೇ ಪ್ರಾಮುಖ್ಯವಾದ ಕಾರಣ ಆಗಿದೆ, ಇದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಒಟ್ಟಿನಲ್ಲಿ ಸ್ಟೀಲ್ ಬೆಲೆ ಜಾಸ್ತಿಯಾಯಿತು ಎಂದು ಹೇಳುತ್ತೀರಿ. ಪ್ರೊಡಕ್ಷನ್ ಕಡಿಮೆಯಾಯಿತು ಎಂದು ಯಾರು ಮಾತನಾಡುವುದಿಲ್ಲ ಬೆಲೆ ಜಾಸ್ತಿಯಾಯಿತು ಎಂದು ಹೇಳುತ್ತೀರೇ ಹೊರತು ಜಾಸ್ತಿಯಾಗುವುದಕ್ಕೆ ಕಾರಣ ಯಾರು ? ವಿರೋಧ ಪಕ್ಷದವರ ಜವಾಬ್ದಾರಿ ಇಲ್ಲವೋ, ಯಾರು ಇದನ್ನು ಪ್ರಚೋದನೆಯನ್ನುಂಟು ಮಾಡುತಾರೆ ಅವರ ಜವಾಬ್ದಾರಿಯೂ ಇದೆ. ಬೆಲೆಗಳನ್ನು ತಡೆಹಿಡಿಯುವುದಾದರೂ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನಮ್ಮ ರಾಜ್ಯದಲ್ಲಿ ಪ್ರಚೋದನೆ ಮಾಡಿರುವವರು ಯಾರು ?

ಶ್ರೀ ಡಿ. ದೇವರಾಜ್ ಅರಸ್.—ನೀವು ಇದ್ದರೆ ನಿಮ್ಮದೂ ಆಗುತ್ತದೆ, ವಿದ್ಯಾರ್ಥಿಗಳನ್ನು ಉಪಯೋಗ ಮಾಡಿಕೊಳ್ಳತಕ್ಕದ್ದು ಜಾಸ್ತಿಯಾಗುತ್ತಿದೆ. ಅಜಿಟೇಷನ್ ಜಾಸ್ತಿಯಾಗುತ್ತಾ ಇದೆ. 1972ರಲ್ಲಿ 140 ಅಜಿಟೇಷನ್‌ಗಳು ಆದವು. 1973ನೇ ಸಾಲಿನಲ್ಲಿ ಮಾನ್ಯ ಅಧ್ಯಕ್ಷರೇ, ಸುಮಾರು 501 ಸಾರಿ ಅಜಿಟೇಷನ್‌ಗಳು ವಿದ್ಯಾರ್ಥಿಗಳಿಂದ ನಡೆದಿವೆ. ಆ ಮೇಲೆ ಬೆಲೆಗಳ ಏರಿಕೆಯನ್ನು ತಡೆಗಟ್ಟುವ ಎಜಿಟೇಷನ್ ಬೇರೆ. 1972ರಲ್ಲಿ ಇದು ಇರಲಿಲ್ಲ. 1973ರಲ್ಲಿ 22 ಬಂದ್‌ಗಳು ಮತ್ತು 300 ಚಿಲ್ಲರೇ ಡೆಮಾನ್‌ಸ್ಟ್ರೇಷನ್‌ಗಳನ್ನು ನಡೆಸಿದ್ದಾರೆ. ಇಷ್ಟೆಲ್ಲಾ ಗೊಂದಲಗಳು ಗಲಭೆಗಳು ಕಲುಷಿತ ವಾತಾವರಣ ಇದ್ದರೂ ಕೂಡ ನಾನು ಹೇಳುತ್ತೇನೆ, ಈ ಮನೆಯ ಸಭೆಯ ಸದಸ್ಯರೆಲ್ಲರೂ ಒಪ್ಪುತ್ತೀರಿ, ಇಷ್ಟೆಲ್ಲವನ್ನೂ ಸರ್ಕಾರ ಎದುರಿಸಿದೆ, ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದರಲ್ಲಿ ಯಶಸ್ವಿಯಾಗಿದೆ. ಈ ವಿಷಯದಲ್ಲಿ ನಮ್ಮ ಅಧಿಕಾರಿಗಳು ಕೂಡ ಈ ಮನೆಯ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ ಎನ್ನತಕ್ಕಂಥದ್ದನ್ನು ತಾವು ಒಪ್ಪುತ್ತೀರೆಂದು ಹೇಳುತ್ತೇನೆ. ಯಾವುದನ್ನು ನಾವು ಟೀಕೆ ಮಾಡಬೇಕಾದರೂ ಕಂಪ್ಯಾರಿಸನ್ ಮಾಡಿ ಮಾಡುತ್ತೇವೆ, ಪಕ್ಕದ ರಾಜ್ಯವನ್ನು ಹೋಲಿಸಿ ನೋಡುತ್ತೇವೆ, ಅಥವಾ ಇಡೀ ಪ್ರಪಂಚದ ಸನ್ನಿವೇಶಗಳಿಗೆ ಹೋಲಿಸಿಕೊಂಡು ವಿಚಾರ ಮಾಡುತ್ತೇವೆ ಹೀಗೆ ಇರಬೇಕಾದರೆ I say we have done far better.

ಬೆಲೆಗಳ ವಿಚಾರವೂ ಅಷ್ಟೆ, ಬರೀ ಕರ್ನಾಟಕ ರ್‍ಯಾಜದಲ್ಲಿ ಒಂದೇ ಅಲ್ಲ ಬೆಲೆಗಳು ಪ್ರಪಂಚದಲ್ಲಿಯೇ ಜಾಸ್ತಿಯಾಗಿದೆ. ಅದು ಎಲ್ಲವನ್ನೂ ಹೇಳಬೇಕಾದ ಅಗತ್ಯವಿಲ್ಲ, ತೆಂಗಿನ ಕಾಯಿ ಬೆಲೆ ಜಾಸ್ತಿಯಾಗಿದೆ, ಕೊಬ್ರಿ ಬೆಲೆ ಜಾಸ್ತಿಯಾಗಿದೆ, 2 ತಿಂಗಳಿಂದ ಈಚೆಗೆ ಆಗಿರುವುದನ್ನು ನಾನು ಹೇಳುತ್ತಾ ಇರತಕ್ಕದ್ದು ಎಷ್ಟೋ

ವಿಷಯುಗಳನ್ನು ಪ್ರಪಂಚದ ಮಾರ್ಕೆಟ್ ಬೆಲೆ ತೆಗೆದುಕೊಂಡರೆ This is a world phenomenan ಕೆಲವು ಸದಸ್ಯರು ಪ್ರತಿಯೊಂದಕ್ಕೂ ಪ್ರಪಂಚದ ಮಾರ್ಕೆಟ್ ಬೆಲೆ ತೋರಿಸಿ ಬಿಟ್ಟು ಹೋಲಿಕೆ ಮಾಡಿ ಹೇಳುತ್ತೀರಿ ಎಂದು ಹೇಳಿದರು, ನಾವು ನೀವು ಈ ಪ್ರಪಂಚದಲ್ಲಿ ಇರುವುದರಿಂದಲೇ ಅದನ್ನು ಹೋಲಿಕೆ ಮಾಡಿ ತೋರಿಸಲೇ ಬೇಕಾಗುತ್ತದೆ. ಈ ದೇಶದಲ್ಲಿ ಹಡಗು ಇಲ್ಲದಿದ್ದರೆ, ರಸ್ತೆ ಇಲ್ಲದಿದ್ದರೆ, ವಿಮಾನಗಳು ಇಲ್ಲದಿದ್ದರೆ, ಪುರಾಣ ಕಾಲದಲ್ಲಿಯು ವಿಚಾರದ ರೀತಿ ಅಗುತ್ತಿತ್ತು. ಭಾರತ ಪ್ರಪಂಚವನ್ನು ಬಿಟ್ಟು ಹೋಗಿಲ್ಲ, ಇವತ್ತು ಎಕನಾಮಿಕ್ ಟ್ರೆಂಡ್ ಫೋರ್ಸ್ ಏನು ಇದೆ ಅದು ಕರ್ನಾಟಕ ರಾಜ್ಯದ್ದೇ ಒಂದು ಫೋರ್ಸ್ ಇದೆ ಬೇರೆ ರಾಜ್ಯದ್ದೇ ಒಂದು ಫೋರ್ಸ್ ಇದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬ್ಲಾಕ್‌ಮಾರ್ಕೆಟೀಯರ್ಸ್ ಕೇಪ್ ಕಮೋರಿಯನ್‌ನಿಂದ ಹಿಮಾಲಯದ ವರೆಗೆ ಎಲ್ಲಾ ಒಂದೇ. ಇವತ್ತು ಯು. ಪಿ. ಯಲ್ಲಿ ಕುಳಿತುಕೊಂಡು ಒಬ್ಬ ಮನುಷ್ಯ ಇಷ್ಟಕ್ಕೆ ಮಾರಬೇಕು ಅಂತ ಹೇಳಿದರೆ ಎರಡೇ ಗಂಟೆಯೊಳಗೇ ಆ ವಿಚಾರದ ಅರಿವು ಎಲ್ಲಾ ವರ್ತಕರಿಗೂ ಗೊತ್ತಾಗಿರುತ್ತದೆ. ಸಾವಿರಾರು ವರ್ಷಗಳ ಹಿಂದೆ ಏನು ಆಗುತ್ತಿತ್ತು ಎಂದರೆ ಕೋಣಂದೂರು ಲಿಂಗಪ್ಪನವರ ಊರು ಆದ ತೀರ್ಥ ಹಳ್ಳಿಯಲ್ಲಿ ಏನು ನಡೆಯಿತು ಎಂಬುದು 3 ತಿಂಗಳಾದರೂ ಶಿವಮೊಗ್ಗಾಕ್ಕೆ ಗೊತ್ತಾಗುತ್ತಾ ಇರಲಿಲ್ಲ, ಅಂಥ ಕಾಲವಿತ್ತು. ಇವತ್ತು ಪ್ರಪಂಚದಲ್ಲಿ ಹಾಗೆ ಇಲ್ಲ, ಸೈನ್ಸ್ ಡೆವಲಪ್ ಆಗಿರುವುದರಿಂದ ವಿಷಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಹಳ ಬೇಗ ಹರಡುತ್ತಿರುವುದರಿಂದ ಎಕನಾಮಿಕ್ ಟ್ರೆಂಡ್ ಫೋರ್ಸ್ ಎಲ್ಲಾ ವಿಭಾಗಕ್ಕೂ ತಿಳಿಯುತ್ತದೆ. ಆದುದರಿಂದ ಪ್ರಪಂಚಕ್ಕೆ ಸಂಬಂದ ಪಟ್ಟದನ್ನು ಹೇಳುತ್ತೇನೆ. ದೇಶದ್ದೆಲ್ಲಾ ಹೇಳುತ್ತೇವೆ. ಇಂಥ ಟ್ರೆಂಡ್ಸ್ ಇದ್ದರೂ ಕೂಡ ಕರ್ನಾಟಕ ರಾಜ್ಯದ ಬೆಲೆಗಳನ್ನು ತೆಗೆದುಕೊಂಡು ಬೇರೆ ರಾಜ್ಯಕ್ಕೆ ಹೋಲಿಸಿ ನೋಡಿದರೆ ಎಲ್ಲಾ ಬೆಲೆಗಳು ಕಡಿಮೆ ಇವೆ.

ಶ್ರೀ ಎಸ್. ಬಂಗಾರಪ್ಪ.—ತಮಿಳುನಾಡಿನಲ್ಲಿ ಅಕ್ಕಿ ಬೆಲೆ ನಮ್ಮ ರಾಜ್ಯದ ಅಕ್ಕಿ ಬೆಲೆಗಿಂತ ಕಡಿಮೆ ಇದೆ, ವ್ಯತ್ಯಾಸವಿದೆ. ಯಾವ ವಿಷಯವನ್ನು ಹೇಳಿದರೂ ಮುಖ್ಯಮಂತ್ರಿಗಳು ಪ್ರಪಂಚ ಮಾರ್ಕೆಟ್ಟಿನ ಬೆಲೆಗೆ ಹೋಲಿಸುವುದಕ್ಕೆ ಹೋಗುತ್ತಾರೆ ಅವರ ವಾದದ ಸರಣಿ ಅರ್ಥವಾಗುವುದಿಲ್ಲ.

MR. DEPUTY SEPAKER.—All Hon. Member including the Minister have to see that when one Hon. Member is on his legs, the other Member, if he wants to interruot, he should say if the Hon. Member or Minister yields. If he does not yield he must resume his seat. That is the parliamentary democracy.

ಶ್ರೀ ಡಿ. ದೇವರಾಜ ಅರಸ್ ;—ಮಾನ್ಯ ಎದುರುಪಕ್ಷದ ಸದಸ್ಯರು ತಮಿಳುನಾಡಿಗೆ ಕಂಪ್ಯಾರಿಸನ್ ಮಾಡುವುದಕ್ಕೆ ಹೊರಟಾಗ ಅವರಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ, ತಮಿಳುನಾಡಿನಲ್ಲಿ ಪರ್ಸೆಂಟೇಜ್ ಆಫ್ ಇರಿಗೇಷನ್ ಎಷ್ಟಿದೆ ಎನ್ನುವುದನ್ನು ತಮ್ಮ ಮುಖಾಂತರ ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ತಮಿಳುನಾಡಿನಲ್ಲಿ ಪರ್ಸೆಂಟೇಜ್ ಆಫ್ ಇರಿಗೇಷನ್ 50 ಪರ್ಸೆಂಟ್ ಮತ್ತು ಅದಕ್ಕಿಂತ ಹೆಚ್ಚು ಇದೆ. ನಮಲ್ಲಿ ಎಷ್ಟು ಇದೆ ಅಂದರೆ....

5-00 P. M.

ಶ್ರೀ ಎಸ್. ಬಂಗಾರಪ್ಪ : 22 ಪರ್ಸೆಂಟ್ ವರ್ಕ್‌ಔಟ್ ಆಗುತ್ತಿದೆ.

ಶ್ರೀ ಡಿ. ದೇವರಾಜ ಅರಸ್ :—ನಾನು ಅಂಕಿಅಂಶ ಕೊಡುತ್ತೇನೆ. ತಪ್ಪಾಗಿದ್ದರೆ ಹೇಳಿ. ನಾನೂ ಕೂಡ ಪೂರ್ಣವಾಗಿ ಓದುವುದಕ್ಕೆ ಸಾಧ್ಯವಾಗುವುದಿಲ್ಲ. ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡುತ್ತೇನೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿಮರ್ಶೆ ಮಾಡೋಣ. ಎಣ್ಣೆ ಬೆಲೆ ತಮಿಳುನಾಡಿನಲ್ಲಾಗಲೀ, ಗುಜರಾತಿನಲ್ಲಾಗಲೀ, ಆಂಧ್ರಪ್ರದೇಶದಲ್ಲಾಗಲೀ ನಮ್ಮಲ್ಲಿ ಕೂಡ ಕಡಿಮೆ ಬೆಲೆ ಇದೆ. ಅಕ್ಕಿ ಬೆಲೆ ತಮಿಳುನಾಡಿನಲ್ಲಿ ಕಡಿಮೆ ಇದೆ. 50 ಪರ್ಸೆಂಟ್ ಇರಿಗೇಷನ್ ಇರತಕ್ಕ ಪ್ರದೇಶಕ್ಕೂ 3-4 ಜಿಲ್ಲೆಗಳಲ್ಲಿ 2-3 ಬೆಳೆ ಬೆಳೆಯುತಕ್ಕ ಪ್ರದೇಶಕ್ಕೂ ಹೋಲಿಸುತ್ತೀರಾ? 50 ಪರ್ಸೆಂಟ್ ಅಲ್ಲಿ, 12 ಪರ್ಸೆಂಟ್ ಇಲ್ಲಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಯಾವ ಒಂದು ಆಹಾರ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆ ನೀತಿಯನ್ನು ಅನುಸರಿಸುತ್ತಿರುವುದರಿಂದ ಹತೋಟಿ ಇಷ್ಟಾದರೂ ಇದೆ ಎಂದು ಧೈರ್ಯವಾಗಿ ಹೇಳುತ್ತೇನೆ. ಬಾರ್ಡರ್ ವಿಚಾರ ತೆಗೆದುಕೊಳ್ಳೋಣ. ನಮ್ಮ ಸ್ನೇಹಿತರು ಇಲ್ಲ. ನೆಲ ಜಲದ ವಿಷಯ ಹೇಳುವವರು ಅವರು ನಮ್ಮ ಸ್ನೇಹಿತರು ನೆಲ ಜಲದ ಬಗ್ಗೆ ಮಾತನಾಡುವಾಗ ಸಾಕಷ್ಟು ಹೇಳಿದ್ದಾರೆ. ನಾನು ಇಷ್ಟು ಮಾತ್ರ ಹೇಳಬಲ್ಲೆ. ನಮ್ಮ ಸರ್ಕಾರ ಬಂದ ಮೇಲೆ ಎರಡು ಸಮಸ್ಯೆಗಳನ್ನು ಜನ ಸಾಮಾನ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಅವರು ಮೆಚ್ಚುತ್ತಾರೆ ಎನ್ನುವ ರೀತಿಯಲ್ಲಿ ಬಗೆ ಹರಿಸಿದ್ದೇವೆ. ಆಹಾರದ ನೀತಿಯಲ್ಲಿ ಇವರದು ವಿತಂಡ ವಾದ. ರೈತರ ಹತ್ತಿರ ಲೆವಿ ತೆಗೆದುಕೊಂಡರೆ, ಅದೇಕೆ ತೆಗೆದುಕೊಳ್ಳುತ್ತೀರಿ ಎಂದು ಹೇಳುತ್ತಾರೆ, ಬೆಲೆ ಕೊಡುತ್ತಾ ಇರುವುದು ಬಹಳ ಕಡಿಮೆ ಎಂದು ಹೇಳುತ್ತಾರೆ. ನಮ್ಮ ಸ್ನೇಹಿತರು ಅದರಲ್ಲೂ ನಮ್ಮ ವಿರೋಧಪಕ್ಷದ ಸ್ನೇಹಿತರು ರೈತರಲ್ಲಿ ನೀವು ಸಹಕರಿಸಬೇಡಿ, ಧಾನ್ಯ ಕೊಡಬೇಡಿ, ಲೆವಿ ಕೊಡಬೇಡಿ ಎಂದು ಹೇಳುತ್ತಾರೆ. ಒಂದು ಕಡೆ ರೈತರು ನಮಗೆ ಧಾನ್ಯ ಕೊಡಕೂಡದು, ಒಂದು ಕಡೆ ನಾವು ಆಹಾರ ಒದಗಿಸಬೇಕು, ಹೀಗಾದರೆ ಹೇಗೆ ? ರೊಟ್ಟಿಯನ್ನು ತಿನ್ನಲೂಬೇಕು, ಅದು ಹಾಗೆ ಉಳಿಯಲೂ

ಬೇಕು, ಅದು ಹೇಗೆ ಸಾಧ್ಯವಾಗುತ್ತದೆ? ಈ ಜಾದು ಮಾಡಬೇಕಾದರೆ ಅವರು ಯಾರಾದರೂ ಅಧಿಕಾರಕ್ಕೆ ಬಂದರೆ ಗೊತ್ತಾಗುತ್ತದೆ. ಮತ್ತೆ ಕಂಟ್ರೋಲ್ ತೆಗೆದುಬಿಡಿ ಎನ್ನುವ ವಾದವನ್ನು ಹೇಳುತ್ತಿದ್ದಾರೆ. ಸಮಾಜವಾದದ ರೀತಿನೀತಿಗಳನ್ನು ಜಾರಿಗೆ ತರುವುದಕ್ಕೆ ಹೊರಟಾಗ ಕಂಟ್ರೋಲ್ ಎಸೆನೆಷಿಯಲ್, ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಇದು ಎಲ್ಲಾ ಸೋಷಿಯಲಿಸ್ಟ್ ಎಕಾನಾಮಿಸ್ಟ್ ಒಪ್ಪಿರತಕ್ಕ ಮಾತು. ನಿಜಲಿಂಗಪ್ಪನವರು ಹೇಳಿದರು ಎಂದು ಇವರು ಹೇಳುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅವರ ಹೆಸರು ಹೇಳದೇ ಇದ್ದರೆ, ನಿಮ್ಮ ಆರೋಗ್ಯ ಕೆಟ್ಟುಹೋಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಪುಟ್ಟಸ್ವಾಮಿಯವರು ಹೇಳಿದರು ಎಂದು ಹೇಳಲೇ? ವೀರೇಂದ್ರಪಾಟೀಲರು ಹೇಳಿದರು ಎಂದು ಹೇಳಲೇ? ನಿಮಗೆ ಯೂರು ತುಂಬ ಪ್ರಿಯರು ಹೇಳಿ? ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಕಂಟೋಲ್ ತೆಗೆಯಬೇಕು ಎಂದು ಒಂದು ರೆಸಲ್ಯೂಷನ್‌ನ್ನು ಈ ಸಭೆಯ ಮುಂದೆ ತಂದು ಬಿಡಲಿ.

ಶ್ರೀ ಕೆ. ಹೆಚ್. ಹನುಮೇಗೌಡ :—ನೀವು ಒಪ್ಪಿಕೊಳ್ಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್ :—ದೇಶ ಮೆಚ್ಚಲಿ ತೆಗೆದುಕೊಂಡು ಬನ್ನಿ.

ಶ್ರೀ ವೈ ಎಸ್. ಪಾಟೀಲ್ :—ಪಾರ್ಟಿ ಅಧಿಕಾರ ತಮ್ಮ ಕಡೆ ಇದೆ.

ಶ್ರೀ ಡಿ. ದೇವರಾಜ್ ಅರಸ್ :-ನಮ್ಮ ನೀತಿ ಇದು, ನೀವು ರೆಸಲ್ಯೂಷನ್ ತನ್ನಿ, ನಿಮ್ಮ ನೀತಿ ಸಾರಿರಿ. ಶನಿವಾರ ದಿವಸ ಹೇಗೂ ನಾನ್ ಅಫಿಸಿಯಲ್ ರೆಸಲ್ಯೂಷನ್ ಇದೆ. ಆಗ ತೆಗೆದುಕೊಂಡು ಬನ್ನಿ, ಸಭೆ ಚರ್ಚೆಗೆ ಒಪ್ಪಿಗೆ ಕೊಡುತ್ತದೆ. ಹೊರಗಡೆ ಜನಗಳ ಹತ್ತಿರ ಹೋಗಿ, ಸರ್ಕಾರದ ಮೇಲೆ ಬೀಳಿ ಕಂಟ್ರೋಲ್ ಹಾಕಿದ್ದಾರೆ, ನಿಮ್ಮ ಹತ್ತಿರ ಲೆವಿ ವಸೂಲು ಮಾಡುತ್ತಾರೆ, ನೀವು ಲೆವಿ ಕೊಡಬೇಡಿ ಎಂದು ಭಾಷಣ ಮಾಡುತ್ತೀರಾ? ಧೈರ್ಯ ಇದ್ದರೆ ಮಾಡಿ. ಅದಕ್ಕೆ ತಯಾರು. ನಿಮ್ಮ ನೀತಿ ಏನಿದೆ ಅದು ದೇಶಕ್ಕೆ ಅರ್ಥವಾಗಲಿ. ನಾವಾದರೂ ಲೆವಿ ಏಕೆ ತೆಗೆದುಕೊಳ್ಳುತ್ತೇವೆಂದರೆ, ವಲ್‌ನರಬಲ್ ಸೆಕ್ಷನ್, ಲೇಬರ್ ಕ್ಲಾಸ್‌ಗೆ ಆಹಾರಪದಾರ್ಥ ಒದಗಿಸಬೇಕು, ಬೆಂಗಳೂರು ಪಟ್ಟಣದಲ್ಲಿ ರೇಷನ್ ಕೊಡಬೇಕು ಎಂದು ಆಹಾರ ಪದಾರ್ಥ ವಸೂಲು ಮಾಡಬಾರದು, ರೇಷನ್ ಕೊಡಬೇಕು. ಈ ಜಾದು, ಮಾಯ ಮಾಟವನ್ನು ಯಾರು ಮಾಡುವುದಕ್ಕೆ ಸಾಧ್ಯ? ನನಗಂತು ಗೊತ್ತಾಗುವುದಿಲ್ಲ. ಶ್ರೀಮಾನ್ ಬಂಗಾರಪ್ಪನವರಿಗೆ

(ಶ್ರೀ ಡಿ. ದೇವರಾಜ್ ಅರಸ್)

ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಆಹಾರದ ನೀತಿಯನ್ನು ಅವರು ಟೀಕೆ ಮಾಡುತ್ತಾರಲ್ಲ. ಮಾಡಲಿ. ನಾನು ಕೇಳುತ್ತೇನೆ ಎಷ್ಟು ಆಹಾರ ನಾವು ಸಂಗ್ರಹಿಸುತ್ತೇವೆ? 1972ನೇ ಇಸವಿಯಲ್ಲಿ ಪ್ರೊಡಕ್ಷನ್ ಎನಿತು 1972-73 ರಲ್ಲಿ ನಮ್ಮ ರಾಜ್ಯದಲ್ಲಿ ಟೋಟಲ್ ಪ್ರೊಡಕ್ಷನ್ ಎಸ್ಟಿಮೇಟ್ 48 ಲಕ್ಷ ಟನ್, ಈ ವರ್ಷ 61 ಲಕ್ಷ ಟನ್ ಎಂದು ಅಂದಾಜು ಮಾಡಿದ್ದಾರೆ. 1971-72, 1972-73 ಮತ್ತು 1973-74ರಲ್ಲಿ ಮಧ್ಯ ವರ್ಷ ಅಂದರೆ 1972ಕ್ಕೆ 60 ಲಕ್ಷ ಟನ್ ಆಗಿತ್ತು. ಕ್ಷಾಮಢಾಮರಗಳು ಬಂದ ಮೇಲೆ ಅದು ಕೇವಲ ಕಡಿಮೆಯಾಗಿ 48 ಲಕ್ಷ ಟನ್ನಿಗೆ ಬಂತು. ಈ ವರ್ಷ ಪುನಃ 61 ಲಕ್ಷ ಟನ್‌ಗೆ ಏರಿದೆ. ಆಹಾರೋತ್ಪಾದನೆ 61 ಲಕ್ಷ ಟನ್ ಎಂದು ಲೆಕ್ಕ ಇಟ್ಟುಕೊಂಡರೆ, ಪ್ರೊಕ್ಯೂರ್ ಮಾಡಬೇಕು, ಲೆವಿ ಮುಖೇನ ತೆಗೆದುಕೊಳ್ಳಬೇಕು. ನಾವು ಇಟ್ಟುಕೊಂಡಿರತಕ್ಕ ಗುರಿ ಎಷ್ಟು? ನಾವು ಇಟ್ಟುಕೊಂಡಿರತಕ್ಕ ಗುರಿ ಕೇವಲ ಭತ್ತ ರಾಗಿ ಮತ್ತು ಜೋಳ ಇವೆಲ್ಲ ಸೇರಿ ಒಟ್ಟು 4-4½ ಲಕ್ಷ ಟನ್.

ಎಲ್ಲವನ್ನು ಕೇಳುವುದಕ್ಕೆ ಹೊರಟು ಬಿಟ್ಟಿದ್ದಾರೆ ಎಂದು ಇವರು ಸರ್ಕಾರದ ಮೇಲೆ ಹೇಳುತ್ತಿದ್ದಾರೆ. ಆದರೆ ನಾವು 61 ಲಕ್ಷ ಟನ್ನಿನಲ್ಲಿ ಕೇವಲ 4 ಲಕ್ಷ ಟನ್ನು ತೆಗೆದುಕೊಂಡರೆ ರೈತರಿಗೆ ಏನು ಕಷ್ಟ ಆಯಿತು? ಇದನ್ನು ಆದರು ನಾವು ಏತಕ್ಕೆ ತೆಗೆದುಕೊಳ್ಳುತ್ತೇವೆ ಎಂದರೆ ಬಫರ್ ಸ್ಟಾಕ್ ಇಡುವುದಕ್ಕೆ. ಒಂದು ಕಡೆ ಬೆಂಗಳೂರು ಪಟ್ಟಣದಲ್ಲ ರಷನಿಂಗ್ ಮಾಡಬೇಕು, ಮೈಸೂರು, ಮಂಗಳೂರು ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗದಲ್ಲಿ ರೇಷನಿಂಗ್ ಮಾಡಬೇಕೆಂದು ಇದ್ದೇವೆ. ಜೊತೆಗೆ ಒಂದು ವರ್ಷದ ಕೆಲವು ತಿಂಗಳಲ್ಲಿ ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಜನರಿಗೆ ಆಹಾರ ಇಲ್ಲದ ಹಾಗೆ ಆಗುತ್ತದೆ. ಎಲ್ಲರಿಗೂ ಆಹಾರ ಸೌಲಭ್ಯ ಕೊಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರದ ಕೈಯಲ್ಲಿ ದಾಸ್ತಾನು ಇಲ್ಲದಿದ್ದರೆ ಅವರಿಗೆ ಆಹಾರ ಕೊಡುವುದು ಹೇಗೆ?

ಶ್ರೀ ಬಿ. ವಿ. ಕಕ್ಕಿಲಾಯ :—10 ಲಕ್ಷ ಟನ್ ಅದರೂ ಸಂಗ್ರಹ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್ :—I understand that policy ನಮ್ಮ ಮಿತ್ರರಿಗೆ ಹೇಳುತ್ತಾ ಇದ್ದೇನೆ. ಅವರು ಆಹಾರ ಧಾನ್ಯ ಕೊಡಬೇಡಿ ಎಂದು ಅನೇಕ ಕಡೆ ಭಾಷಣ ಮಾಡಿದ್ದಾರೆ. ಆ ಬಗ್ಗೆ ನನ್ನ ಹತ್ತಿರ ರಿಪೋರ್ಟ್ ಇದೆ. ಅವರು ಒಂದು ಕಡೆ ರೈತರಿಗೆ ಆಹಾರ ಧಾನ್ಯವನ್ನು ಕೊಡಬಾರದು ಎಂದು ಹೇಳುವುದು. ಇನ್ನು ಒಂದು ಕಡೆ ಹೋದರೆ ನಿಮಗೆ ಆಹಾರ ಧಾನ್ಯ

ಕಡಿಮೆ ಕೊಡುತ್ತಿದ್ದಾರೆ, ಒಂದು ಕಿಲೋ ಮಾತ್ರ ಕೊಡುತ್ತಿದ್ದಾರೆ ಎಂದು ಭಾಷಣ ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ಜನರಿಗೆ ಅವರು ಏನು ಹೇಳುತ್ತಾರೆ ಎಂದು ಅರ್ಥವಾಗುತ್ತದೆ. ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡದೆ ಸರ್ಕಾರ ಎಲ್ಲರನ್ನು ತೃಪ್ತಿಯಿಂದ ಇಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ :—ಇಲ್ಲದವರ ಹತ್ತಿರ ಲೆವಿಯನ್ನು ಹಿಂಸೆ ಮಾಡಿ ತೆಗೆದುಕೊಳ್ಳುತ್ತಾ ಇದ್ದೀರಿ. ಇದ್ದವರ ಹತ್ತಿರ ಲೆವಿ ತೆಗೆದುಕೊಳ್ಳಿ ಬೇಡ ಎಂದು ಹೇಳುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ಇದ್ದವರ ಹತ್ತಿರವೇ ನಾವು ಕೇಳುತ್ತ ಇರುವುದು.

ಶ್ರೀ ಸಿ. ಬೈರೇಗೌಡ :—ಹೋಲ್‌ಸೇಲ್ ವ್ಯಾಪಾರ ಮಾಡುವ ವಿಚಾರ ಏನು ಆಯಿತು ?

ಶ್ರೀ ಡಿ. ದೇವರಾಜ ಅರಸ್ :—ತಮ್ಮ ಮಾರ್ಕ್ಸ್ ವಾದಕ್ಕೆ ಆ ಮೇಲೆ ಬರುತ್ತೇನೆ. ಇನ್ನು ಪ್ರೈಸ್ ವಿಚಾರ ತೆಗೆದುಕೊಂಡರೆ 1972ನೇ ಇಸವಿಯಲ್ಲಿ ಒಂದು ಕ್ವಿಂಟಾಲ್ ಭತ್ತಕ್ಕೆ ಮ್ಯಾಕ್ಸಿಮಮ್ ಲೆವಿ ಪ್ರೈಸ್ ಅಂದರೆ 58 ರೂಪಾಯಿ ಇತ್ತು. ಈ ವರ್ಷ ಅದೇ ಭತ್ತಕ್ಕೆ 88 ರೂಪಾಯಿ ಕೊಡುತ್ತಾ ಇದ್ದೇವೆ. It ranges between 73 to 88 Rupees ಇದರಿಂದ ಏಕಾ ಏಕಿ 25 ರೂಪಾಯಿ ಹೆಚ್ಚಿಸಿದಂತಾಯಿತು. ನಮ್ಮ ಸ್ನೇಹಿತರು ಒಂದು ಕಡೆ ಆಹಾರದ ಬೆಲೆ ಜಾಸ್ತಿಯಾಯಿತು ಎಂದು ಹೇಳುತ್ತಾರೆ. ಇನ್ನು ಒಂದು ಕಡೆ ನಾವು ಕೊಡುತ್ತ ಇರುವ ಬೆಲೆ ಕಡಿಮೆ ಆಯಿತು ಅಂತ ಹೇಳುತ್ತಾರೆ. ಒಬ್ಬರು 110 ರೂಪಾಯಿ ಕೊಡಿ ಎಂದು ಹೇಳುತ್ತಾರೆ ಇನ್ನು ಒಬ್ಬರು 100 ರೂಪಾಯಿ ಕೊಡಿ ಎಂದು ಹೇಳುತ್ತಾರೆ. ಜನ ಸಂಘದ ಸ್ನೇಹಿತರು ನಾವು ರೈತರಿಗೆ ಕ್ವಿಂಟಾಲಿಗೆ 120 ರೂಪಾಯಿ ಕೊಟ್ಟು ಭತ್ತವನ್ನು ಕೊಂಡುಕೊಳ್ಳಬೇಕೆಂದು ಹೇಳುತ್ತಾರೆ, ಮತ್ತು ಆ ಅಕ್ಕಿಯನ್ನು 120 ರೂಪಾಯಿಗೆ ಕೊಟ್ಟು ಸರ್ಕಾರ ಒಂದೊಂದು ಕಿಂಟ್ವಾಲ್ ಅಕ್ಕಿಯ ಮೇಲೆ ಕನಿಷ್ಟ 80 ರೂಪಾಯಿ ಸಬ್‌ಸಿಡ್ಯಸ್ ಮಾಡ ಬೇಕೆಂದು ಹೇಳುತ್ತಾರೆ ಇಂತಹ ವಾದ ಮಾಡುವವರ ಕೈಗೆ ಸರ್ಕಾರ ಬಂದರೆ ಏನು ಆಗುತ್ತದೆ ಎಂದು ಜನಕ್ಕೆ ಗೊತ್ತಿಲ್ಲವೆ. ಒಂದೊಂದು ಕಿಂಟ್ವಾಲ್ ಅಕ್ಕಿಗೆ 80 ರೂಪಾಯಿ ಕೊಡುತ್ತ ಹೋದರೆ, ನಮ್ಮ ಬೊಕ್ಕಸದ ಹಣ ಬರೀ ಸಬ್‌ಸಿಡಿಗೆ ಕೊಡಬೇಕಾಗುತ್ತದೆ. ಆ ಮೇಲೆ ನಿಮ್ಮ ರಸ್ತೆಗಳು, ಸ್ಕೂಲುಗಳು, ಮತ್ತು ಸೋಷಿಯಲ್ ಸರ್ವಿಸಸ್ ಗತಿ ಏನು ? ದೇಶದಲ್ಲಿ ಇವರನ್ನು ಬಿಟ್ಟು ಬೇರೆ ಇಲ್ಲವೇ? ಅದನ್ನೇ ನಾನು ಹೇಳುತ್ತಾ ಇರುವುದು. One set of people

(ಶ್ರೀ ಡಿ. ದೇವರಾಜ ಅರಸ್)

ಅಂದರೆ ಶೋಷಕ ವರ್ಗದವರು in the name of Congress 'O' and Jana Sangh ಇವರು ಇಬ್ಬರೂ ಭೇದ ಇಲ್ಲ, ಇಬ್ಬರು ಒಂದೇ ನೀತಿಯನ್ನು ಅನುಸರಿಸುತ್ತಿದ್ದಾರೆ. ಜನಕ್ಕೆ ಮೋಸ ಮಾಡಿ ಅವರ ಮನಸ್ಸನ್ನು ಕೆಡಿಸಿ ನಮ್ಮ ಮೇಲೆ ಎತ್ತಿಕಟ್ಟುತ್ತಿದ್ದಾರೆಂದು ತಿಳಿದುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಅವರು ಬದುಕುವ ವಿಚಾರ ಮಾತ್ರ ಅಲ್ಲ; ಮೂಮೂಲಾಗಿ, ಅನುಚಾನವಾಗಿ, ಸಾಂಪ್ರದಾಯಿಕವಾಗಿ ಯಾವ ಯಾವ ಮಾರ್ಗಗಳ ಮುಖೇನ ಹಣ ಸಂಪಾದನೆ ಮಾಡುತ್ತಿದ್ದಾರೋ ಮತ್ತು ತಮ್ಮ ತಮ್ಮ ಆಸ್ತಿಗಳನ್ನು ಬೆಳೆಸುತ್ತ ಇದ್ದರೋ ಆ ಮಾರ್ಗಗಳಿಗೆ ಒಂದೊಂದಕ್ಕೆ ಧಕ್ಕೆ ಬರುತ್ತಾ ಇರುವುದು ಇದಕ್ಕೆ ಕಾರಣವಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಅಂಥವರ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳಿ, ಅಂತಹವರು ಯಾರು ಇದ್ದಾರೆ ಎಕ್ಸ್‌ಪೋಸ್ ಮಾಡಿ, ಅರೆಸ್ಟ್ ಮಾಡಿ ಹ್ಯಾಂಗ್ ಮಾಡಿ, ಬೇಡ ಅಂತ ಹೇಳುವುದಿಲ್ಲ. ಆದರೆ ಮುಖ್ಯ ಮಂತ್ರಿಗಳು ಈ ರೀತಿ ವ್ಯಂಗವಾಗಿ ಮಾತನಾಡಕೂಡದು.

ಉಪಾಧ್ಯಕ್ಷರು :—ಡೆಮೊಕ್ರಸಿಯಲ್ಲಿ ರಿಗರ್ ಮತ್ತು ವಿಗರ್ ಎರಡೂ ಇರಬೇಕು. It is the way of democratic life

ಶ್ರೀ ಡಿ. ದೇವರಾಜ ಅರಸ್ ;—ನಾನು ಮೊದಲೇ ಅರಿಕೆ ಮಾಡಿಕೊಂಡೆ ತಾವು 5 ದಿವಸಗಳವರೆಗೆ ಏನು ಬೈದರು ನಾವು ಎದ್ದು ಮಾತನಾಡಲಿಲ್ಲ. ನೀವು ಹೇಳಿದ್ದನ್ನೆಲ್ಲಾ ಕೇಳುತ್ತ ಕುಳಿತಿದ್ದೆವು. ನಿಮ್ಮಲ್ಲಿ ಜಗಳ ಮಾಡಿಕೊಳ್ಳುವುದಕ್ಕೆ ನಾವು ಬಂದಿಲ್ಲ ನಾವು ಕೋಪಿಸಿಕೊಂಡು ಕೂಗಾಡಲಿಲ್ಲ. ಆದ್ದರಿಂದ ತಾವು ಸಮಾಧಾನವಾಗಿ ನಾನು ಹೇಳುವುದನ್ನು ಕೇಳಲೇ ಬೇಕು. ಎಲ್ಲಿಯವರೆಗೆ ಅನ್ ಪಾರ್ಲಿಮೆಂಟರಿ ಭಾಷೆಯನ್ನು ನಾನು ಉಪಯೋಗ ಮಾಡುವುದಿಲ್ಲವೋ, ಅಲ್ಲಿಯವರೆಗೆ ನೀವು ಕೇಳಲೇ ಬೇಕು. ನಮ್ಮ ಕೆಲವು ಸ್ನೇಹಿತರು ನಮ್ಮನ್ನು ಬೈಯ್ಯುವುದಕ್ಕೆ ಶುರು ಮಾಡಿದರು, ಲ್ಯಾಂಡ್ ರಿಫಾರಮ್ಸ್ ಬಿಲ್ಲನ್ನು ಪಾಸ್ ಮಾಡಿ ನಿಮಗೆ ಕೊಟ್ಟರೆ ಅದನ್ನು ಜಾರಿಗೆ ತಂದಿಲ್ಲ, ಹಳೇ ಕಾಂಗ್ರೆಸ್ ದಾರಿಯಲ್ಲೇ ಹೊರಟುಬಿಟ್ಟಿದ್ದೀರಿ ಎಂದು. One section of our friends in the opposition is to accuse me ಇನ್ನು ಒಂದು ಸೆಕ್ಷನ್ ದೆಹಲಿಗೆ ಯಾತ್ರೆ ಹೊರಟರು, ಅಲ್ಲಿ ತಿಂಗಳುಗಟ್ಟಲೆ ಕೂತರು, ಅಲ್ಲಿ ಹೋಗಿ ಲ್ಯಾಂಡ್ ರಿಫಾರಮ್ಸ್ ಬರದ ಹಾಗೆ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡಿದರು. ಆ ಪ್ರಯತ್ನದ ಪರಿಣಾಮವಾಗಿ ನಾವು ಈ ರಿಫಾರಮ್ಸ್ ತರುವುದಕ್ಕೆ ಇಷ್ಟು ನಿಧಾನವಾಯಿತು, ಕೊನೆಗೆ ಸಾಹಸ ಮಾಡಿ ನಾವು ಹುಲಿ ಬಾಯಿಂದ ಕಿತ್ತುಕೊಂಡು ಬಂದ ಹಾಗೆ ಆಯಿತು.

ಶ್ರೀ ಎಸ್. ಬಂಗಾರಪ್ಪ :—ಕೇಂದ್ರ ಸರ್ಕಾರ ಹಾಗಾದರೆ ಹಾಲಿಯೋ ?

ಶ್ರೀ ಡಿ. ದೇವರಾಜ ಅರಸ್ :—ಅಲ್ಲಿಯೂ ವೆಸ್ಟೆಡ್ ಇಂಟರೆಸ್ಟ್ ಇದ್ದಾರೆ. ಎಲ್ಲಾ ಹಂತದಲ್ಲಿಯೂ ವೆಸ್ಟೆಡ್ ಇಂಟರೆಸ್ಟ್ ಇದ್ದಾರೆ. ಈ ಪೋಷಕ ವರ್ಗ ಎಲ್ಲಾ ಹಂತದಲ್ಲಿಯೂ ರಾಜಕೀಯ ಪಕ್ಷಗಳ ಹೆಸರನ್ನು ಉಪಯೋಗಿಸಿ ಕೆಲಸ ಮಾಡುತ್ತಾ ಇದ್ದಾರೆ. ಹೋದ ವರ್ಷ ನಮಗೆ ಒಬ್ಬ ವ್ಯಕ್ತಿಗೆ ಒಂದು ಕಿಲೋ ಮೇಲೆ ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ಆಹಾರದ ನೀತಿಯನ್ನು ಬದಲಾವಣೆ ಮಾಡಿ ಹೆಚ್ಚು ಸಂಗ್ರಹಣೆ ಮಾಡಿದ ಪರಿಣಾಮವಾಗಿ ಕನಿಷ್ಟ ಮೂರು ಕಿಲೋ ಅಕ್ಕಿ, ಮೂರು ಕಿಲೋ ಮೈದಾ ಒಂದು ಕಿಲೋ ಗೋಧಿ ಒಂದು ತಿಂಗಳಿಗೆ ಒಂದು ಯೂನಿಟ್ಟಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ : ನೀವು ಎಲ್ಲವನ್ನು ಒಟ್ಟಿಗೆ ಕೈಗೆ ತೆಗೆದುಕೊಂಡು ಇಡೀ ದೇಶದ ಜನರಿಗೆ ಏತಕ್ಕೆ ಆ ರೀತಿ ಕೊಡುವುದಿಲ್ಲ ?

ಶ್ರೀ ಡಿ. ದೇವರಾಜ ಅರಸ್ :—ಅದಕ್ಕೆ ನೀವೇ ಅರ್ಧ ಕಾರಣ.

ಶ್ರೀ ಎಂ. ಎಸ್. ಕೃಷ್ಣನ್ :—ವೆಸ್ಟೆಡ್ ಇಂಟರೆಸ್ಟ್ ಕಾರಣ ನಾವು ಅಲ್ಲ.

ಶ್ರೀ ಡಿ. ದೇವರಾಜ್ ಅರಸ್ :—ಅದಕ್ಕೆ ಅನೇಕ ಕಾರಣಗಳು ಇವೆ. There are theoreticians in this country. ಬರಗಾಲ ಇದೆ ಎಂದು ಹೇಳಿದರೆ ಅದನ್ನು ನೋಡಿಕೊಂಡು ನಾವು ಸುಮ್ಮನೆ ಕುಳಿತಿದ್ದೇವೆಯೋ ಹೇಳಿ. ನಿಮ್ಮ ಮಾತನ್ನು ಕೇಳಿಕೊಂಡು ಹೋದರೆ ನಾವು ಹಳ್ಳಕ್ಕೆ ಬೀಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ಬರಗಾಲ ಬಂದಿದೆ ಜನಗಳಿಗೆ ಅನ್ನ ಕೊಡಿ ಎಂದು ಕೇಳಿದರೆ ತಪ್ಪೇ ?

ಶ್ರೀ ಡಿ. ದೇವರಾಜ ಅರಸ್ :—ನೀವು ಕೇಳುವುದು ಮಾರ್ಕ್ಸ್ ಮಹಾಮುನಿ, ಲೆನಿನ್ ಅವರುಗಳು ಹೇಳುವುದನ್ನು ಕೇಳಿದ್ದೀರಿ. ಏತಕ್ಕೆಂದರೆ ಅವರು ನಿಮ್ಮ ಗುರುಗಳು ಆದ್ದರಿಂದ ಕೇಳಿದ್ದೀರಿ. ಆದರೆ ನಮ್ಮ ದೇಶದಲ್ಲಿ ಅವರ ಎಕನಾಮಿಕ್ ಪ್ರಿನ್ಸಿಪಲ್ಸ್‌ನ್ನು ಇಲ್ಲಿ ವರ್ಕ್‌ಔಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ರಷ್ಯಾ ದೇಶಕ್ಕೆ ಸರಿ, ಅದನ್ನು ಅವರು ಒಪ್ಪಿಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್ : ಸುಮ್ಮನೆ ಒಪ್ಪಿಕೊಳ್ಳಬೇಕು ಚ ಎಂದರೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ ಅಮೇರಿಕಾ ದೇಶ ಉದಾಹರಣೆಗೆ ತೆಗೆದುಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್:—ಅಮೇರಿಕಾ ದೇಶದಲ್ಲಿ ಏನು ನಡೆಯುತ್ತಾ ಇದೆ ಎನ್ನುವುದನ್ನೂ ಸಹ ಕೇಳಿದ್ದೇವೆ. ಅದು ದೇಶಕ್ಕೆಲ್ಲಾ ಗೊತ್ತಿದೆ. ಆದುದರಿಂದ ಈ ಹೋಲ್‌ಸೇಲ್ ಟ್ರೇಡ್ ವ್ಯಾಪಾರವನ್ನು ತೆಗೆದುಕೊಳ್ಳಬೇಕು ಎಂದರೆ It is not so simple. ಏತಕ್ಕೆಂದರೆ ಇದರಲ್ಲಿ ದುಡ್ಡಿನ ಪ್ರಶ್ನೆ ಒಂದೇ ಬರುವುದಿಲ್ಲ ನಮ್ಮಲ್ಲಿರತಕ್ಕ ಆಡಳಿತ ವರ್ಗ ಹೇಗಿದೆ, ನಮ್ಮಲ್ಲಿರತಕ್ಕ ಜನ ಹೇಗಿದ್ದಾರೆ, ಇಲ್ಲಿ ಇರತಕ್ಕಂಥ ನಾನ್ ಎಲ್‌ಮೆಂಟ್ಸ್ ಹೇಗಿದ್ದಾರೆ, ವ್ಯಾಪಾರ ಮಾಡುವವರ ಹತ್ತಿರ ಅದನ್ನು ಹೇಗೆ ತೆಗೆದುಕೊಳ್ಳಬೇಕು ಅದನ್ನೆಲ್ಲಾ ಯೋಚನೆ ಮಾಡದೇ ಸುಮ್ಮನೆ ತೆಗೆದುಕೊಳ್ಳಿ ಎಂದರೆ ಅದು ಅಷ್ಟು ಸುಲಭವಲ್ಲ. ರಷ್ಯಾ ದೇಶ ಅದು ಒಂದು ಕಮ್ಯೂನಿಸ್ಟ್ ಕಂಟ್ರಿ ಆಗಿರುವುದರಿಂದ ಅಲ್ಲಿ ಯಾವನಾದರೂ ಒಬ್ಬ ತಪ್ಪು ಮಾಡಿದರೆ ಅಲ್ಲಿರುವ ಒಬ್ಬ ದಂಡನಾಯಕ ಶಿಕ್ಷೆ ಕೊಟ್ಟರೆ ಅಲ್ಲಿಗೆ ಆ ಕೇಸು ಮುಗಿದು ಹೋಗುತ್ತದೆ. ಆದರೆ ಇಲ್ಲಿ ಯಾವನಾದರೂ ತಪ್ಪು ಮಾಡಿದರೆ ಅವನಿಗೆ ಶಿಕ್ಷೆ ಕೊಟ್ಟರೆ, ಅವನನ್ನು ಸಸ್ಪೆಂಡ್ ಮಾಡಿದರೆ ಕಾನ್ಸ್ಟಿಟ್ಯೂಷನ್‌ನ ನೆರವು ತೆಗೆದುಕೊಂಡು ಕೋರ್ಟಿಗೆ ಹೋಗುತ್ತಾರೆ.

ಶ್ರೀ ಸಿ. ಬೈರೇಗೌಡ:—ಹಾಗಾದರೆ ಆ ಕಾನ್ಸ್ಟಿಟ್ಯೂಷನ್ನೆಲ್ಲಾ ಕಿತ್ತು ಬೆಂಕಿಗೆ ಹಾಕಬಿಡಿ. ಎಲ್ಲರೂ ಸುಮ್ಮನಿದ್ದಾರೆ ಎಂದು ಅವರನ್ನೆಲ್ಲಾ ಹೊಡೆದು ಹಾಕುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅಭಿಮನ್ಯು ಸಾವಿರಾರು ಜನರನ್ನು ಹೊಡೆದ ಹಾಗೆ ಇಲ್ಲಿ ಎಲ್ಲರನ್ನೂ ಹೊಡೆದು ಹಾಕುವುದಾದರೆ ಜನರು ಸುಮ್ಮನೆ ಇರುತ್ತಾರೆಯೇ ?

ಶ್ರೀ ಟಿ. ಆರ್. ಶಾಮಣ್ಣ—ಹಾಗಾದರೆ ಒಟ್ಟಿನಲ್ಲಿ ತಮ್ಮ ಆಡಳಿತದಲ್ಲಿ ಜನ ಸುಖಿಯಾಗಿದ್ದಾರೆ ಎಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್:—ಜನ ಸುಖಿ ಇದ್ದಾರೋ ಅಲ್ಲವೋ ಅದು ಹೇಗೇ ಇರಲಿ ನೀವು ಸುಖವಾಗಿದ್ದೀರಲ್ಲಾ, ಅಷ್ಟೇ ಸಾಕು. ಯಾವ ಸರ್ಕಾರವೇ ಬರಲಿ, ಹೋಗಲಿ ತಾವು ಸುಖವಾಗಿರುತ್ತೀರಿ, ಜನ ಸ್ವಲ್ಪ ಕಾಲ ಸುಖಿ ಆಗಿದ್ದರೆ ಸ್ವಲ್ಪ ಕಾಲ ಕಷ್ಟವೂ ಇರುತ್ತದೆ. ನಾವು ಬೇರೆ ಬೇರೆ ರಾಜ್ಯಗಳ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ನೋಡಿದರೆ ರಾಜ್ಯದಲ್ಲಿ ಪ್ರೊಡಕ್ಷನ್ ಹೆಚ್ಚಿಸದೇನೇ ಡಿಸ್ಟ್ರಿಬ್ಯೂಷನ್ ಸರಿಯಾಗಿ ಆಗಬೇಕು ಎಂದರೆ ಹೇಗೆ ಬರುತ್ತದೆ ? ನಾಳೆ ದಿವಸ ನೀವು ಬಂದರೂ ಸಹ ಒಬ್ಬೊಬ್ಬರಿಗೆ 10—10 ಸೇರು ಅಕ್ಕಿಯನ್ನು ಕೊಟ್ಟುಬಿಡುತ್ತೇವೆ ಎಂದು ಹೇಳುತ್ತೀರಾ ? ಸುಖಿ ಎಂದರೆ ಏನು ? ಎಂದರೆ ದೇಶದಲ್ಲಿ ಹೆಚ್ಚಿಗೆ ಪ್ರೊಡಕ್ಷನ್ ಆಗಬೇಕು, ಆದುದನ್ನು ವ್ಯವಸ್ಥಿತವಾಗಿ ಸಮರ್ಪಕ

ವಾದ ರೀತಿಯಲ್ಲಿ ಹಂಚಿಕೆ ಆಗಬೇಕು ಎಂದು. ಆ ರೀತಿ ಮಾಡಬೇಕಾದರೆ ಒಂದೆರಡು ವರ್ಷಗಳ ಕಾಲ ಬೇಕಾಗುತ್ತದೆ. ನಾವೇನೂ ಸುಮ್ಮನೆ ಕೂತಿಲ್ಲ. ಈಗ ನಾವು ಶೇಖರಣೆ ಮಾಡಿರತಕ್ಕಂಥ ಧಾನ್ಯವನ್ನು 14 ಸಾವಿರ ಚಿಲ್ಲರೆ ಅಂಗಡಿಗಳಲ್ಲಿ ಹಂಚುತ್ತಾ ಇದ್ದೇವೆ. ಈಗ ತಮಗೆ ಒಂದು ಮಾತು ಹೇಳಬೇಕಾದರೆ ಕಳೆದ ತಿಂಗಳವರೆಗೆ ನಾವು ಒಬ್ಬರಿಗೆ ಒಂದು ಕೆ. ಜಿ. ಯಂತೆ ಅಕ್ಕಿ ಕೊಡುತ್ತಾ ಇದ್ದೆವು ಆದರೆ ಈ ತಿಂಗಳಿನಿಂದ ಒಬ್ಬರಿಗೆ 3 ಕೆ. ಜಿ. ಯಂತೆ ಕೊಡುತ್ತಿದ್ದೇವೆ. ಉದಾಹರಣೆ ಈಗ ಒಂದು ಸಂಸಾರದಲ್ಲಿ 5 ಜನ ಇದ್ದರೆ ಒಬ್ಬೊಬ್ಬರಿಗೆ 3—3 ಕೆ. ಜಿ. ಯಂತೆ ಅಕ್ಕಿ ಕೊಟ್ಟರೆ ಅತನ ಸಂಸಾರಕ್ಕೆ ಒಟ್ಟು 15 ಕೆ. ಜಿ. ಅಕ್ಕಿ ಬರುತ್ತದೆ. ಅದರ ಜೊತೆಗೆ ಒಬ್ಬೊಬ್ಬರಿಗೆ ಒಂದೊಂದು ಕೆ. ಜಿ. ಗೋಧಿ ಸಿಕ್ಕಿದರೆ ಅವರು ಬೇರೆ ಕಡೆ ಹೋಗಿ ಕೇಳಬೇಕಾಗಿಲ್ಲ. ಅದೂ ಅಲ್ಲದೆ ಮಕ್ಕಳಿದ್ದರೆ ಅವರಿಗೆ ಅರ್ಧ ಯೂನಿಟ್ ಪ್ರಕಾರ ಅಂದರೆ ದೊಡ್ಡವರಿಗೆ ಯಾವ ಪ್ರಮಾಣದಲ್ಲಿ ಕೊಡುತ್ತಿದ್ದೇವೋ ಅದರ ಅರ್ಧ ಭಾಗ ಕೊಡುತ್ತಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್ :—ಸ್ವಾಮಿ, 1—2 ತಿಂಗಳಿನಿಂದ ರವೇನೇ ಕೊಟ್ಟಿಲ್ಲಾ.

ಶ್ರೀ ಡಿ. ದೇವರಾಜ ಅರಸ್ :—ಈವೊತ್ತಿನ ದಿವಸ ಕೇಂದ್ರ ಸರ್ಕಾರದಿಂದ ತಂದಿರತಕ್ಕಂಥ 9 ಸಾವಿರ ಟನ್ ಗೋಧಿಯನ್ನು ಹಂಚಿಕೆ ಮಾಡುತ್ತಾ ಇದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಈ ವರ್ಷದಲ್ಲಿ ಸಾಕಷ್ಟು ಗೋಧಿಯನ್ನು ಶೇಖರಣೆ ಮಾಡಲಿಕ್ಕೆ ಸಾಧ್ಯವಾಗಿಲ್ಲಾ. ಇವೆಲ್ಲಾ ತಮಗೆಲ್ಲಾ ಗೊತ್ತಿರುವ ವಿಷಯ. ಯು. ಪಿ. ಯಲ್ಲಿ, ಬಿಹಾರ್‌ನಲ್ಲಿ ಗೋಧಿ ಕಟಾವು ಮಾರ್ಚ್ ತಿಂಗಳಿನಲ್ಲಿ ಬರುತ್ತದೆ. ಆವಾಗ ಜಾಸ್ತಿ ಗೋಧಿ ಸಿಕ್ಕುತ್ತದೆ, ಇದರ ಮಧ್ಯೆ ಎಲ್ಲಿಂದ ಬರಬೇಕು ನೀವೇ ಹೇಳಿ. ಅದು ಬರುವವರೆಗ ಸ್ವಲ್ಪ ತೊಂದರೆ ಇದೆ ಅನ್ನುವುದನ್ನು ನಾನೂ ಸಹ ಒಪ್ಪುತ್ತೇನೆ.

ಇನ್ನು ಆಹಾರದ ನೀತಿಯ ವಿಚಾರದ ಬಗ್ಗೆ ಹೇಳುವುದಾದರೆ ನಾವು ಸಾಧ್ಯವಾದಷ್ಟು ಮಟ್ಟಿಗೂ ಎಷ್ಟೇ ಕಷ್ಟ ಇದ್ದರೂ ಕೂಡ ಇದನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದೇವೆ. ಕಾಯ-ವಾಚ-ಮನಸಾ ದುಡಿದಿದ್ದೇವೆ. ಇದರಲ್ಲಿ ತಕ್ಸೀರು ಮಾಡಿದಂಥ ಜನಗಳನ್ನಾಗಲಿ, ಕಾನೂನನ್ನು ತಪ್ಪಿಸಿಕೊಳ್ಳುವಂಥ ಜನಗಳನ್ನಾಗಲಿ, ಅಕ್ರಮ ದಾಸ್ತಾನನ್ನು ಮಾಡಿರುವವರನ್ನಾಗಲಿ ಹಿಡಿದು, ಶಿಕ್ಷೆ ಮಾಡುತ್ತಿದ್ದೇವೆ. ಯಾರ ದಾಕ್ಷಿಣ್ಯಕ್ಕೂ ಒಳಗಾಗಿ ಬಿಟ್ಟಿಲ್ಲ; ಬಿಡುವುದು ಇಲ್ಲ. ಕೆಲವು ಸ್ನೇಹಿತರು ನೀವು ಹಿಡಿದವರನ್ನೂ ಕೂಡ ಅವರು ಏನೋ ಕೊಟ್ಟು ಬಿಟ್ಟರೆ ಬಿಟ್ಟುಬಿಡುತ್ತಾರೆ ಎನ್ನುವ ಒಂದು ಆಕ್ಷೇಪಣೆ ಮಾಡಿದರು.

(ಶ್ರೀ ಡಿ. ದೇವರಾಜ ಅರಸ್)

ಮತ್ತು ಅವರೇ ಹೀಗೆ ಧಾಳಿ ಮಾಡಿ ಅವರಿಂದ ಪಾರ್ಟಿಫಂಡ್‌ಗೆ ಹಣ ತೆಗೆದುಕೊಳ್ಳುವುದಕ್ಕೆ ಈ ರೀತಿ ಕೆಲಸ ಮಾಡಿದರು ಎನ್ನುವ ಮಾತನ್ನು ವಿರೋಧಪಕ್ಷದವರು ಹೇಳಿದ್ದಾರೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತು ಅರಿಕೆ ಮಾಡಿಕೊಳ್ಳುತ್ತೇನೆ. ವಿರೋಧಪಕ್ಷದವರು ಹೇಳಿರತಕ್ಕಂಥ ಅಪಾದನೆ ಅಂಶಗಳಲ್ಲಿ ನೂರರಲ್ಲಿ ಒಂದು ಅಪಾದನೆಯ ಅಂಶವನ್ನಾದರೂ ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಇಲ್ಲಿಂದ ಹೋಗುತ್ತೇನೆ. ಈ ಸಭೆಯಲ್ಲಿ ಯಾವುದನ್ನು ಮಾತನಾಡಬೇಕಾದರೂ ಜವಾಬ್ದಾರಿಯಿಂದ ಮಾತನಾಡಬೇಕು. ಇದು ಆಹಾರದ ಸಮಸ್ಯೆ. ಈ ವಿಚಾರದಲ್ಲಿ ಲಘುವಾಗಿ ಮಾತನಾಡುವುದು ಸರಿಯಲ್ಲ. ಬರೀ ಬ್ಲಾಕ್ ಮಾರ್ಕೆಟ್‌ನವರಲ್ಲದೇ ಹೋರ್ಡ್ ನೋಡಿರುವವರನ್ನು ಕೂಡಾ ಎಲ್ಲರನ್ನೂ ಹಿಡಿದಿದ್ದೇವೆ ಇಟ್ ಈಸ್ ವೆರಿ ಡಿಫಿಕಲ್ಟ್ ಜಾಬ್. ಈ ಅಕ್ರಮಗಳಿಂದ ಅವರನ್ನು ಹಿಡಿದಿದ್ದರೆ ಅವರನ್ನು ಏತಕ್ಕೆ ಹಿಡಿದಿದ್ದೀರಿ ಎಂದು ಅವನ ಪರ ವಕಾಲತ್ತು ವಹಿಸಿ ಹಿಡಿದವರನ್ನು ಬಿಡಿ ಎಂದು ಹೇಳುವ ಜನರೇ ಜಾಸ್ತಿ, ಅಂಥವರನ್ನು ಹಿಡಿಯಿರಿ ಎಂದು ಹೇಳುವವರಿಲ್ಲಾ. ಈ ರೀತಿ ಇದ್ದರೆ ಈ ಆಹಾರದ ನೀತಿ ಏನಾಗುತ್ತದೆ ನೀವೇ ಹೇಳಿ ?

ಶ್ರೀ ಹೆಚ್ ಡಿ. ದೇವೇಗೌಡ: ಸ್ವಾಮಿ, ಈಗ ತಾವು ಯಾರನ್ನು ಹಿಡಿದಿದ್ದೀರಾ ಆ ಹಿಡಿದವರನ್ನು ಬಿಡಿ ಎಂದು ಹೇಳುವುದಕ್ಕೆ ಈ ಕಡೆ ಕೂತಿರುವ ಯಾವ ಸದಸ್ಯರೇ ಆಗಲಿ ನಿಮ್ಮ ಕಡೆಗೆ ಬಂದಿದ್ದರು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ಪುಟ್ಟಸ್ವಾಮಯ್ಯ : ಹಿಡಿದವರಿಂದ ತಮ್ಮ ಪಾರ್ಟಿ ಫಂಡ್‌ಗೆ ದುಡ್ಡು ಬಂತು ಎನ್ನುವ ವರ್ತಮಾನ ಇದೆ.

ಶ್ರೀ ಡಿ. ದೇವರಾಜ ಅರಸ್ : ಈ ವಿಚಾರವನ್ನು ನಾನು ಮೊದಲೇ ಹೇಳಿದೆ. ಈ ರೀತಿ ಹೇಳುತ್ತಾರೆ ಎಂದು. ಆಗಲಿ. ವರ್ತಮಾನ ಇದೆ ಎಂದು ಹೇಳಿ ಎಸ್ಕೇಪ್ ಆಗುವುದು ಬೇಡ. ಅದನ್ನು ಸಾಬೀತು ಮಾಡುವುದಕ್ಕೆ ನೀವು ತಯಾರಾಗಿರಬೇಕು. ಯಾರೇ ಆಗಲಿ ಈ ಸಭೆಯಲ್ಲಿ ಬಂದು ಮಾತನಾಡಬೇಕಾದರೆ ಜವಾಬ್ದಾರಿ ರಹಿತವಾದಂಥ ಮಾತನ್ನು ಆಡಿದರೆ ಅದು ಪ್ರಿವಿಲೇಜ್ ಮೋಷನ್‌ಗೆ ಒಳಪಡಬೇಕಾಗಿ ಬರುತ್ತದೆ. ಇಲ್ಲವೇ ಅದು ಸಭೆಯ ಮುಖಾಂತರ ತೀರ್ಮಾನವಾಗಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ: ಸ್ವಾಮಿ, ಈ ಸದನದಲ್ಲಿ ತಮ್ಮ ಭಾಷಣವನ್ನು ಬಹಳ ಉತ್ಸುಕತೆಯಿಂದ ಕೇಳಬೇಕೆಂದು ಓಡಿ ಬಂದೆ. ಈವಾಗ ಕಮಿಟಿ

ರೂಂ ನಲ್ಲಿ ಸೆಂಟ್ರಲ್ ಆಡಿಟರ್ ಜನರಲ್ ಅವರ ಮೀಟಿಂಗ್ ಇತ್ತು, ಅದು ಮುಗಿಸಿಕೊಂಡು ನಿಮ್ಮ ಭಾಷಣವನ್ನು ಕೇಳುವುದಕ್ಕೆ ಬಂದೆ. ತಾವು ಏನು ಒಂದು ಅಪಾದನೆ ಮಾತನ್ನು ಈಗ ಆಡಿದ್ದೀರಿ, "ವಿರೋಧಪಕ್ಷದವರು ಹೇಳಿರ ತಕ್ಕಂಥ ಆಪಾದನೆ ಅಂಶಗಳಲ್ಲಿ ನೂರರಲ್ಲಿ ಒಂದು ಅಪಾದನೆಯು ಅಂಶವನ್ನಾದರೂ ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಟ್ಟು ಇಲ್ಲಿಂದ ಹೋಗುತ್ತೇನೆ" ಎಂದು ಏನು ಹೇಳಿದ್ದೀರಿ ಆ ಬಗ್ಗೆ ಮುಂದೆ ಡಿಸ್ಕಷನ್ ಬಂದಾಗ ಮಾತನಾಡೋಣ. ಈಗ ನನ್ನ ಪ್ರಶ್ನೆ ಏನೆಂದರೆ ಈ ಕಡೆಯಲ್ಲಿ ಯಾವ ಪಕ್ಷದವರೇ ಕೂತಿರಲಿ, ಅವರ ಪರವಾಗಿ ನಾನು ಕೇಳುತ್ತಿದ್ದೇನೆ. ಯಾವ ಸದಸ್ಯರು ನಿಮ್ಮಲ್ಲಿಗೆ ಬಂದು ಅಕ್ರಮ ದಾಸ್ತಾನು ಅಕ್ರಮ ವ್ಯವಹಾರ ಮಾಡುವವರ ಬಗ್ಗೆ ಶಿಕ್ಷೆ ಕೊಡಬೇಡಿ, ಹಿಡಿದವ ರನ್ನು ಬಿಡಿ ಎಂದು ಬಂದಿದ್ದರು ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಡಿ. ದೇವರಾಜ ಅರಸ್ : ಆ ಮಾತು ಇರಲಿ ಒಟ್ಟಿನಲ್ಲಿ ಈ ಅಪಾ ದನೆಗಳನ್ನು ಲಘುವಾಗಿ ಮಾತನಾಡುವುದನ್ನು ಬಿಡಬೇಕು ಎಂದು ನನ್ನ ಪ್ರಾರ್ಥನೆ.

ಶ್ರೀ ಹೆಚ್. ಡಿ. ದೇವೇಗೌಡ : ಹಾಗೆಯೇ ಆಗಲಿ. ಆದರೆ ಯಾವ ಸದಸ್ಯನೂ ಬೇಜವಾಬ್ದಾರಿಯಿಂದ ಮಾತನಾಡುವುದಿಲ್ಲ. ಹಾಗೆ ಅವರೇ ನಾದರೂ ಜವಾಬ್ದಾರಿ ರಹಿತವಾದಂಥ ಮಾತನ್ನಾಡಿದರೆ ಅವರು ಈ ಸಭೆಯಲ್ಲಿ ಕೂತುಕೊಳ್ಳುವುದಕ್ಕೆ ಲಾಯಕ್ ಇಲ್ಲ ಎಂದು ನಾನು ಕೂಡ ಹೇಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ : ಇನ್ನು ಈ ಆಹಾರದ ನೀತಿಯಲ್ಲಿ ಒಂದು ಮಾತು ಹೇಳುವುದಾದರೆ ಇದರಲ್ಲಿ ನಾವು ವಿಫಲರಾಗಿಲ್ಲ. ಎಷ್ಟೇ ಕಷ್ಟ ಇದ್ದರೂ ಕೂಡ ಇದನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ.

*Madam Speaker in the chair*

ಶ್ರೀ ಹೆಚ್. ಡಿ. ದೇವೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳುತ್ತಾರೆ. ಈ ವರ್ಷ ನಮ್ಮ ಕರ್ಣಾಟಕ ರಾಜ್ಯದಲ್ಲಿ 61 ಲಕ್ಷ ಟನ್ ಆಹಾರ ಉತ್ಪಾದನೆಯಾಗಿದೆ ಎಂದು. ಕೇಂದ್ರದ ಅಹಾರ ಮಂತ್ರಿಗಳು ಹೇಳುತ್ತಾರೆ ಇಡೀ ದೇಶದಲ್ಲಿ ಉತ್ಪನ್ನವಾಗಿರತಕ್ಕ ಆಹಾರದ ಪ್ರಮಾಣ 110ರಿಂದ 115 ಲಕ್ಷ ಟನ್‌ಗಳು ಎಂದು. ಆ ಮೋಹನ್‌ಧಾರಿಯೂ ಅವರೂ ಕೂಡ ದೇಶದಲ್ಲಿ ಈ ದಿವಸ ಈ ಆಹಾರದ ಬಗ್ಗೆ ಉಂಟಾಗಿರತಕ್ಕ ಗೊಂದಲಕ್ಕೆ ಕಾರಣ ಇಂದು ಸರ್ಕಾರ ನಡೆಸುತ್ತಿರುವ ಡಿಸ್ಟ್ರಿಬ್ಯೂಷನ್ನಿನಲ್ಲಿರತಕ್ಕ ದೋಷ ಎನ್ನುತ್ತಿದ್ದಾರೆ.

(ಶ್ರೀ ಎಚ್. ಡಿ. ದೇವೇಗೌಡ)

ಹಾಲಿ ದೇಶದಲ್ಲಿರತಕ್ಕ ಅಹಾರದಲ್ಲೇ ಸರಿಯಾಗಿ ವಿತರಣೆ ನಡೆಸಿದರೆ ದೇಶದಲ್ಲಿ ರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಒಂದು ವರ್ಷಕ್ಕೆ 2 ಕ್ವಿಂಟಾಲನಂತೆ ಧಾನ್ಯ ಹಂಚ ಬಹುದೆಂದು ಹೇಳುತ್ತಿದ್ದಾರೆ. ಆದುದರಿಂದ ಇಂದಿನದು ಕೃತಕ ಅಭಾವವೇ ಅಥವಾ ಹೇಗೆ ಎಂಬುದನ್ನು ದಯಮಾಡಿ ವಿವರಣೆ ಕೊಡಬೇಕೆಂದು ಕೇಳುತ್ತೇನೆ.

5-30 P. M.

ಶ್ರೀ ಡಿ. ದೇವರಾಜ ಅರಸ್: ನಮ್ಮ ದೇಶದಲ್ಲಿ ಈ ಕಾಂಗ್ರೆಸ್ ಇಬ್ಭಾಗವಾದ ನಂತರ ಆಳುವ ಕಾಂಗ್ರೆಸ್ ಈ ಧಾನ್ಯಗಳ ಹೋಲ್‌ಸೇಲ್ ಟ್ರೇಡನ್ನು ತೆಗೆದುಕೊಳ್ಳಬೇಕೆಂದು 1973ರಲ್ಲಿ ಪ್ರಯತ್ನ ಮಾಡಿದ್ದು ತಮಗೆಲ್ಲರಿಗೂ ಗೊತ್ತಿದೆ. ಯಾವಾಗ ಸರ್ಕಾರದವರು ಈ ಒಂದು ಘೋಷಣೆಯನ್ನು ಹೊರ ಡಿಸಿದರೋ ಆ ಕೂಡಲೆ ದೇಶಾದ್ಯಂತವೂ ಇರತಕ್ಕ ಈ ಸಗಟು ವ್ಯಾಪಾರಿಗಳು ಮತ್ತು ಅವರ ಏಜಂಟರುಗಳೂ—ಅವರೇನೂ ಕಡಮೆ ಪ್ರಮಾಣದಲ್ಲಿಲ್ಲ—ಅವರು ದೇಶದಲ್ಲಿ ಸುಮಾರು 5 ಮಿಲಿಯನ್ ಜನರಿದ್ದಾರೆ, ಇವರೆಲ್ಲಾ ಹಣವುಳ್ಳ ಜನರು ಇವರು ನಮ್ಮ ಸಗಟು ವ್ಯಾಪಾರವನ್ನು ಧಮನ ಮಾಡಬೇಕೆಂದು ಎಲ್ಲರೂ ಒಗ್ಗಟ್ಟಾಗಿರುತ್ತಾರೆ. ನಾವು ಈ ಜನರನ್ನು ಈ ದಿವಸ ಹಳ್ಳಿಯಿಂದ ಡೆಲ್ಲಿಯವರೆಗೂ ಎದುರಿಸಬೇಕಾಗಿದೆ. ಇವರಲ್ಲಿ ಲಕ್ಷೋಪಲಕ್ಷ್ಮಿಗಟ್ಟಲೆ ಹಣ ಅಂದರೆ ಕಪ್ಪು ಹಣ ಇದೆ. ಇವರು ವ್ಯಾಪಾರವನ್ನು ಕೆಡಿಸುವುದಕ್ಕೆ ಮಾರಾಟ ಮಾಡತಕ್ಕ ಜನರಿಗೆ ಯಾವ ಬೆಲೆಯನ್ನು ಬೇಕಾದರೂ ಕೊಡುತ್ತಿದ್ದಾರೆ ಬೆಲೆಗಳನ್ನೆಲ್ಲಾ ಇವರು ಎದ್ವಾತದ್ವಾ ಏರಿಸಿದ್ದಾರೆ ಹಿಂದೆ ಸರ್ಕಾರ ಗುಜರಾತಿನಲ್ಲಿ ಗೋಧಿ ಕ್ರಯ ಮಾಡತಕ್ಕ ಕಾಲದಲ್ಲಿ ಅಂದರೆ 1969-1970 ಮತ್ತು 1971ರಲ್ಲಿ ಗೋಧಿ ಬೆಲೆಯೆಲ್ಲಾ ಕ್ವಿಂಟಾಲಿಗೆ 72-73ಕ್ಕೆ ಜಾಸ್ತಿ ಇರಲಿಲ್ಲ. ನಾವು ಬೇಡಾ ಎಂದರೂ ಜನ ಪಂಜಾಬಿನ ಕಡೆ ಯಿಂದ ಗೋಧಿಯನ್ನು ತಂದು ಮಾರುಕಟ್ಟೆಯಲ್ಲಿ ಕಡಮೆ ಬೆಲೆಗೆ ಡಂಪ್ ಮಾಡು ತ್ತಿದ್ದರು. ಆದರೆ ಕಡೆಗೆ ಆದುದೇನು? ಆದುದರಿಂದ ಈ ಆಹಾರ ಸಮಸ್ಯೆ ಯನ್ನು ಎದುರಿಸತಕ್ಕ ವಿಚಾರದಲ್ಲಿ ಉಭಯ ಪಕ್ಷಗಳೂ ಒಟ್ಟಾಗಿ ಕೆಲಸ ಮಾಡ ಬೇಕು. ಇದು ಇಡೀ ದೇಶಕ್ಕೆ ಅನ್ವಯಿಸತಕ್ಕ ಪ್ರಶ್ನೆ. ಇದರಲ್ಲಿ ಆ ಪಕ್ಷ ಈ ಪಕ್ಷ ಎಂಬ ಬೇಧವಿರಬಾರದು. ಇದನ್ನು ಯಶಸ್ವಿಗೊಳಿಸುವುದಕ್ಕೆ ಸರ್ವರೂ ಪ್ರಯತ್ನ ಮಾಡಬೇಕಾಗಿದೆ. ಬ್ಲಾಕ್ ಮಾರ್ಕೆಟಿಯರ್ಸನ್ನು ದಮನ ಮಾಡ ಬೇಕಾದರೆ ನಮಗೆ ಈ ಎಲ್ಲ ಪಕ್ಷಗಳ ಸಹಾಯ ಸೌಹಾರ್ದ ಅತ್ಯಗತ್ಯ. ಈ ವಿಚಾರದಲ್ಲಿ ನಾವೆಲ್ಲರೂ ಒಂದಾಗಲೇಬೇಕು. ಆದರೆ ನಾವೂ ಮತ್ತು ನೀವೂ ಚುನಾವಣೆಗಳಲ್ಲಿ ಬೇಕಾದರೆ ಹೋರಾಟ ಮಾಡೋಣ. ಆದರೆ ಇಲ್ಲಿ ಹೋರಾಟ ಸಲ್ಲದು. ಇಲ್ಲಿ ಹೀಗೆ ವಿರೋಧ ಪಕ್ಷಗಳು ಪ್ರತಿಯೊಂದು ವಿಚಾರದಲ್ಲೂ ಆಡಳಿತ

ಪಕ್ಷವನ್ನು ಟೀಕೆ ಮಾಡುತ್ತ ಕುಳಿತರೆ ಇಲ್ಲಿ ಯಾವ ಪಕ್ಷವೂ ಆಡಳಿತ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ ಅಲ್ಲಿ ಧಾನ್ಯಗಳ ಉತ್ಪಾದನೆ ಜಾಸ್ತಿಯಾಗಿದೆ ಎಂದು; ಆದರೆ ಅದೇ ಕಾಲದಲ್ಲಿ ಏಕೆ ಈ ಬೆಲೆಗಳೂ ಏರುತ್ತ ಹೋಗುತ್ತಿವೆ?

ಶ್ರೀ ಡಿ. ದೇವರಾಜ ಅರಸ್ : ದೇಶದಲ್ಲಿ ಪ್ಯಾರಲಲ್ ಎಕಾನಮಿ ನಡೆಯುತ್ತಿದೆ. ಇದನ್ನೆಲ್ಲ ಒಂದು ರಾತ್ರಿಯಲ್ಲಿ ಸರಿಪಡಿಸುವುದಕ್ಕಾಗುವುದಿಲ್ಲ. ಕ್ರಾಂತಿ ಮುಗಿದು ಶಾಂತಿ ಬರಬೇಕಾದರೆ ಅದಕ್ಕೂ ಕಾಲ ಬೇಕು.

ಶ್ರೀ ಎಸ್. ಬಂಗಾರಪ್ಪ : ಜಪಾನ್ ದೇಶದಲ್ಲಿ ಏಕೆ ಅಷ್ಟು ಬೇಗ ಅದು ಸ್ಥಿಮಿತಕ್ಕೆ ಬಂತು?

ಶ್ರೀ ಡಿ. ದೇವರಾಜ ಅರಸ್ : ಅಲ್ಲಿ ಪ್ರತಿಯೊಬ್ಬರೂ ಕೆಲಸ ಮಾಡುತ್ತಾರೆ. ಅದಕ್ಕಾಗಿ ಅಲ್ಲಿ ಬೇಗ ಅನುಕೂಲಗಳಾದವು. ಆದರೆ ನಮ್ಮ ಆಹಾರದ ನೀತಿಯಲ್ಲಿ ಇಲ್ಲಿ ನಾವು ಒಬ್ಬರನ್ನೊಬ್ಬರು ವಿನಾ ಕಾರಣ ಟೀಕೆ ಮಾಡುವುದು ಬೇಡ ಎಂದು ಹೇಳುತ್ತೇನೆ. ಅಲ್ಲದೆ ದೇಶದಲ್ಲಿ ಈ ವಿಚಾರದಲ್ಲಿ ದಂಗೆಗಳನ್ನೆಬ್ಬಿಸುವುದು ಅಲ್ಲವೆಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ: ನಮಗೆ ಇಲ್ಲಿ ವಿನಾ ಕಾರಣ ಟೀಕೆ ಮಾಡಬೇಕೆಂಬ ವ್ಯಾಮೋಹ ಯಾರಿಗೂ ಇರುವುದಿಲ್ಲ. ಈ ಅಕ್ರಮ ಹೋಲ್ಡರ್ಸ್ ಯಾರಿದ್ದಾರೆ ಅವರನ್ನು ಹಿಡಿದು ಗಲ್ಲಿಗೆ ಹಾಕತಕ್ಕ ಬಗ್ಗೆ ಸರ್ಕಾರದವರು ಯಾವ ಲೆಜಿಸ್ಲೇಷನ್ ತಂದರೂ ಅದಕ್ಕೆ ನಮ್ಮ ಪಕ್ಷದ ಕಬೂಲ್ ಇದೆ. ನಮ್ಮ ಪಕ್ಷ ಈ ವಿಚಾರದಲ್ಲಿ ಸರ್ಕಾರಕ್ಕೆ ಎಲ್ಲ ಕೋಆಪರೇಷನ್ ಕೊಡಲು ಸಿದ್ಧ. ಆದರೆ ನಾನು ಇನ್ನೂ ಈ ಫುಡ್ ಪಾಲಿಸಿಯ ಬಗ್ಗೆ ಮಾತನಾಡಲಿಲ್ಲ. ಆದರೆ ನನಗೆ ಇಲ್ಲಿ ಬಂದಿರತಕ್ಕ ಒಂದು ಸಂದೇಹ ಏನೆಂದರೆ ಒಂದೇ ರಾಜ್ಯದಲ್ಲಿ ಒಂದು ಕಡೆ ಭತ್ತಕ್ಕೆ 100–110 ರೂಪಾಯಿಗಳಿದ್ದರೆ ಇನ್ನೊಂದು ಸ್ಥಳದಲ್ಲಿ 200 ಕ್ಕೆ ಮುಟ್ಟಿದೆ. ಹಾಗೇ ಜೋಳ ಕೂಡ ಕ್ವಿಂಟಾಲಿಗೆ ಒಂದು ಕಡೆ 80 ರೂಪಾಯಿಗಳಿದ್ದರೆ ಇನ್ನೊಂದು ಕಡೆ 120 ರೂಪಾಯಿಗಳಿಗೇರಿದೆ. ಇದಕ್ಕೇನು ಕಾರಣ? ಇನ್ನು ರಾಜ್ಯದಿಂದ ಆಹಾರ ಹೊರಗೆ ಹೋಗದಂತೆ ಗಡಿಗಳಲ್ಲಿ ಎಸ್. ಪಿ. ಗಳನ್ನು ಇಲ್ಲವೇ ಡಿ. ಐ. ಜಿ. ಗಳನ್ನು ಬೇಕಾದರೂ ಇಡಿ ನಮ್ಮ ಅಭ್ಯಂತರವಿಲ್ಲ. ಆದರೆ ಈ ಅಂತರ್ಜಿಲ್ಲಾ ನಿರ್ಬಂಧವನ್ನು ಏಕೆ ತೆಗೆಯಬಾರದು?

ಶ್ರೀ ಡಿ. ದೇವರಾಜ ಅರಸ್ : — ನನಗೆ ಗೊತ್ತಿರುವ ಮಟ್ಟಿಗೆ ಈ ಅಂತರ್ಜಿಲ್ಲಾ ನಿರ್ಬಂಧವನ್ನು ತೆಗೆದರೆ ನಮಗೆ ಅದರಿಂದ ಮುಂದೆ ಬಹಳ ತೊಂದರೆಯಾಗುತ್ತವೆ, ನಮ್ಮಲ್ಲಿರತಕ್ಕ ಅಷ್ಟಿಷ್ಟು ಧಾನ್ಯಗಳೂ ಹೊರಗಡೆಗೆ ಹೋಗುವುದಕ್ಕೆ ಅವಕಾಶವಾಗುವುದೆಂಬುದು ನನ್ನ ಭಾವನೆ. ಹಾಗೊಂದುವೇಳೆ ಈ ಅಂತರ್ಜಿಲ್ಲಾ ನಿರ್ಬಂಧವನ್ನು ತೆಗೆದು ಹಾಕಿದರೆ ಅದರಿಂದ ರಾಜ್ಯಕ್ಕೇನೂ ಹಾನಿಯಿಲ್ಲ, ತೊಂದರೆಯಾಗುವುದಿಲ್ಲ ಎಂಬುದಾಗಿ ಈ ಸದನದಲ್ಲಿ ಯಾರಾದರೂ ಸರಿ ಒಂದು ನಿರ್ಣಯವನ್ನು ತಂದು ಪಾಸ್‌ಮಾಡಿ ಆಗ ಅದರ ಸಂಪೂರ್ಣ ಹೊಣೆ ಇಲ್ಲಿರತಕ್ಕ ಎಲ್ಲ ಸದಸ್ಯರ ಮೇಲೂ ಇರುತ್ತದೆ. ಆಗ ಅದನ್ನು ರದ್ದು ಮಾಡ ಬಹುದು. ಆಗ ಇದರ ಜವಾಬ್ದಾರಿ ಈ ಹೌಸಿನ ಮೇಲೆ ಇರುತ್ತದೆ. ಹಾಗೆ ಜಿಲ್ಲೆಗಳಲ್ಲಿ ಅಂದರೆ ಮೈಸೂರು ಮತ್ತು ಮಂಡ್ಯಾ ಜಿಲ್ಲೆಗಳು ಸರಪ್ಲಸ್ ಏರಿಯಾ ದಲ್ಲಿ ಬರುತ್ತವೆ. ಆದಾಗ್ಯೂ ಮೊನ್ನೆ ಅಲ್ಲಿ ಏನಾಯಿತು? ಆಹಾರ ಇದ್ದಿದ್ದರೆ ಅಲ್ಲಿ ಅಷ್ಟು ಹಾಹಾಕಾರವೇಕಾಗುತ್ತಿತ್ತು? ಆಹಾರದ ಬಗ್ಗೆ ಕೊರತೆ ಇರತಕ್ಕ ಜಿಲ್ಲೆಗಳನ್ನು ಅಂದರೆ-ತುಮಕೂರು, ಕೋಲಾರ, ಚಿತ್ರದುರ್ಗ ಇಂಥ ಜಿಲ್ಲೆಗಳನ್ನು ಬಿಡೋಣ. ಅದರೆ ಆ ಶಿವಮೊಗ್ಗದಲ್ಲಿ ಏಕೆ ಅಗ್ಗದ ಬೆಲೆಗೆ ಆಹಾರ ಧಾನ್ಯಗಳು ಸಿಗುತ್ತಿಲ್ಲ? ಇದಕ್ಕೆಲ್ಲಾ ಕಾರಣಗಳು ಬಹಳ ಇವೆ. ಹತ್ತಾರು ವರ್ಷಗಳಿಂದ ವರಮಾನ ಕೂಡಿಸಿಕೊಂಡು ಕೆಲವು ರೈತರು ಕೈಲಿ ಹಣ ಇಟ್ಟು ಕೊಂಡಿದ್ದಾರೆ, ಅವರು ವ್ಯಾಪಾರಿಗಳು ಸಹ ಆಗಿದ್ದಾರೆ. ಮಿಲ್ಲಿನ ಮಾಲೀಕರು ಅವರ ಏಜಂಟರು ಸಹ ಆಗಿದ್ದಾರೆ. ಬಡವರು ಎಲ್ಲೂ ಶೇಖರಿಸಿಲ್ಲ. ಅನು ಕೂಲಸ್ಥರು ತಾವು ಬೆಳೆದುದರ ಜೊತೆಗೆ ಇತರರಿಂದ ತೆಗೆದುಕೊಂಡು ದಾಸ್ತಾನು ಮಾಡಿದ್ದಾರೆ. ಮಿಲ್ಲಿನವರನ್ನು ಕೇಳಿದರೆ ಅವರಲ್ಲಿರುವುದು ರೈತರದು ಎಂದು ಹೇಳುತ್ತಾರೆ. ತುಮಕೂರಿನಲ್ಲಿ ಒಂದು ಮಿಲ್ಲಿನವರನ್ನು ಕೇಳಿದಾಗ ಅಲ್ಲಿರುವುದು ರೈತರದು ಎಂದು ಹೇಳಿದರು. ಯಾವ ರೈತರದು ಎಂದು ಒಂದು ಪಟ್ಟಿ ಕೊಡಿ, ಆ ರೈತರಿಗೆ ನಾನು ಹಣ ಕೊಡಿಸುತ್ತೇನೆ, ನಿಮಗೇನೂ ಶಿಕ್ಷೆಯಾಗುವುದಿಲ್ಲ, ಸರ ಕಾರದ ವಶಕ್ಕೆ ಬತ್ತ ತೆಗೆದುಕೊಳ್ಳುತ್ತೇವೆ, ರೈತರಿಗೆ ಹಣ ಕೊಡುತ್ತೇವೆ ಎಂದು ನಾನು ಮಿಲ್ಲಿನವರಿಗೆ ಹೇಳಿದೆ. ಅದಕ್ಕೆ ಅವರು ಇಲ್ಲ, ಹಾಗೆ, ಹೀಗೆ ಎಂದೇನೋ ಹೇಳಿದರು. ಇದು ನಡೆಯುವ ವಿಚಾರ ಒಂದು ಹಳ್ಳಿಯಲ್ಲಿ ನಡೆಯುತ್ತಿಲ್ಲ, ಎಲ್ಲಾ ಕಡೆ ನಡೆಯುತ್ತಿದೆ. ದೇವೇಗೌಡರು ಹಳ್ಳಿಯಿಂದ ಬಂದವರು, ಅವರಿಗೆ ಗೊತ್ತಿದೆ. ಒಂದು ಕಾಲದಲ್ಲಿ ಕೊಳ್ಳುವವರೇ ಇರಲಿಲ್ಲ, ಹಳ್ಳಿಗಳಲ್ಲಿ ಹೆಚ್ಚು ದಾಸ್ತಾನಿಟ್ಟುಕೊಳ್ಳುತ್ತಿರಲಿಲ್ಲ, ಬೆಳೆದವರು ಬೇಕಾದವರಿಗೆ ಸಾಲವಾಗಿ ಧಾನ್ಯ ಕೊಡುತ್ತಿದ್ದರು, ಮಾರುತ್ತಿರಲಿಲ್ಲ, ಒಂದು ವೇಳೆ ಕೊಟ್ಟಿದ್ದು ವಾಪಸು ಬಾರದೆ ಇದ್ದರೆ ಇನ್ನೊಂದು ವರ್ಷ ಬೆಳೆದರೆ ಆಯಿತು ಎಂದು ಹೇಳುತ್ತಿದ್ದರು. ನಾನು ನೋಡಿರುವುದು ಹೇಳುವುದು ಅದೊಂದು ಕಾಲ. ಈ ದಿವಸ ಯಾರು ಕೊಡು ವರು? ಇಂದು ಒಂದು ಸಾವಿರ ಪಲ್ಲ ದಾಸ್ತಾನಿಟ್ಟರೆ 50 ಸಾವಿರ ರೂಪಾಯಿ ಕೂತ ಜಾಗದಲ್ಲಿ ಸಂಪಾದನೆ ಮಾಡ ಬಹುದು ಎಂಬ ಭಾವನೆ ಜನರಿಗೆ ಬಂದಿದೆ. 100

ರೂಪಾಯಿ ಇರುವುದು 120 ರೂಪಾಯಿಯಾಗುವುದು, ಹೀಗೆ ಹುಚ್ಚಾಪಟ್ಟೆ ಬೆಲೆ ಏರುತ್ತಿದೆ. ಇದೆಲ್ಲಾ ವಿಚಾರಮಾಡದೆ ಬೆಲೆ ಇಳಿಸಿಲ್ಲ ಎಂದರೆ ಹೇಗೆ? ಇಳಿಸುವುದಕ್ಕಾಗಿಯೇ ಲೆವಿ ತೆಗೆದುಕೊಳ್ಳುತ್ತಿದ್ದೇವೆ, ಇಂಟರ್ ಡಿಸ್ಟ್ರಿಕ್ಟ್ ಮೂವ್ ಮೆಂಟ್ ಮೇಲೆ ನಿರ್ಬಂಧ ಹಾಕಿದ್ದೇವೆ. ಒಂದೂವರೆ ಲಕ್ಷ ಟನ್ ಈಗ ಶೇಖರಿಸಿರಬೇಕು, ಇನ್ನೂ ಶೇಖರಣೆಯಾಗುವುದು. ಯಾವ ಕಾಲದಲ್ಲೂ ಇಷ್ಟನ್ನು ಶೇಖರಿಸಿರಲಿಲ್ಲ; ಒಂದು ಲಕ್ಷ ಟನ್ ಕೂಡ ಶೇಖರಿಸಿರಲಿಲ್ಲ ಏನೇ ಕಷ್ಟವಾದರೂ ಕಡ್ಡಾಯವಾಗಿ ವಸೂಲು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಜನಗಳಿಗೆ ಪಡಿತರ ಕೊಡುತ್ತೇವೆಂದು ಹೇಳಿದ್ದೇವೆ. ಆದುದರಿಂದ ಮಿಲ್ ಮಾಲೀಕರು ಮತ್ತಿತರರಿಂದ ತೆಗೆದುಕೊಳ್ಳಬೇಕಾಗುತ್ತದೆ. ಇಂಟರ್ ಡಿಸ್ಟ್ರಿಕ್ಟ್ ಮೂವ್ ಮೆಂಟ್ ಬ್ಯಾನ್ ಮಾಡಿರುವುದನ್ನು ತೆಗೆದರೆ ಒಳ್ಳೆಯದೋ ಏನೋ ಎಂದು ಕೆಲವರು ಹೇಳಿದರು ಇಲ್ಲಿ ಚರ್ಚೆಮಾಡಿ. ಪಕ್ಕದ ರಾಷ್ಟ್ರದ ಅನುಭವ ಕೇಳಿ. ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇವೆ. ನಿರ್ಬಂಧ ತೆಗೆದರೇನಾಗುವುದೆಂಬುದನ್ನು ವಿಚಾರಮಾಡಿ. ನನಗೇನೂ ಹಟವಿಲ್ಲ, ಹಟಮಾರಿತನ ನನ್ನಲ್ಲಿದೆ ಎಂದು ತಿಳಿಯಬಾರದು. I am not trying to attribute motives. You genuinely hold that view. That is why, I am saying let us not do it. The policy that we have adopted is going shortly to bring us results. I have started distributing rice at the rate of 6 kg. and 7 kg. this month. We have done our to improve the quality. ಕೆಲವು ಅಂಕಿಅಂಶ ಕೊಟ್ಟರೆ ನೀವು ಒಪ್ಪುತ್ತೀರಿ. ಹೋದ ತಿಂಗಳು ಒಂದು ಕೆ. ಜಿ. ಯಂತೆ ಕೊಡುತ್ತಿದಾಗ ಹೆಚ್ಚಾಗಿ ತೆಗೆದುಕೊಳ್ಳಲಿಲ್ಲ, 45-80 ಕೆ. ಜಿ. ಗಳಿಗಿಂತ ಜಾಸ್ತಿಯಾಗಿ ಖರ್ಚಾಗಿರಲಿಲ್ಲ, ಈಗ 80 ಕೆ. ಜಿ. ಖರ್ಚಾಗುತ್ತಿದ್ದ ಕಡೆ ಮೂರು ನಾಲ್ಕು ದಿವಸದಲ್ಲಿ 2-3 ಸಾವಿರ ಕೆ. ಜಿ. ಖರ್ಚಾಗಿದೆ. ಮಿಲ್ ಮಾಡುವಾಗ ಸರಕಾರದ್ದು ಎಂದು ಸರಿಯಾಗಿ ಪಾಲಿಷ್ ಮಾಡುತ್ತಿರಲಿಲ್ಲ, ಇಳುವರಿ ಜಾಸ್ತಿ ತೋರಿಸಲು ಹಾಗೆ ಮಾಡುತ್ತಿದ್ದರು. ಪಾಲಿಷ್ ಕಡಿಮೆ ಕೊಟ್ಟರೆ ಸಿಪ್ಪೆಯಲ್ಲಿ ಎಣ್ಣೆಯಿರುತ್ತದೆ, ಬೇಗ ಕೆಡುತ್ತವೆ; ವಾಸನೆ ಬರುತ್ತದೆ, ಕಪ್ಪಾಗುತ್ತದೆ. ಆದ್ದರಿಂದ ಕೆಟ್ಟ ಅಕ್ಕಿ ಕೊಡುವವರು ಎಂದು ದೂಷಣೆ ಮಾಡುತ್ತಿದ್ದರು. ಈಗ ಹೆಚ್ಚು ಪಾಲಿಷ್ ಮಾಡಿಸುತ್ತಿದ್ದೇವೆ, ಎಲ್ಲರೂ ಸಂತೋಷದಿಂದ ತೆಗೆದುಕೊಳ್ಳುತ್ತಿದ್ದಾರೆ.

ಇನ್ನು ಇರಿಗೇಷನ್ ವಿಚಾರ. ಇದರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಆದರೆ ಮಾನ್ಯ ಸ್ನೇಹಿತರಾದ ಶ್ರೀ ಬಾಪೂಗೌಡರು ಬಾಂಬೆ ಕರ್ನಾಟಕ ಮುಂತಾದ ಕಡೆ ಸರ್ಕಾರದವರು ಹಣ ಖರ್ಚುಮಾಡಿಲ್ಲ, ನಮ್ಮ ಕೆಲಸ ನಿಲ್ಲಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇನ್ನುಮೇಲಾದರೂ ಮಾಡಿರುವುದನ್ನು ತಿಳಿದುಕೊಂಡು ಹೇಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ :— ಕೃಷ್ಣ ಯೋಜನೆಯ ಕೆಲಸ ಸಾಮಾನ್ಯ ವಾಗಿ 3 ತಿಂಗಳಿಂದ ನಿಂತಿದೆ ಎಂದು ಹೇಳುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್ :— ಅಂಕಿಅಂಶ ನೋಡಿದರೆ ನಿಜಾಂಶ ಗೊತ್ತಾಗುವುದು. ಬಾಕಿಯಾದ್ದು ಏಕೆ? 1966-67 ರಲ್ಲಿ ಕೃಷ್ಣ ಬೇಸಿನ್ನಿನಲ್ಲಿ 575.83 ಲಕ್ಷ ರೂಪಾಯಿ ಖರ್ಚಾಗಿದೆ. ಕಾವೇರಿ ಮತ್ತು ಕೃಷ್ಣ ಬೇಸಿನ್ ಇವೆರಡರ ವಿಚಾರವನ್ನೂ ಒಟ್ಟಿಗೆ ಹೇಳುತ್ತೇನೆ. 1966-67 ರಲ್ಲಿ ಕಾವೇರಿ ಬೇಸಿನ್ನಿನಲ್ಲಿ 81.11 ಲಕ್ಷ ರೂಪಾಯಿ ಖರ್ಚಾಗಿದೆ. 1967-68 ರಲ್ಲಿ ಕೃಷ್ಣ ಬೇಸಿನ್ನಿನಲ್ಲಿ 1030.71 ಲಕ್ಷ ರೂಪಾಯಿ ಮತ್ತು ಕಾವೇರಿ ಬೇಸಿನ್ನಿನಲ್ಲಿ 139.85 ಲಕ್ಷ ರೂಪಾಯಿ ಖರ್ಚಾಗಿದೆ. 1968-69 ರಲ್ಲಿ ಕೃಷ್ಣ ಬೇಸಿನ್ನಿನಲ್ಲಿ 1200.35 ಲಕ್ಷ, ಕಾವೇರಿ ಬೇಸಿನ್ನಿನಲ್ಲಿ 248.04 ಲಕ್ಷ ರೂಪಾಯಿ ಖರ್ಚಾಗಿದೆ, 1969-70 ರಲ್ಲ ಕೃಷ್ಣ ಬೇಸಿನ್ನಿನಲ್ಲಿ 1521-43 ಲಕ್ಷ, ಕಾವೇರಿ ಬೇಸಿನ್ನಿನಲ್ಲಿ 487.21 ಲಕ್ಷ ರೂಪಾಯಿ ಖರ್ಚಾಗಿದೆ. 1970-71 ರಲ್ಲಿ 1644.32 ಲಕ್ಷ ಕೃಷ್ಣ ಬೇಸಿನ್ನಿನಲ್ಲಿ, 1043.18 ಲಕ್ಷ ರೂಪಾಯಿ ಕಾವೇರಿ ಬೇಸಿನ್ನಿನಲ್ಲಿ ಖರ್ಚಾಗಿದೆ. ಒಂದು ಸಂದರ್ಭದಲ್ಲಿ 1970-71 ರಲ್ಲಿ, 1969-70 ರಲ್ಲಿ 487 ರಿಂದ ಒಂದು ಸಾವಿರ ಚಿಲ್ಲರೆಗೆ ಹೋಯಿತು. ಆ ವರ್ಷ ಒಂದು ಸಮಿತಿ ಮಾಡಿ ಬಜೆಟ್ಟಿನಲ್ಲಿ 10 ಕೋಟಿ ರೂಪಾಯಿ ಒದಗಿಸಬೇಕೆಂದು ಸೂಚಿಸಲಾಯಿತು. ನಾನು ಆಗ ಪೊಸಿಷನ್‌ನಲ್ಲಿದ್ದೆ. ಆ ವರ್ಷದಿಂದ 1043 ಲಕ್ಷ ರೂಪಾಯಿ ಕಾವೇರಿ ಬೇಸಿನ್ನಿನಲ್ಲಿ ಖರ್ಚಾಗಿದೆ.

ಮತ್ತೆ 1971–72ನೇ ಸಾಲಿಗೆ ಕೃಷ್ಣ ಬೇಸಿನ್‌ನಲ್ಲಿ 1757.87 ಲಕ್ಷ ರೂಪಾಯಿಗಳು, ಕಾವೇರಿ ಬೇಸಿನ್‌ನಲ್ಲಿ 1351 ಲಕ್ಷ ರೂಪಾಯಿಗಳು, 1972–73ನೇ ಸಾಲಿನಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ, ಮಾನ್ಯ ಸ್ನೇಹಿತರು ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಏಕೆಂದರೆ, ಈ ಸರ್ಕಾರ ಒಂದು ನಮ್ಮ ಕಡೆ ಇರುವ ಪ್ರಾಜೆಕ್ಟ್ಸನೆಲ್ಲಾ ಹಿಂದೂಡುತ್ತಿದ್ದಾರೆ, ಅಪ್ಪರ್‌ಕೃಷ್ಣ ತೆಗೆದುಕೊಳ್ಳುವುದಿಲ್ಲ. ಎಂದು ಏನಾದರೂ ಹೇಳಿ ಜನರನ್ನು ಮರುಳು ಮಾಡುತ್ತಿದ್ದಾರೆ, ದಯಮಾಡಿ ಅದನ್ನು ಮಾಡಬೇಡಿ. ಏನೇನೋ ಹೇಳಿಕೊಂಡು ತಿರುಗಾಡುತ್ತಿದ್ದಾರೆ. 1972....73ನೇ ಸಾಲಿಗೆ ಕೃಷ್ಣ ಬೇಸಿನ್‌ನಲ್ಲಿ 1872.89 ಲಕ್ಷ ರೂಪಾಯಿಗಳನ್ನು, ನಮ್ಮ ಕಾವೇರಿ ಬೇಸಿನ್‌ನಲ್ಲಿ 1326.04 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಇದು ಕಡಿಮೆಯೆ? 1973—74ನೇ ಸಾಲಿನಲ್ಲಿ, ಈ ವರ್ಷ, ಕೃಷ್ಣ ಬೇಸಿನ್‌ಗೆ 1932.0 ಚಿಲ್ಲರೆ ಲಕ್ಷ ರೂಪಾಯಿಗಳು, ಕಾವೇರಿ ಬೇಸಿನ್‌ಗೆ 11 64 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದನ್ನು ಮಾನ್ಯ ಬಾಪೂಗೌಡರು ಅರ್ಥಮಾಡಿಕೊಳ್ಳಬೇಕು.

ಶ್ರೀ ಬಾಪೂಗೌಡ ರಾಯಪ್ಪ.—ತಾವು ಏನು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ, ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿ ಇರತಕ್ಕ ಅಚ್ಚುಕಟ್ಟು ಏರಿಯಾ ಎಷ್ಟು, ಕೃಷ್ಣ ಬೇಸಿನ್‌ನಲ್ಲಿ ಇರತಕ್ಕ ಅಚ್ಚುಕಟ್ಟು ಏರಿಯಾ ಎಷ್ಟು ? ತಾವು ಇದರ ರೇಷಿಯೋ ಪ್ರಕಾರ ಲೆಕ್ಕ ಹಾಕಿ ಎನ್ನತಕ್ಕ ಮಾತನ್ನು ಹೇಳಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಬೊಕ್ಕಸದ ದುಡ್ಡು ಎಲ್ಲಾ ಕೊಟ್ಟುಬಿಡಿ ಎಂದು ಕೇಳುತ್ತೀರಾ ? ಕಾವೇರಿಯೂ ನಮ್ಮ ದೇಶದಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಕೊಟ್ಟಂತಹ ವಿವರಣೆಯಿಂದ ನಾನು ಉಪಕೃತನಾಗಿದ್ದೇನೆ. ದಯಮಾಡಿ ತಾವು ಪ್ರಾಜೆಕ್ಟ್ ವೈಸ್ ಬ್ರೇಕ್ ಅಫ್ ಕೊಡಬೇಕು. ಏಕೆಂದರೆ, ಕೃಷ್ಣ ಬೇಸಿನ್ ಕೇವಲ ಗುಲ್ಬರ್ಗ ಮತ್ತು ಬಿಜಾಪುರಕ್ಕೆ ಅಷ್ಟೇ ಆಗುವುದಿಲ್ಲ, ಭದ್ರ ರಿಸರ್ವಾಯರ್‌ಗೂ ಅಷ್ಟೇ ಆಗುತ್ತದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಆದಕ್ಕೆ ನಾವು ಏನೂ ಕೊಟ್ಟಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೃಷ್ಣ ಬೇಸಿನ್‌ನಲ್ಲಿರತಕ್ಕ ಯಾವ ಯಾವ ಪ್ರಾಜೆಕ್ಟ್‌ಗಳಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಕೊಡುತ್ತೇನೆ, ತುಂಗಭದ್ರ ಪ್ರಾಜೆಕ್ಟ್‌ಗೆ ನಾವು ಅಷ್ಟು ಖರ್ಚು ಮಾಡಿಲ್ಲ. It may be not even few crores.

ಶ್ರೀ ಹೆಚ್. ಡಿ. ದೇವೇಗೌಡ.....ಖರ್ಚಾಗಿದೆ, ಖರ್ಚಾಗಿರುವ ವಿಷಯ ಬೇರೆ, ಭಾವನೆ ಏನು ಬರುತ್ತದೆ ಎಂದರೆ, ಈ ಬಗ್ಗೆ ನಿರ್ಲಕ್ಷ ಇದೆಯೆಂದು ಭಾವನೆ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಒಂದು ವೇಳೆ there may be some times truth in it. ಹಾಗೆ ನಿರ್ಲಕ್ಷ್ಯ ಎಂದು ಕಂಡು ಬಂದರೆ, ಇನ್ನೊಂದು ಕಡೆಯವರು ನಮ್ಮನ್ನು ನೆಗ್ಲೆಕ್ಟ್ ಮಾಡಿದ್ದಾರೆಂದು ಹೇಳಬಹುದು.

ಶ್ರೀ ವೈ. ಎಸ್. ಪಾಟೀಲ್.—ನೆಗ್ಲೆಕ್ಟ್ ಮಾಡಿದ್ದೀರಿ, ನಮ್ಮ ರಿಕ್ವೆಸ್ಟ್ ಉಳಿದಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ಉಳಿಸಿದ್ದೇವೆ, ಇಲ್ಲದಿದ್ದರೆ ಹೋದವರ್ಷ ನೀವು ಇಲ್ಲಿಗೆ ಬರುತ್ತಾ ಇರಲಿಲ್ಲ. ದಯಮಾಡಿ ಕೇಳಿ, ನಿಮ್ಮ ರಿಕ್ವೆಸ್ಟ್ ಅನ್ನು ಹತ್ತು ಸಾರಿ ಕೇಳಿದ್ದೇನೆ.

ಶ್ರೀ ಎಸ್. ವೈ. ಪಾಟೀಲ್.—ಸೆಂಟ್ರಲ್ ಗವರ್ನಮೆಂಟ್, ಮತ್ತು ಸ್ಟೇಟ್ ಗವರ್ನಮೆಂಟಿನಲ್ಲಿ ನಿಮ್ಮ ವರ್ಚಸ್ ಇರುತ್ತದೆ, ಆದ್ದರಿಂದ ಈ ಬಗ್ಗೆ ನಿಮ್ಮ ಶಕ್ತಿ ಏನು ಇದೆ ಅದನ್ನು ಮಾಡಿ ತೋರಿಸಿ.

ಶ್ರೀ ಡಿ. ದೇವರಾಜ ಅರಸ್. ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಮತ್ತು ಸರ್ವ ಪ್ರಯತ್ನವನ್ನೂ ಮಾಡಿದ್ದೇವೆ.

ಶ್ರೀ ಎಸ್. ವೈ. ಪಾಟೀಲ್.—ಎಷ್ಟು ಒದಗಿಸಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.....ಎಷ್ಟು ಎಂದು ಕೇಳಿದರೆ, ಮೇಜರ್ ಇರಿಗೇಷನ್‌ಗೆ ಪ್ರಾಜೆಕ್ಟ್‌ಗೆ 250 ಕೋಟಿ ರೂಪಾಯಿಗಳನ್ನು ಅಂದರೆ, ಕಾವೇರಿ ಕೃಷ್ಣ ಎರಡರ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್‌ಗಳಿಗೆ ಒದಗಿಸಿದ್ದೇವೆ.

ಶ್ರೀ ಎಸ್. ವೈ. ಪಾಟೀಲ್.....ಅಪ್ಪರ್ ಕೃಷ್ಣಕ್ಕೆ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಆ ಮೇಲೆ ಮಾತಾನಾಡೋಣ, ಮತ್ತೆ ಇವರು ವೆಲ್ ಇರಿಗೇಷನ್ ಬಗ್ಗೆ ಇವರು ಹೇಳಿದರು, ಅವರು ಹೇಳಿದ್ದನ್ನು ನಾವು ಕೇಳಿದ್ದೇವೆ, ನಾನು ಮತ್ತು ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಧಾರ್ ಅವರು ಇವರ ಜಿಲ್ಲೆಯಲ್ಲಿ ಪ್ರವಾಸ ಹೋದಾಗ್ಗ, ಇವರು ಬಹಳವಾಗಿ ಬಾವಿಗಳನ್ನು ಆಳ ಮಾಡಿಸುವುದಕ್ಕೆ ದುಡ್ಡು ಕೊಡಬೇಕು ಎಂದು ನನ್ನಲ್ಲಿ ಬಹಳ ವಾಗಿ ಕೇಳಿದರು. ಅದರಲ್ಲಿ ಅರ್ಥವಿತ್ತು, ಅಪೆಕ್ಸ್ ಬ್ಯಾಂಕ್‌ನವರು ಹೊಸದಾಗಿ ಬಾವಿಗಳನ್ನು ತೆಗೆಯುವುದಕ್ಕೆ ಮಾತ್ರ ಹಣ ಕೊಡುತ್ತಾರೆ. ಹಳೆಯ ಬಾವಿ ಗಳನ್ನು ಆಳಮಾಡುವುದಕ್ಕೆ ದುಡ್ಡು ಕೊಡಿ ಎಂದು ಕೇಳಿದರು. ನಾನು ಮಂತ್ರಿಗಳಲ್ಲಿ ಇವರಿಗೋಸ್ಕರ ರಿಕ್ವೆಸ್ಟ್ ಮಾಡಿ ಹಳೆಯ ಬಾವಿಗಳನ್ನು ಆಳ ಮಾಡುವುದಕ್ಕೆ ಹಣ ಕೊಡಿ ಎಂದು ಕೇಳಿದೆ. ಅವರು ಕೊಟ್ಟರು.

ಶ್ರೀ ಎಸ್. ವೈ. ಪಾಟೀಲ್.—ಏನು ಮಾಡಬೇಕೋ ಅದನ್ನು ಮಾಡಲಿಲ್ಲ, ನನ್ನ ತಮ್ಮನ ಲಗ್ನ ಮಾಡ್ರಿ ಎಂದರೆ, ನನಗೆ ಲಗ್ನ ಮಾಡುವುದಕ್ಕೆ ಹೊರಟಿರಿ.

ಶ್ರೀ ಡಿ. ದೇವರಾಜ ಅರಸ್.....ಇರಲಿ, ಆಯಿಲ್ ಸೀಡ್ಸ್ ಮತ್ತು ಕಾಟನ್ ವಿಷಯದಲ್ಲಿ ಕಳೆದ ಎರಡು ವರ್ಷಗಳಿಂದ ಬಹಳ ಮಟ್ಟಿಗೆ ಸಾಧನೆ ಮಾಡಿದ್ದೇವೆ. ಒಂದು ವರ್ಷ ಕ್ಷಾಮ ಬಾರದೇಹೋದರೆ, ಕರ್ನಾಟಕ ರಾಜ್ಯದಲ್ಲಿ ಎಣ್ಣೆಯ ಬೀಜಗಳಾಗಲೀ, ಹತ್ತಿ ಉತ್ಪಾದನೆಯಾಗಲೀ, ಬಹಳ ದೊಡ್ಡ ಪ್ರಮಾಣಕ್ಕೆ ಹೋಗುತಿತ್ತು. ಆದರೂ ಕೂಡ 1971—72ನೇ ಇಸವಿಯಲ್ಲಿ ಆಯಿಲ್ ಸೀಡ್ಸ್ 7.7 ಲಕ್ಷ ಟನ್ ಮತ್ತು 1973—74ನೇ ಸಾಲಿನಲ್ಲಿ 9.5 ಲಕ್ಷ ಟನ್ ಉತ್ಪತ್ತಿಯಾಗಿದೆ. ಇದನ್ನು ಸಾಧನೆ ಅಲ್ಲ ಎಂದು ಹೇಳುತ್ತೀರಾ

ಹತ್ತಿ ತೆಗೆದುಕೊಂಡರೆ 5.7 ಲಕ್ಷ ಬೇಲ್ಸ್ ಇದ್ದುದು 7 ಲಕ್ಷ ಬೇಲ್ಸ್‌ಗೆ ಹೋಗಿದೆ. ನಮ್ಮಲ್ಲಿ ಗುಲ್ಬರ್ಗಾ ಮತ್ತು ಬಿಜಾಪುರದ ಕೆಲವು ಭಾಗಗಳಲ್ಲಿ ಈ ವರ್ಷ ಹತ್ತಿ ಬೆಳೆ ಕೆಟ್ಟಿದೆ ನಿಜ. ಅದು ಚೆನ್ನಾಗಿ ಆಗಿದ್ದರೆ.

ಶ್ರೀ ಕಾಗೋಡು ತಿಮ್ಮಪ್ಪ :—ಗದಗ್‌ನಲ್ಲಿ ಏನು ಆಗಿದೆ?

ಶ್ರೀ ಡಿ. ದೇವರಾಜ ಅರಸ್ :—ಇರಿಗೇಷನ್ ಇರುವ ಕಡೆ ಒಂದೊಂದು ಏಕರೆಗೆ 5-6-7 ಸಾವಿರ ರೂಪಾಯಿಗಳವರೆಗೆ ದುಡ್ಡು ತೆಗೆದುಕೊಂಡಿದ್ದಾರೆ. 10 ಸಾವಿರ ರೂಪಾಯಿಗಳವರೆಗೆ ತೆಗೆದುಕೊಂಡಿರುವವರೂ ಇದ್ದಾರೆ. ಕಾಟನ್ ಕ್ರಾಪ್ ಬರಬೇಕಾಗಿತ್ತು—ಅದೇನೋ ಒಂದು ಗಾಳಿ ಬರುತ್ತದೆ ಅದು ಬಂದರೆ ಬರುವುದಿಲ್ಲವೆಂದು ಹೇಳುತ್ತಾರೆ, ಅದರಿಂದ ಬೆಳೆ ಹೋಯಿತು ಇಲ್ಲದೇ ಹೋದರೆ 10 ಲಕ್ಷ ಬೇಲ್ಸ್ ಹತ್ತಿ ಆಗುತ್ತಿತ್ತು.

ವಿದ್ಯುಚ್ಛಕ್ತಿ ತಿಳಿದುಕೊಳ್ಳೋಣ. ವಿದ್ಯುಚ್ಛಕ್ತಿಯಲ್ಲಿ ಏನು ಸ್ವಾಮಿ ನಮ್ಮ ಸರ್ಕಾರ ಏನೂ ಮಾಡಿಲ್ಲವೇ? ದಯಮಾಡಿ ಪುಟ್ಟಸ್ವಾಮಿಯವರು ಕೇಳಬೇಕು.

6-00 P.M.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಹರಿಕಥೆ ಹೇಳುತ್ತಿದ್ದೀರಿ ಹೇಳಿ.

ಶ್ರೀ ಡಿ. ದೇವರಾಜ ಅರಸ್ :—ನಿಮಗೆ ಎಲ್ಲಾ ಹರಿಕಥೆ. ನೀವು ಗೌಡರು ಬೇರೆಯವರ ಚಿಂತೆ ನಿಮಗೆ ಏತಕ್ಕೆ? ಬೇರೆಯವರ ವಿಚಾರ ಮಾತ ನಾಡುವುದನ್ನು ಬಿಟ್ಟಿರಿ. ದೇಶದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿ ಜಾಸ್ತಿಯಾಗಿದೆ, ಪವರನ್ನು ಅದಷ್ಟು ಕೊಡುತ್ತೇವೆಂದು ಹೇಳಿದ್ದೇವೆ ಇದು ಹರಿಕಥೆಯೋ? ಯಾವುದು ಶಿವಕಥೆ? ನಮ್ಮನ್ನು ಬಯ್ಯುತ್ತಿದ್ದರೆ ಅದು ಶಿವಕಥೆಯೋ?

ಶ್ರೀ ಬಿ. ಪುಟ್ಟಸ್ವಾಮಯ್ಯ :—ಸ್ವಾಮಿ ತಾವು ನಮ್ಮ ಸಹೋದ್ಯೋಗಿಗಳ ಧಾರ್ಣದಿಂದ ರಾಜ್ಯದಲ್ಲಿ ಸಾರ್ವಜನಿಕರ ಸ್ವತ್ತು ನಷ್ಟವಾಗಿದೆಂದು ಹೇಳಿದಿರಿ. ನಿಮ್ಮ ಸಹೋದ್ಯೋಗಿಗಳಿಂದ ಕೋಟಿಗಟ್ಟಲೆ ಸಾರ್ವಜನಿಕರ ಸ್ವತ್ತು ನಷ್ಟ ವಾಗಿದೆ.

ಶ್ರೀ ಡಿ. ದೇವರಾಜ್ ಅರಸ್ :—ಕಾಳಿ ನದಿ ಯೋಜನೆಯನ್ನು ತೆಗೆದು ಕೊಂಡರೆ, ಈಗ ನಾವು ಈ ಎರಡು ವರ್ಷಗಳಿಂದ ಸುಮಾರು 30 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ಕೊಟ್ಟಿರು ವುದರಲ್ಲಿ ಎರಡು ವರ್ಷದಿಂದ ಈಚೆಗೆ ಸುಮಾರು 3 ಸಾವಿರ ಹಳ್ಳಿಗಳಿಗೆ ಜಾಸ್ತಿ

(ಶ್ರೀ ಡಿ. ದೇವರಾಜ ಅರಸ್)

ಕೊಡುವುದಕ್ಕೆ ಸಾಧ್ಯವಾಗಿದೆ. ವಿದ್ಯುಚ್ಛಕ್ತಿಗೆ ಸ್ವಲ್ಪ ನೀರಾವರಿ ಅಡಚಣೆಯೊದುದರಿಂದ ಹೆಚ್ಚಿಗೆ ಹಳ್ಳಿಗಳಿಗೆ ಕೊಡಲಿಕ್ಕೆ ಆಗಲಿಲ್ಲ, ಪಂಪ್‌ಸೆಟ್ಟುಗಳಿಗೆ ಒಂದೂವರೆ ಲಕ್ಷ ರೂಪಾಯಿಗಳನ್ನು 1971-72ನೇ ಸಾಲಿನಲ್ಲಿ ಕೊಟ್ಟಿದ್ದುದು ಇವತ್ತು ಒಂದು ಲಕ್ಷ 90 ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದೆ.

ಇನ್ನು ರೋಡ್ಸ್ ತೆಗೆದುಕೊಂಡರೆ, ಹಿಂದೆ ಇದ್ದುದು 76,356 ಕಿಲೋಮೀಟರ್ಸ್ ಇತ್ತು. ಈಗ 80,368 ಕಿಲೋಮೀಟರ್ಸ್ ಆಗಿದೆ. ಈಗ ಎರಡು ವರ್ಷಗಳಲ್ಲಿ ಆಗಿರುವುದನ್ನು ಹೇಳುತ್ತಿದ್ದೇನೆ. ಇದರಲ್ಲಿ ಬರಗಾಲದಲ್ಲಿ ಆಗಿರತಕ್ಕ ಲೆಕ್ಕವಿಲ್ಲ. ಬರಗಾಲದಲ್ಲಿ ಆದಂಥ ರಸ್ತೆಗಳು ಸುಮಾರು 15,751 ಕಿಲೋಮೀಟರ್ಸ್‌ಗಳು. ಗುಲ್ಬರ್ಗಾ ಬಿಜಾಪುರ ಜಿಲ್ಲೆಯಲ್ಲಿ ಓಣಿ ಓಣಿಗೂ ರಸ್ತೆಗಳು ಆಗಿವೆ.

ನಾವು ಇನ್ನು ಯಾವುದೇ ಇಲಾಖೆಯನ್ನು ತೆಗೆದುಕೊಂಡು ನೋಡಿದರೆ ನಾವು ಇಷ್ಟೆಲ್ಲಾ ಕಷ್ಟಗಳು ಇದ್ದರೂ ಅದರಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದ್ದೇವೆ. ಕೇವಲ ಮಾಡಿದ್ದೇವೆಂದು ಮಾತನಾಡಿಬಿಟ್ಟರೆ ಆಯಿತೆ ಎಂದು ತಾವು ಹೇಳಬಹುದು. ತಾವು ಅಂಕಿ ಅಂಶಗಳನ್ನು ತೆಗೆದು ನೋಡಿದರೆ ನಾನು ಹೇಳುತ್ತಿರುವುದು ಗೊತ್ತಾಗುತ್ತದೆ. ಬಡ್ಜೆಟ್ ಬಂದಮೇಲೆ ನೋಡಿ, ಆ ಮೇಲೆ ಹೇಳುವವರಿದ್ದೇವೆ, ಅಂಕಿ ಅಂಶಗಳನ್ನು ನೋಡದೆ ಮಾತನಾಡಿದರೆ ಹೇಗೆ, ದೇವರೇ ನಿಮಗೆ ಒಳ್ಳೆಯ ಬುದ್ಧಿ ಕೊಡಬೇಕೆಂದು ಹೇಳುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಬರಗಾಲದ ಕಾಲದಲ್ಲಿ ಖರ್ಚು ಮಾಡಿದಂಥ ಹಣ ಸಾಯಿಲ್ ಕನ್‌ಸರ್‌ವೇಷನ್ ಒಂದು ಐಟಮ್ ಆಫ್ ವರ್ಕ್ ಸುಮಾರು ಎಂಟುವರೆ ಲಕ್ಷ ಎಕರೆ ಸಾಯಿಲ್ ಕನ್‌ಸರ್‌ವೇಷನ್ ಬರಗಾಲ ಕಾಲದಲ್ಲಿ ಆಗಿರತಕ್ಕದ್ದು ಮೈನರ್ ಇರಿಗೇಷನ್ 612 ವರ್ಕ್ಸ್ ಆಗಿದೆ. ರೋಡ್ಸ್ ಮೈನರ್ ಇರಿಗೇಷನ್ ಮೊದಲಾದ ಒಟ್ಟು 1600 ವರ್ಕ್ಸ್ ಎಲ್ಲವನ್ನೂ ಒಂದೇ ಸಾರ್ತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮುಂದಿನ ಸಾಲಿನ ಬಡ್ಜೆಟ್‌ನಲ್ಲಿ ಎಷ್ಟು ಬರುತ್ತದೆ ಎಂದು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಪ್ಲಾನ್‌ನಲ್ಲಿ ಮೈನರ್ ಇರಿಗೇಷನ್‌ಗೋಸ್ಕರ 5 ನೇ ಪಂಚವಾರ್ಷಿಕ ಯೋಜನೆಯಲ್ಲಿ 45 ಕೋಟಿ ರೂಪಾಯಿ ಒದಗಿಸಿದೆ. ವೆಲ್ ಇರಿಗೇಷನ್ ಒಂದಕ್ಕೆ 120 ಕೋಟಿ ರೂಪಾಯಿ ಯಾಗುತ್ತದೆ. ವೆಲ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಎರಡಕ್ಕೂ ಸೇರಿ ಒಟ್ಟು 170 ಕೋಟಿ ರೂಪಾಯಿ ಒದಗಿಸಿದ್ದೇವೆ.

ಶ್ರೀ ವೈ. ಎಸ್. ಪಾಟೀಲ್ :— ಅದರಲ್ಲಿ ವೆಲ್ಸ್ ಇನ್‌ಕ್ಲೂಡ್ ಆಗುತ್ತದೆಯೆ ?

ಶ್ರೀ ಡಿ. ದೇವರಾಜ್ ಅರಸ್ : -ಅದೂ ಆಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್ ; ಮೈನರ್ ಇರಿಗೇಷನ್ ಸರ್ವೆ ನಡೆಸಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್ : ಮಾಸ್ಟರ್ ಪ್ಲಾನ್ ಮಾಡಬೇಕೆಂದು ಹೇಳುತ್ತೀರಾ ? ಒಂದೂವರೆ ಸಾವಿರ ಬೋರ್ ವೆಲ್ಸ್ ತೆಗೆಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಎಲ್ಲಾ ಆ ಕಡೆಗೆ ಕೆಲಸವಾಗಿರುವುದು.

ಶ್ರೀ ಡಿ. ದೇವರಾಜ್ ಅರಸ್ : ನಿಮ್ಮ ಕಡೆಗೂ ಮಾಡಿಸೋಣ. ಇಷ್ಟೆಲ್ಲಾ ಸಾಧನೆ ಮಾಡಿದ್ದಾಗ್ಯೂ ತಾವು ಸರ್ಕಾರ ಏನೂ ಮಾಡಲಿಲ್ಲ ಆಹಾರದ ನೀತಿಯಲ್ಲಿ ವಿಫಲರಾಗಿದ್ದಾರೆ ಎಂದು ಬೇರೆ ಏನೂ ವಿಚಾರ ಸಿಕ್ಕದೆ ಎಲ್ಲಿ ಹೋದರೂ ಅಹಾರ ನೀತಿಯು ಬಗ್ಗೆ ನಿಂದನೆ ಮಾಡುವುದಾದರೆ ಏಕಾ ಏಕಿ ಯಾವ ದೇಶದಲ್ಲಿಯೂ ಇಲ್ಲದೇ ಇರುವುದನ್ನು ಬೆಳೆದು ತರಿಸುವುದಕ್ಕೆ ಆಗುತ್ತದೆಯೇ ? ಅದಕ್ಕೂ ಕಾಲ ಬೇಕಾಗುತ್ತದೆ. ಸುಮಾರು 12 ಲಕ್ಷ ಚಿಲ್ಲರೆ ಹೆಕ್ಟಾರ್ಸ್ ಟೋಟಲ್ ಏರಿಯಾ ಅಂಡರ್ ಇರಿಗೇಷನ್ ಇರತಕ್ಕದ್ದು, It might have gone up by another Lakh within these two years ಕೆಲವು ಮೇಜರ್ ಪ್ರಾಜೆಕ್ಟ್‌ಗಳಿಗೆ ಸ್ವಲ್ಪ ಹಣ ಕೊಡುತ್ತಾ ಇದ್ದೇವೆ. ಒಂದು ವರ್ಷ ಕಳೆದರೆ ಮತ್ತೆ ಇನ್ನೊಂದು ಲಕ್ಷ ಹೆಕ್ಟಾರ್‌ಗೆ ಹೆಚ್ಚಾಗಿ ಇರಿಗೇಷನ್ ಫೆಸಿಲಟೀಸ್ ಕೊಡುವುದಕ್ಕೆ ಸಾಧ್ಯವಿದೆ. ಕಸಿ ಜಲಾಶಯ ಬರುತ್ತದೆ. ಮುಂದಿನ ವರ್ಷ 1975 ನೇ ಇಸ್ವಿ ಜೂನ್ ಜುಲೈ ನಿಮ್ಮ ಆಶೆ ಏನು ಇದೆ ಹೇಮಾವತಿ ನೀರು ನಿಲ್ಲಿಸಬೇಕು ಎಂದು ಅಲ್ಲಿ ಏಕ ಕಾಲದಲ್ಲಿ ಇರಿಗೇಷನ್ ಆಗುತ್ತದೆ. ಇರಿಗೇಷನ್ ಕೆನಾಲ್ಸ್ ಮಾಡಬೇಕಾದರೆ it requires lot of money ಮುಂದಿನ ವರ್ಷ ಇರಿಗೇಷನ್‌ಗೆ ನೀರು ಕೊಡುವುದಕ್ಕೆ ಆಗಬಹುದು. ಮಲಪ್ರಭಾದಲ್ಲಿ ನೀರು ನಿಂತಿದೆ ಏರಿಯಾ ಡೆವಲಪ್‌ಮೆಂಟ್ ಮಾಡಬೇಕಾಗಿದೆ. ಮುಂದಿನ ವರ್ಷ ಜೂನ್ ಜುಲೈನಲ್ಲಿ ಘಟಪ್ರಭಾದಲ್ಲಿ ಮಿನಿಮಂ 45 ಟಿ.ಎಂ.ಸಿ.ಎಫ್.ಬಿ. ವಾಟರ್ ನಿಲ್ಲುತ್ತದೆ. ದೊಂದದಲ್ಲಿ ಸುಮಾರು 1 ಲಕ್ಷದ 20 ಸಾವಿರ ಎಕರೆಗೆ ಸಪ್ಲೈ ಮಾಡಬಹುದು. ಮುಂಡಿನ ವರ್ಷ ಮಿನಿಮಂ two crops and third crop also we can take in those developed areas. ಹೀಗೆ ಎಲ್ಲಾ ವಿಚಾರದಲ್ಲೂ ಪ್ರಗತಿಯನ್ನು ಸಾಧಿಸಿದ್ದೇವೆ. ಹೆಚ್ಚು ಹಣ ಒದಗಿಸಿದ್ದೇವೆ. ಕೆಲಸ ಕಾರ್ಯಗಳು ನಡೆಯುತಾ ಇದೆ ಆಹಾರದ ವಿಷಮವಾದಲ್ಲೂ ಕೂಡ ಕೆಲಸ ಕಾರ್ಯಗಳು ಕೈಗೂಡುವುದೆಂದು ನನಗೆ ತೋಚುತ್ತದೆ. ಆಗ ಕರ್ನಾಟಕ ರಾಜ್ಯ ಆಹಾರದಲ್ಲಿ ಸ್ವಾವಲಂಬನೆಯನ್ನು ಪಡೆಯುವುದರ ಜೊತೆಗೆ ಹೊರಗಡೆ ಆಹಾರಧಾನ್ಯವನ್ನು ಕೊಡುವುದಕ್ಕೂ ಶಕ್ತವಾಗುತ್ತದೆ. ಎಣ್ಣೆ ಬೀಜಗಳು, ಹತ್ತಿ, ಮುಂತಾದ ಪದಾರ್ಥಗಳನ್ನು ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲರೂ ಟೀಕೆ ಮಾಡುವುದು ಏನೆಂದರೆ ಸರ್ಕಾರ ಇದನ್ನು ಮಾಡಲಿಲ್ಲ. ಅದನ್ನು ಮಾಡಲಿಲ್ಲ ವಿಫಲವಾಗಿದೆ ಎಂದು.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಹಳೇ ಮೈಸೂರಿನಲ್ಲಿರುವ ಕಾಮಗಾರಿಗಳ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್ ;— ಮುಂದೆ ಮಾಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ವಿಧಿನಿಯಮ ಬದ್ಧವಾಗಿ ಮಾಡುವವರ ಕೈಯಲ್ಲಿ ಮಾಡಿಸುತ್ತೀರಾ ? ಒಂದು ಕಣ್ಣಿಗೆ ಸುಣ್ಣ ಹಾಕಬೇಡಿ. ವಿಧಿನಿಯಮ ಬದ್ಧವಾಗಿ ಮಾಡಿಸುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಎಲ್ಲಾ ಕಡೆ ಮಾಡೋಣ. ಅಲ್ಲಿ ಹೆಚ್ಚು ಭೂಮಿ ಒರುವುದಿದೆ. ಬೇಗ ಬೇಗ ಮಾಡೋಣ. ಹಳೇ ಮೈಸೂರು ಹೊಸ ಮೈಸೂರು ಎನ್ನುವುದು ಬಿಟ್ಟು ಬಿಡಿ. ಮಾನ್ಯ ದೇವೇಗೌಡರು ಈ ಮಾತನ್ನು ಒಪ್ಪುತ್ತಾರೆ. ನಮಗೆ ಸ್ವಲ್ಪ ಹೆಚ್ಚಿಗೆ ಹಣ ಖರ್ಚಾಗುತ್ತದೆ. Within one or two years we get some quick results, that is the idea. ಹಳೇ ಮೈಸೂರು ಹೆಚ್ಚು, ಹೊಸ ಮೈಸೂರು ಕಡಿಮೆ ಎನ್ನುವ ಪ್ರಶ್ನೆಯಲ್ಲ. 10ಕೋಟಿ ರೂಪಾಯಿ ಖರ್ಚು ಮಾಡಿದರೆ 25-30 ಸಾವಿರ ಎಕರೆ ತಕ್ಷಣ ಸಾಗುವಳಿಗೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಅಹಾರ ಹೆಚ್ಚು ಬೆಳೆಯಬೇಕು. ಈ ವರ್ಷ ಉತ್ತರ ಭಾಗದಲ್ಲಿ ಮುಂಗಾರಿ, ಹಿಂಗಾರಿ ಜೋಳ ಬಂಪರ್ ಬೆಳೆ ಎಷ್ಟಾಯಿತು ಅಂದರೆ, ಒಂದೊಂದು ಕಡೆ 10 ಅಡಿ, 12 ಅಡಿ, 15 ಅಡಿವರೆಗೂ ಬೆಳೆದು ಬಿಟ್ಟಿದೆ. ಆದರೆ ತೆನೆ ಕಟ್ಟುವ ಕಾಲದಲ್ಲಿ ಸರಿಯಾಗಿ ಕಟ್ಟಲಿಲ್ಲ. ಬೀಜದಲ್ಲಿ ಏನು ವ್ಯತ್ಯಾಸವಿತ್ತೋ, ಮಳೆ ಹೆಚ್ಚಾಗಿ ಹವಾಮಾನದಲ್ಲಿ ಏನು ವ್ಯತ್ಯಾಸವಾಯಿತೊ, ಅಂತೂ ನಾನಾ ಕಾರಣಗಳು ಇರಬಹುದು. ಅಲ್ಲಿ ಬೆಳೆ ಚೆನ್ನಾಗಿ ಆಗಿದ್ದರೆ 3 ವರ್ಷಗಳ ಕಾಲ ಆಹಾರದ ಅಭಾವ ಇರುತ್ತಿರಲಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆ ಬಂತು. ನಮ್ಮ ದುರಾದೃಷ್ಟಕ್ಕೆ ಕೆಲವು ಕಡೆ ಮಳೆ ಹೆಚ್ಚಿಗೆ ಆಯಿತು. ಕೆಲವು ಕಡೆ ಒಂದೆರಡು ಮಳೆ ಬರುವುದರಲ್ಲಿ ಕಡಿಮೆಯಾಯಿತು. ಅಷ್ಟರಲ್ಲಿ ಬಿತ್ತನೆ ಬಿತ್ತುವ ಕಾಲ ಆಗಿಯೋಯಿತು ಬೆಳೆ ಬರಲಿಲ್ಲ. ಆ ಬೆಳೆ ಚೆನ್ನಾಗಿ ಬಂದಿದ್ದರೆ, ಅಕ್ಕಿ, ರಾಗಿ ಬೆಲೆ ಕುಸಿದು ಬೀಳುತ್ತಿತ್ತು. ಅಲ್ಲಿಗೂ ಕೂಡ ಜೋಳ 65-75 ರೂಪಾಯಿ ಇತ್ತು. ಮಾನ್ಯ ದೇವೇಗೌಡರಿಗೆ ಗೊತ್ತಿದೆ. ಮುಂಗಾರಿ ಬೆಳೆ ಆದ ಮೇಲೆ ಹೈಬ್ರಿಡ್ ಜವಾರ್ ಬೆಲೆ ಬಿದ್ದು ಹೋಗುತ್ತದೆ. ಸರ್ಕಾರ ಸಪೋರ್ಟ್ ಪ್ರೈಸ್ ಕೊಡಬೇಕು ಎಂದು ಎಷ್ಟು ಜನ ಕೇಳಿದರು ? ಆಗ ನಾವು ಮಿನಿಮಂ 70 ರೂಪಾಯಿಗೆ ಕಡಿಮೆ ಇಲ್ಲದೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದು ತಮಗೆ ಜ್ಞಾಪಕವಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ :—ಕೆಲವು ವಿಷಯ ನೆನಪು ಇರುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ನಿಮಗೆ ಯಾವುದು ಬೇಕೋ ಅದು ಜ್ಞಾಪಕವಿಟ್ಟುಕೊಂಡಿದ್ದೀರಿ. ಅಧ್ಯಕ್ಷರೇ, ಹೋದವರ್ಷ ಕೊಬ್ಬರಿ ಬೆಲೆ ಇಳಿದು ಹೋಗಿದ್ದರಿಂದ ಆಗ ಆ ವಿಷಯ ಮಾತನಾಡಿದರು. ಈಗ ಕೊಬ್ಬರಿ ಬೆಲೆ ಹೆಚ್ಚಾಗಿದೆ ಅದರ ಬಗ್ಗೆ ಮಾತನಾಡುವುದೇ ಇಲ್ಲ. ಆದುದರಿಂದ ಅವರ ಕೊಬ್ಬರಿಯನ್ನು ಕಿತ್ತುಕೊಳ್ಳಬೇಕಾಗಿ ಬರುತ್ತದೆ.

ಶ್ರೀ ಟಿ. ಎಂ. ಮಂಜುನಾಥ್ :—ನಿಮಗೆ ಕಷ್ಟವಾಗಿದ್ದುದನ್ನು ಹೇಳಿ.

ಶ್ರೀ ಡಿ. ದೇವರಾಜ್ ಅರಸ್ :--ನೀವು ಏನೂ ಕಷ್ಟಪಡದೇ ಸುಮ್ಮನೆ ಹೇಳಿದರೆ ಹೇಗೆ ?

ಶ್ರೀ ಟಿ. ಎಂ. ಮಂಜುನಾಥ್ :- ಬೆಳೆಯೇ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್ :—ದುಡ್ಡು ಎಲ್ಲಾ ಪೆಟ್ಟಿಗೆಗೆ ಬಂದ ಮೇಲೆ ಬೆಳೆ ಏಕೆ ಬೇಕು ? The percentage of irrigation in Tamilnadu is 67.5. In Andhra, it may be somewhere between 50 or 55%. ಅಧ್ಯಕ್ಷರೇ ಇಷ್ಟು ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದೇನೆ. 2 ವರ್ಷಗಳಲ್ಲಿ ನಾವು ಸಾಧನೆ ಮಾಡಿರುವ ಕೆಲಸಗಳನ್ನು ಹೇಳಿದ್ದೇನೆ. ಮುಂದೆ ನಾವು ಮಾಡಬೇಕಾದುದನ್ನು ಹೇಳತಕ್ಕ ಸಮಯ ಬರುತ್ತದೆ. ಆಗ ಅದನ್ನು ಹೇಳುವವನಿದ್ದೇನೆ. ನಮ್ಮ ಮಾನ್ಯ ಸ್ನೇಹಿತರು ರಾಜ್ಯಪಾಲರ ಭಾಷಣದ ಮೇಲೆ ಅನೇಕ ಟೀಕೆಗಳನ್ನು ಮಾಡಿದ್ದಾರೆ ಅದನ್ನು ಭಾಷಣಕ್ಕೆ ಮಾಡಿದರು ಅಷ್ಟೆ. ಇಷ್ಟೆಲ್ಲಾ ತಿಳಿದ ಮೇಲೆ ಮಾನ್ಯ ಸ್ನೇಹಿತರು ನಾವು ತಂದಿರತಕ್ಕ ನಿರ್ಣಯಕ್ಕೆ ಕನ್ವಿನ್ಸ್ ಆಗಿದ್ದಾರೆ ಎಂದು ನನ್ನ ನಂಬಿಕೆ. ಅವರಿಗಿದ್ದ ಅನುಮಾನಗಳನ್ನು ಪರಿಚ್ಛೇದ ಮಾಡಿದ್ದೇನೆ. ದಯಮಾಡಿ ಒಮ್ಮತದಿಂದ ಈ ಠರಾವನ್ನು ಸರ್ವಾನುಮತದಿಂದ ಪಾಸ್ ಮಾಡಿಸೋಣ ಎಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

MADAM SPEAKER : I will now put the amendments to the vote of the House. The question is :

"That the following words shall be added at the end of the motion but regret that there is no mention in the address regarding :

(1) Steps for arresting effectively the gallopping rise in the price of essential commodities which has brought about misery and hardship to the people.

(MADAM SPEAKER)

(2) Fruitful plans to check the growing unemployment of educated as well as uneducated persons in the State.

(3) Effective steps for reducing poverty of the masses in the State.

(4) Effective Steps for increasing production of agricultural and non-agricultural products.

(5) Steps to increase the supply of chemical manure

(6) Steps to supply Kannada Typewriters

(7) Steps not taken to remove the inter-District movement of food-grains and border areas sealed to help consumers to get food-grains at reasonable cost.

The following words shall be added at the end of the motion but regret to note failure of the Government:

(8) in not holding elections to the Taluk Boards and to many Municipalities in the State.

(9) in allowing prohibitive cost of building materials and thereby check the house building activities.

(10) in giving adequate financial assistance through Housing Board and other agencies to promote house building activities.

(11) in allowing corruption in all walks of life

(12) in arresting the manufacture and sale of illicit drinks (like Kallabhatti)

(13) in checking the abnormal rise in the cost of textile goods.

(14) to check adulteration of food-stuffs

(15) to solve the problem of unrest amount the Teachers, Doctors, Students, Labourers and in general, among all sections of the people.

(16) in providing funds for development activities of the State.

(17) to supply adequate medicines to Government Hospitals.

(18) in stopping Grants to the Mahila Seva Samajas in the State.

(19) to give a good and clean and efficient administration in the State.

(The amendment was negatived)

MADAM SPEAKER :—Next amendment standing in the name of Sri B. B. Sayanak. The question is :

"That the following words shall be added at the end of motion but regrets that :

(1) No mention is made of Karnataka-Maharashtra border dispute which is pending more than 18 years. The Maharashtra-Karnataka border dispute must be solved on the basis of village as the unit, Geographical contiguity, relative majority and wishes of the people.

(2) No mention is made of soaring price. It is very difficult for the common man to live in at the present state affairs.

(3) No steps is taken to eradicate the corruption' neopolism.

(4) The Government has failed to safe-guard the minorities in the state. Their life and property is not safe in Karnataka State.

The amendment was nagatived.

MADAM SPEAKER :--Amendment of Sri N. B. Sirdesai. The question is :

" That the following words shall be added at the end of motion but regret that :

(1) The Governor has failed to make reference of the untold sufferings caused to Marathi people in Belgaum and other areas ; hence his report regarding Law and Order situation is one sided and partial.

(2) The Governor has failed to make reference of the long pending unsolved border problem between Karnataka and Maharashtra and has failed to mention a solution to settle the Border issue by the State Government.

(3) That the Governor has mentioned about the agitation against rising prices and the steps taken to maintain Law and Order position, but has failed to mention the steps Government have taken to maintain the price level in the State.

(4) That the Governor has failed to mention that though the levy demand is fulfilled by the growers excess quantity of paddy is being collected from the growers inspite of their filing stock declaration and that too by using Police force.

(5) The Governor has failed to make special reference of the schemes that would be taken in the Malnad Talukas of the State; during the Fifth Five Year Plan Period.

6) The Governor has failed to make mention of the Major Medium and Minor Irrigation Projects to be taken up in the Malnad Taluks of Border Areas.

7) That the Governor has failed to mention that though the Government have not supplied Fertilisers to the growers; Government are collecting levy of Food grains from them.

8) Though the Governor has said that it is necessary greatly to expand Sugar Production and it is proposed to start ten Sugar Factories during the coming year but has failed to state whether preference will be given to Malnad and Forest covered Taluks where sufficient lands and Irrigation facilities are available.

The Governor has failed to mention that under the plea of paucity of funds and non-availability of Allumi-nium conductors etc., the Karnataka State Electricity Board has not extended the power supply to I. P. sets in Belgaum District.

10) The Governor has not made specific reference to the Industrialisation in Malnad and Forest covered Taluks of the State.

11) The Governor has failed to admit that the Government are showing scant respect to the proposals of water supply schemes and National Rural Water Supply Schemes in the Malnad and Forest covered areas of the Border areas.

12) The Governor has failed to admit that Government have not supplied medicines and paid the salary of S. M. P. Doctors in Belgaum District, for the last over six months under the plea of paucity of funds.

(The amendment was nagatived).

MADAM SPEAKER :—Amendment moved by Sri P.A. Pawashe :

"That the following words shall be added at the end of the motion but regret that :

1) The Governor has failed to make any reference to the long pending border dispute between Maharashtra and Karnataka: The Governor ought to mentioned that this dispute be solved on the basis of Palaskar Formula so that no injustice will be caused to any party.

(MADAM SPEAKER)

2) The Governor has failed to make any reference to the attrocities committed by Police and Kannadigas on the Maharathi speaking people of Belgaum and border area.

3) The Governor has failed to mention why Government is not in a position to check the trend of rising prices of the food-grains even though there is good Khariff harvest and there are better prospects of a satisfactory rabbi crop.

4) The Governor has failed to mention the steps Government has taken to check the rising prices of food-grains and essential commodities and against the Black-marketers.

(5) The Governor has failed to make any reference to the serious problem of Rural and Urban unemployment and a solution to solve the same.

(6) The Governor has failed to mention in short the details of the programme which needs of small and marginal farmers so that their economic conditions are improved.

(7) The Governor has failed to make any reference as to how Government is going to make adequate medical provisions to protect the cattle wealth in the rural area as the existing number of Veterinary dispensaries and other arrangements are not sufficient to meet the needs.

(8) The Governor failed to mention about the serious consideration of problem of Drinking water in the rural area.

(9) The Governor has failed to make any reference to the financial and other difficulties of poor and middle class people who intend to take higher education and to ought to have declared Secondary and Higher Education free to all.

10. The Governor has ignored the problem of rural communications which needs serious consideration and which is one of the major cause of our rural backwardness.

11. The Governor has not made any reference as to what steps Government is going to take to eradicate corruption.

(*The amendment was negatived*)

MADAM SPEAKER: Amendment of Sri N. S. Gurusiddappa. The question is:

"That the following words shall be added at the end of the motion but regret that there is no mention in the address regarding:

1. Steps to supply fertilisers seeds, financial help at the door of the farmers.

2. Steps to electrify all the villages in the State.

3. Steps for rural water supply and sewerage board.

4. Steps to supply adequate food grains to the villages.

5. Steps to solve un-employment in rural areas.

6. Steps to remove collection of levy from the farmers."

*The amendment was negatived*

MADAM SPEAKER: Amendment of Sri B. V. Kakkilaya. The question is:

"That the following words shall be added at the end of the motion but regret that:

(MADAM SPEAKER)

1. there is no mention of the gravity of the situation arising out of spiraling prices of essential commodities and the steps to arrest it.

2. There is no mention of the non-availability of foodgrains at reasonable prices both in the urban and the rural areas and the steps to meet this situation.

3. There is no mention of the failure of the Government to take steps to prevent the managements from escaping from the previous of the beedi and Cigar (conditions of service Act and to implement the Act.

4. There is no mention of the failure of the Government to take steps to provide jobs to those who graduate from the Fisheries and Pharmachtical colleges.

5. There is no mention of the failure of the Government to hold Panchayat and T. D. B. elections in the State which are long over due.

*The amendment was negatived*

MADAM SPEAKER.—Amendment of Sri Konandur Lingappa. The question is:

ಪ್ರಸ್ತಾಪದ ಕೊನೆಯಲ್ಲಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದ್ದು :

"ಆದರೆ—

(1) ನಿರುದ್ಯೋಗ ನಿವಾರಣೆ ವಿಫಲವಾದದ್ದು

(2) ಗ್ರಾಮಾಂತರದ ಬಡವರನ್ನು ಕಡೆಗಣಿಸಿರುವುದು ಮತ್ತು ಅವರ ಅವಶ್ಯಕತೆಗಳನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿರುವುದು

(3) ಕನ್ನಡವನ್ನು ಸಂಪೂರ್ಣವಾಗಿ ರಾಜ್ಯ ಭಾಷೆ ಮಾಡದೇ ಇರುವುದು

*The amendment was negatived*

MADAM SPEAKER :—I will now put the motion to the vote of the House : The question is :

> We, the members of the Karnataka Legislative Assembly assembled in this session, beg leave to thank the Governor for the Address delivered to the members of the Legislature on the 25th February 1974.

*The motion was adopted*

## BUSINESS OF THE HOUSE

MADAM SPEAKER : I have an announcement to make. At a meeting of the Business Advisory Committee held today, the 5th March 1974, the Committee decided that the House may transact the following business between 7th and 20th March 1974.

| | |
|---|---|
| 7th, 8th, and 11th March 1974. | (i) Ratification of constitution Thirty Second (Amendment) Bill. |
| | (ii) Voting of Demands for grants on account for the year 1974-75. |
| | (iii) Legislative Business |
| 12th 13th, 14th, 15th, 18th and 19th March 1974. | General discussion on Budget. |
| 20th March 1974 | Discussion and Voting of Supplementary Demands for Grants for the year 1973-74. |

On Saturdays, *i. e.*, 9th and 16th March 1974 the House will take up Non-official business as scheduled. Now the House will rise to meet tomorrow at 2 P.M.

*The House adjourned at Twenty minutes past Six of the clock to meet again at two of the Clock on Wednesday the 6th March 1974.*